ಸಂಪುಟ 2, ಸಂಚಿಕೆ 6

# ನ್ಯೂ ಇಂಡಿಯಾ ಸಮಾಚಾರ

ಸೆಪ್ಟೆಂಬರ್ 16-30, 2021
ಉಚಿತ ವಿತರಣೆಗಾಗಿ








# ಹೊಸ ಯುಗದ ಉದಯ

## ಭಾರತದ ಅಭಿವೃದ್ಧಿಯ ಅಮೃತ ಯಾತ್ರೆಗೆ ಮಾರ್ಗದರ್ಶನ ನೀಡುತ್ತಿರುವ ಹೊಸ ಪದ್ಧತಿ ಮತ್ತು ಆಚರಣೆಗಳು





# "ಭಾರತದ ಯುವ ಜನತೆ ದೊಡ್ಡ ರೀತಿಯಲ್ಲಿ ಏನಾದರೂ ಹೊಸದನ್ನು ಮಾಡಲು ಬಯಸುತ್ತಾರೆ"



ದೇಶವನ್ನು ಸ್ವಾವಲಂಬಿಯನ್ನಾಗಿಸುವ ಅಭಿಯಾನದಲ್ಲಿ, ಯುವಜನರು ಇಂದು ಹೊಸ ಹೊಸ ಪ್ರದೇಶಕ್ಕೆ ಕಾಲಿಡುತ್ತಿದ್ದಾರೆ, ಅವರ ಗಮ್ಯಸ್ಥಾನಗಳು, ಗುರಿಗಳು ಮತ್ತು ಆಕಾಂಕ್ಷೆಗಳು ಹೊಸದಾಗಿವೆ. ಅದೇ ಸಮಯದಲ್ಲಿ, ಸ್ವಚ್ಛತಾ ಅಭಿಯಾನ ಮತ್ತು ತ್ಯಾಜ್ಯದಿಂದ ಸಂಪತ್ತು ಸೃಷ್ಟಿಸುವ ಹಳ್ಳಿಗಳ ಚಿಂತನೆಯು ಎಲ್ಲರಿಗೂ ಸ್ಫೂರ್ತಿಯಾಗಿದೆ. ಸಮಗ್ರ ಅಭಿವೃದ್ಧಿಗೆ ಪ್ರಯತ್ನಗಳು ನಡೆಯುತ್ತಿವೆ. ಒಂದೆಡೆ ಕ್ರೀಡೆಗಳು ನಮ್ಮ ಸಂಸ್ಕೃತಿಯ ಒಂದು ಭಾಗವಾಗುತ್ತಿದ್ದರೆ ಇನ್ನೊಂದೆಡೆ ನಮ್ಮ ಪ್ರಾಚೀನ ಭಾಷೆ ಸಂಸ್ಕೃತವನ್ನು ಜನಪ್ರಿಯಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಮಾತನಾಡಿದರು. ಕಾರ್ಯಕ್ರಮದ ಒಂದು ಆಯ್ದ ಭಾಗ:

- **ಕ್ರೀಡೆಗಳು:** ಆಟದ ಮೇಲಿನ ಅಪರಿಮಿತ ಪ್ರೀತಿಯು ಮೇಜರ್ ಧ್ಯಾನ್ ಚಂದ್ ಅವರಿಗೆ ಗೌರವ ಸಲ್ಲಿಸುವ ಒಂದು ಮಾರ್ಗವಾಗಿದೆ. ಸುಮಾರು 41 ವರ್ಷಗಳ ನಂತರ, ಭಾರತದ ಯುವಕರು, ಆಕೆಯ ಪುತ್ರರು ಮತ್ತು ಪುತ್ರಿಯರು ಮತ್ತೊಮ್ಮೆ ನಮ್ಮ ಹಾಕಿಗೆ ಹುರುಪು ತುಂಬಿದರು. ನಾಲ್ಕು ದಶಕಗಳ ನಂತರ ಭಾರತವು ಒಲಿಂಪಿಕ್ಸ್‌ನಲ್ಲಿ ಹಾಕಿ ಪದಕ ಗೆದ್ದಿತು. ಯುವಜನರು ಕ್ರೀಡೆಗಳಿಗೆ ಸಂಬಂಧಿಸಿದ ಸಾಧ್ಯತೆಗಳನ್ನು ನೋಡುತ್ತಿದ್ದಾರೆ. ಎಲ್ಲರ ಪ್ರಯತ್ನದಿಂದ, ಭಾರತವು ಕ್ರೀಡೆಯಲ್ಲಿ ಅರ್ಹವಾದ ಎತ್ತರವನ್ನು ಸಾಧಿಸಲು ಸಾಧ್ಯವಾಗುತ್ತದೆ.
- **ಯುವಜನತೆ:** ಯುವಜನರ ಮನಸ್ಸು ಪರಿವರ್ತನೆಗೊಂಡಿದೆ. ಇಂದಿನ ಯುವ ಮನಸ್ಸುಗಳು ಏನಾದರೂ ಹೊಸದನ್ನು ಮಾಡಲು ಬಯಸುತ್ತವೆ. ಮತ್ತು ಒಮ್ಮೆ ಯುವಕನೊಬ್ಬ ಮನಸ್ಸಿನಲ್ಲಿ ನಿರ್ಧರಿಸಿದರೆ, ಸಾಧಿಸುವ ಯಾವ ಅವಕಾಶವನ್ನೂ ಬಿಡುವುದಿಲ್ಲ. ಬಾಹ್ಯಾಕಾಶ ವಲಯದ ಮುಕ್ತತೆಯೊಂದಿಗೆ, ಯುವಕರು ಹೊಸ ಸಾಧ್ಯತೆಗಳನ್ನು ಅನ್ವೇಷಿಸುತ್ತಿದ್ದಾರೆ. ಹೊಸ ಪ್ರದೇಶಗಳಲ್ಲಿ ಸ್ಟಾರ್ಟಪ್‌ಗಳನ್ನು ಸೃಷ್ಟಿಸುವ ಮೂಲಕ ಯುವಕರು ತಮ್ಮ ಕನಸುಗಳಿಗೆ ರೆಕ್ಕೆ ನೀಡುತ್ತಿದ್ದಾರೆ. ನವೋದ್ಯಮದ ಸಂಸ್ಕೃತಿ ಸಣ್ಣ ಪಟ್ಟಣಗಳಿಗೂ ವಿಸ್ತರಿಸುತ್ತಿದೆ, ಇದು ಉಜ್ವಲ ಭವಿಷ್ಯದ ಸಂಕೇತವಾಗಿದೆ.
- **ಸಂಸ್ಕೃತ ಭಾಷೆ:** ಸಂಸ್ಕೃತ ಭಾಷೆ ಸವಿಯಾದದುದು ಮತ್ತು ಸರಳವಾದುದು. ಅದರ ಆಲೋಚನೆಗಳು ಮತ್ತು ಸಾಹಿತ್ಯದ ಮೂಲಕ, ಸಂಸ್ಕೃತವು ಜ್ಞಾನ ಮತ್ತು ರಾಷ್ಟ್ರೀಯ ಏಕತೆಯನ್ನು ಬೆಳೆಸಲು ಸಹಾಯ ಮಾಡುತ್ತದೆ. ನಮ್ಮ ಪರಂಪರೆಯನ್ನು ಪಾಲಿಸುವುದು ಮತ್ತು ಅದನ್ನು ಹೊಸ ಪೀಳಿಗೆಗೆ ಮುಂದುವರಿಸುವುದು ನಮ್ಮೆಲ್ಲರ ಸಾಮೂಹಿಕ ಕರ್ತವ್ಯವಾಗಿದೆ. ವಿದೇಶದಲ್ಲಿ ಸಂಸ್ಕೃತ ಕಲಿಸುವ ಜನರ ಸ್ಫೂರ್ತಿದಾಯಕ ಕಥೆಗಳ ಬಗ್ಗೆ ಹೇಳಲು #CelebratingSanskrit ಹಂಚಿಕೊಳ್ಳಿ.
- **ಕೌಶಲ್ಯ ಅಭಿವೃದ್ಧಿ:** ನಮ್ಮ ಸಂತರು ಮತ್ತು ದಾರ್ಶನಿಕರು ಸಾವಿರಾರು ವರ್ಷಗಳಿಂದ ಕೌಶಲ್ಯ ಮತ್ತು ಮಾನದಂಡಗಳಿಗೆ ಒತ್ತು ನೀಡಿದ್ದಾರೆ. ವಿಶ್ವದ ಸೃಜನಶೀಲ ಶಕ್ತಿಯ ಸಂಕೇತ ಭಗವಾನ್ ವಿಶ್ವಕರ್ಮ. ನಿಮ್ಮ ಪ್ರತಿಭೆಯನ್ನು ಗೌರವಿಸಿ ಮತ್ತು ಕೌಶಲ್ಯ ಹೊಂದಲು ಶ್ರಮಿಸಿ. ನಾವು ಸಮಾಜಕ್ಕೆ ಪ್ರಯೋಜನವಾಗುವಂತಹದನ್ನು ಸೃಷ್ಟಿಸಿದರೆ, ನಮ್ಮ ವಿಶ್ವಕರ್ಮ ಪೂಜೆ ಫಲಪ್ರದವಾಗುತ್ತದೆ.
- **ಸ್ವಚ್ಛತೆ:** ಹಲವು ವರ್ಷಗಳಿಂದ 'ಸ್ವಚ್ಛ ಭಾರತ ಶ್ರೇಯಾಂಕ'ದಲ್ಲಿ ಅಗ್ರಸ್ಥಾನದಲ್ಲಿರುವ ಇಂದೋರ್ ದೇಶದ ಮೊದಲ ವಾಟರ್ ಪ್ಲಸ್ ನಗರವಾಗಿದೆ. 'ವಾಟರ್ ಪ್ಲಸ್ ಸಿಟಿ' ಎಂದರೆ ಕೊಳಚೆ ನೀರನ್ನು ಸಂಸ್ಕರಿಸದೆ ಸಾರ್ವಜನಿಕ ಜಲಮೂಲಗಳಿಗೆ ಬಿಡದಿರುವುದು. ವಾಟರ್ ಪ್ಲಸ್ ನಗರಗಳು ದೇಶದಲ್ಲಿ ಸ್ವಚ್ಛತಾ ಅಭಿಯಾನವನ್ನು ಮುಂದುವರಿಸುತ್ತವೆ.
- **ಸುಖೇತ್ ಮಾದರಿ:** ಮಧುಬನಿಯ ಡಾ.ರಾಜೇಂದ್ರ ಪ್ರಸಾದ್ ಕೃಷಿ ವಿಶ್ವವಿದ್ಯಾಲಯ ಮತ್ತು ಸ್ಥಳೀಯ ಕೃಷಿ ವಿಜ್ಞಾನ ಕೇಂದ್ರ ಜಂಟಿಯಾಗಿ ಸುಖೇತ್ ಮಾದರಿಯನ್ನು ಅಭಿವೃದ್ಧಿಪಡಿಸಿವೆ. ಈ ಮಾದರಿಯಲ್ಲಿ, ಹಸುವಿನ ಸಗಣಿ ಮತ್ತು ಇತರ ಮನೆಯ ತ್ಯಾಜ್ಯಗಳನ್ನು ಹಳ್ಳಿಗಳ ರೈತರಿಂದ ಸಂಗ್ರಹಿಸಲಾಗುತ್ತದೆ ಮತ್ತು ಪ್ರತಿಯಾಗಿ, ಗ್ರಾಮಸ್ಥರಿಗೆ ಹಣವನ್ನು ನೀಡಲಾಗುತ್ತದೆ. ಇದರಿಂದಾಗಿ ಗ್ರಾಮವು ಮಾಲಿನ್ಯ ಮತ್ತು ಕೊಳಕಿನಿಂದ ಮುಕ್ತವಾಗಿದೆ ಮತ್ತು ಸಾವಯವ ಗೊಬ್ಬರವನ್ನು ಸಹ ಪಡೆಯುತ್ತಿದೆ. ಇದು ಸ್ವಾವಲಂಬನೆಯ ಮೂಲವಾಗಿದೆ.
- **ತ್ಯಾಜ್ಯದಿಂದ ಸಂಪತ್ತು:** ತಮಿಳುನಾಡಿನ ಶಿವಗಂಗಾ ಜಿಲ್ಲೆಯ ಕಾಂಜಿರಂಗಲ್ ಪಂಚಾಯತ್ ಸ್ಥಳೀಯ ಜನರ ಸಹಯೋಗದೊಂದಿಗೆ ತಮ್ಮ ಗ್ರಾಮದಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಆರಂಭಿಸಿದೆ. ವಿದ್ಯುತ್ ಉತ್ಪಾದಿಸಲು ಇಡೀ ಗ್ರಾಮದಿಂದ ಕಸವನ್ನು ಸಂಗ್ರಹಿಸಲಾಗುತ್ತದೆ ಮತ್ತು ಉಳಿದ ಉತ್ಪನ್ನಗಳನ್ನು ಕೀಟನಾಶಕವಾಗಿ ಮಾರಾಟ ಮಾಡಲಾಗುತ್ತದೆ. ಒಂದು ಸಣ್ಣ ಪಂಚಾಯತ್ ನಮ್ಮೆಲ್ಲರಿಗೂ ಏನನ್ನಾದರೂ ಹೊಸದು ಮಾಡಲು ಸ್ಫೂರ್ತಿಯಾಗಿದೆ.

ಈ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಮನ್ ಕಿ ಬಾತ್‌ಗೆ ಕೇಳಬಹುದು.

# ನ್ಯೂ ಇಂಡಿಯಾ ಸಮಾಚಾರ

ಸಂಪುಟ 2, ಸಂಚಿಕೆ 05 ಸೆಪ್ಟೆಂಬರ್ 1-15, 2021



**ಸಂಪಾದಕರು**
**ಜೈದೀಪ್ ಭಟ್ನಾಗರ್**
ಪ್ರಧಾನ ಮಹಾನಿರ್ದೇಶಕರು
ಪಿಐಬಿ, ನವದೆಹಲಿ

**ಸಲಹಾ ಸಂಪಾದಕರು**
**ಸಂತೋಷ್ ಕುಮಾರ್**

**ತಂಡ**
ವಿಭೋರ್ ಶರ್ಮಾ
ಚಂದನ್ ಕುಮಾರ್ ಚೌಧರಿ
ಸುಮಿತ್ ಕುಮಾರ್ (ಇಂಗ್ಲಿಷ್)
ಅನಿಲ್ ಪಟೇಲ್ (ಗುಜರಾತಿ)
ಕೋಟೆರುಶ್ರಾವಣಿ (ತೆಲುಗು),
ನದೀಮ್ ಅಹ್ಮದ್ (ಉರ್ದು),
ಸೋನಿತ್ ಕುಮಾರ್ ಗೋಸ್ವಾಮಿ (ಅಸ್ಸಾಮಿ),
ವಿನಯಾ ಪಿ.ಎಸ್. (ಮಲಯಾಳಂ)

**ವಿನ್ಯಾಸ ತಂಡ**
ಶ್ಯಾಮ್ ಶಂಕರ್ ತಿವಾರಿ
ರವೀಂದ್ರ ಕುಮಾರ್ ಶರ್ಮಾ
ದಿವ್ಯಾ ತಲ್ವಾರ್
ಅಭಯ್ ಗುಪ್ತಾ



**ಮುದ್ರಣ ಮತ್ತು ಪ್ರಕಟಣೆ**
**ಸತ್ಯೇಂದ್ರ ಪ್ರಕಾಶ್**
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಮತ್ತು ಕಮ್ಯುನಿಕೇಶನ್ ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್, 10ನೇ ಮಹಡಿ, ನವದೆಹಲಿ-ಫರೀದಾಬಾದ್ ಬಾರ್ಡರ್
ಎನ್‌ಹೆಚ್-1 ಫರೀದಾಬಾದ್-121003



**ಸಂಪರ್ಕ ವಿಳಾಸ ಮತ್ತು ಇಮೇಲ್**
**ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಕಮ್ಯುನಿಕೇಷನ್**
**2 ನೇ ಮಹಡಿ, ಸೂಚನಾ ಭವನ,**
**ನವದೆಹಲಿ -110003**
response-nis@pib.gov.in



RNI No. : DELKAN/2020/78828


## ಒಳಪುಟಗಳಲ್ಲಿ

### ಉದಯೋನ್ಮುಖ ನವ ಭಾರತದಲ್ಲಿ ಹೊಸ ಪರಂಪರೆ




**ಮುಖಪುಟ ಲೇಖನ** ಹೊಸ ಪರಂಪರೆ ಮತ್ತು ಅಭ್ಯಾಸಗಳನ್ನು ಅಳವಡಿಸಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳು ಅದರ ಕಾರ್ಯಕ್ಷಮತೆಯ ಲಕ್ಷಣವಾಗಿವೆ ಪುಟಗಳು 10-19





ವ್ಯಕ್ತಿತ್ವ
ಪಂಡಿತ್ ದೀನದಯಾಳ್ ಉಪಾಧ್ಯಾಯ
**ಅಂತ್ಯೋದಯದ ಹರಿಕಾರ** ಪುಟಗಳು 06-07

**ಒಲಿಂಪಿಕ್ಸ್ ನಂತರ, ಈಗ ಪ್ಯಾರಾಲಿಂಪಿಕ್ಸ್‌ನಲ್ಲಿ ಇತಿಹಾಸ ಸೃಷ್ಟಿಸಿದ ಭಾರತ**





ಎಲ್ಲ ಅಡೆತಡೆಗಳನ್ನು ಮೀರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಹೆಮ್ಮೆ ತಂದ ಭಾರತೀಯ ಕ್ರೀಡಾಪಟುಗಳು ಪುಟಗಳು 20-23

ಸುದ್ದಿ ತುಣುಕುಗಳು ಪುಟಗಳು 04-05

ಸಂಜ್ಞಾ ಭಾಷಾ ವಿಶ್ವ ದಿನ
ಕಿವುಡ ಮತ್ತು ಮೂಗರನ್ನು ಸಶಕ್ತಗೊಳಿಸುತ್ತಿರುವ ಸಂಜ್ಞಾ ಭಾಷೆ ಪುಟಗಳು 08-09

ಆತ್ಮನಿರ್ಭರ ಕೃಷಿ
ರಾಷ್ಟ್ರದ ಹೆಮ್ಮೆಯಾಗುತ್ತಿರುವ ಸಣ್ಣ ರೈತರು ಪುಟಗಳು 24-26

ಸಂಪುಟ ತೀರ್ಮಾನಗಳು
ಕೃಷಿಯನ್ನು ಉತ್ತೇಜಿಸಲು ಸರ್ಕಾರದಿಂದ ಮಹತ್ವದ ಕ್ರಮಗಳು ಪುಟಗಳು 27-28

ಪ್ರವಾಸೋದ್ಯಮ ಅಭಿವೃದ್ಧಿ
ಶ್ರೀ ಸೋಮನಾಥ ದೇವಾಲಯ- ಭಯೋತ್ಪಾದನೆಯ ಮೇಲೆ ನಂಬಿಕೆಯ ವಿಜಯದ ಸಂಕೇತ ಪುಟಗಳು 29-31

ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆ ಪುಟಗಳು 32-33

ಕೋವಿಡ್- 19 ವಿರುದ್ಧ ಸಮರ ಪುಟಗಳು 34-35

ಸಕಾರಾತ್ಮಕ ಕ್ರಮ ಪುಟ 40





**ಸ್ವಾತಂತ್ರ್ಯ ಹೋರಾಟದ ಮೈಲಿಗಲ್ಲುಗಳು**
ಅಮೃತ ಮಹೋತ್ಸವ ವಿಭಾಗದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂದಾಳುಗಳ ಬಗ್ಗೆ ಓದಿ- ಭಗತ್ ಸಿಂಗ್, ವಿಠಲಭಾಯಿ ಪಟೇಲ್, ಭೋಗೇಶ್ವರಿ ಫುಕನಾನಿ ಪುಟಗಳು 36-39

# ಸಂಪಾದಕೀಯ

ಎಲ್ಲರಿಗೂ ನಮಸ್ಕಾರ,

ಭಾರತದ ನಿಜವಾದ ಗುರುತನ್ನು ಭವಿಷ್ಯದ ಪೀಳಿಗೆಗೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಏಕೆಂದರೆ ದೇಶವನ್ನು ಸರ್ಕಾರದಿಂದ ಮಾತ್ರವಲ್ಲದೆ ಪ್ರತಿಯೊಬ್ಬ ಪ್ರಜೆಯ ಮೌಲ್ಯಗಳಿಂದಲೂ ಕಟ್ಟಲಾಗಿದೆ. ನಾಗರಿಕರಾಗಿ ನಮ್ಮ ನಡವಳಿಕೆಯು ನವ ಭಾರತದ ಸುವರ್ಣ ಭವಿಷ್ಯವನ್ನು ರೂಪಿಸುವ ದಿಕ್ಕನ್ನು ನಿರ್ಧರಿಸುತ್ತದೆ. ತ್ವರಿತ ಅಭಿವೃದ್ಧಿಯನ್ನು ಖಾತ್ರಿಪಡಿಸಿಕೊಳ್ಳಲು ಸರ್ಕಾರ ಕಳೆದ ಏಳು ವರ್ಷಗಳಲ್ಲಿ ಯಾವುದೇ ಅವಕಾಶಗಳನ್ನೂ ಬಿಟ್ಟಿಲ್ಲ. ಸರ್ಕಾರ ಮತ್ತು ಜನರ ಭಾಗವಹಿಸುವಿಕೆಯೊಂದಿಗೆ ದೇಶದಲ್ಲಿ ಹೊಸ ಪದ್ಧತಿಗಳು ಮತ್ತು ಆಚರಣೆಗಳು ಹುಟ್ಟಿಕೊಳ್ಳುತ್ತಿವೆ.

ಹೊಸ ಅಭ್ಯಾಸಗಳು ಸುಲಭವಾಗಿ ಸ್ವೀಕಾರವಾಗುವುದಿಲ್ಲ. ಜನರು ಅವುಗಳನ್ನು ಪಾಲಿಸುವಂತೆ ಮಾಡಲು ಬಲವಾದ ಇಚ್ಛಾಶಕ್ತಿ ಮತ್ತು ದೃಢ ನಿಶ್ಚಯದ ಅಗತ್ಯವಿರುತ್ತದೆ. ಇಂದು ಭಾರತವು ಕೋವಿಡ್ ವಿರುದ್ಧದ ಯುದ್ಧವನ್ನು ಗೆಲ್ಲುತ್ತಿದ್ದರೆ ಅದಕ್ಕೆ ಸಾಮೂಹಿಕ ಪ್ರಯತ್ನಗಗಳು ಕಾರಣ. ಕೇವಲ ಸರ್ಕಾರ ಮಾತ್ರ ದೇಶದಲ್ಲಿ ಇಂತಹ ದೊಡ್ಡ ಅಭಿಯಾನಗಳನ್ನು ನಡೆಸಲು ಸಾಧ್ಯವಿಲ್ಲ. ಯಾವುದೇ ಕಾರ್ಯಕ್ರಮದ ಯಶಸ್ಸಿಗೆ ಜನರ ಭಾಗವಹಿಸುವಿಕೆ ಬಹಳ ಮುಖ್ಯ. ಪ್ರತಿಯೊಂದು ಯೋಜನೆಯ ಲಾಭವನ್ನು ಅತ್ಯಂತ ದುರ್ಬಲ ಮತ್ತು ತಳ ವರ್ಗಕ್ಕೆ ತಲುಪಿಸುವುದು ಸರ್ಕಾರದ ನೀತಿ ಮತ್ತು ಅಭ್ಯಾಸದ ಭಾಗವಾಗಿದೆ. ಅಂತಹ ನಿಸ್ವಾರ್ಥ ಸೇವೆಯು ಅಂತ್ಯೋದಯ ಪರಿಕಲ್ಪನೆಯಲ್ಲಿ ಅಂತರ್ಗತವಾಗಿದೆ. ಅಂತ್ಯೋದಯ ಪರಿಕಲ್ಪನೆಯ ಹರಿಕಾರ ಎಂದು ಕರೆಯಲಾಗುವ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಬಗ್ಗೆ ಲೇಖನ ಈ ಸಂಚಿಕೆಯಲ್ಲಿದೆ.

ಸರ್ಕಾರದ ಪ್ರಾಯೋಗಿಕ ದೃಷ್ಟಿಕೋನವು ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಾತ್ರಿಪಡಿಸಿದೆ. ಇಂದು ಜನರು ತಮ್ಮ ಚುನಾಯಿತ ಪ್ರತಿನಿಧಿಗಳು ಮತ್ತು ಸಚಿವರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ಸರ್ಕಾರಿ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸೇವೆಗಳ ಕುರಿತು ಪ್ರತಿಕ್ರಿಯೆ ನೀಡಲು ಬಯಸುತ್ತಾರೆ. ವಾಸ್ತವವಾಗಿ, ಪ್ರತಿಯೊಬ್ಬ ನಾಗರಿಕನು ಹೊಸ ತಾಂತ್ರಿಕ ವಿಧಾನಗಳನ್ನು ಹೊಂದಿದ್ದಾನೆ ಮತ್ತು ಸಕ್ರಿಯನಾಗಿದ್ದಾನೆ. ಸರ್ಕಾರದ ಕೆಲಸದಲ್ಲಿ ಭಾಗವಹಿಸಲು ಬಯಸುತ್ತಾನೆ. ಈ ಸನ್ನಿವೇಶದಲ್ಲಿ, ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತೀಯ ಕ್ರೀಡಾಪಟುಗಳ ಅತ್ಯುತ್ತಮ ಪ್ರದರ್ಶನ, ಬೃಹತ್ ಪ್ರಮಾಣದಲ್ಲಿ ಸಂಕೇತ ಭಾಷೆಯ ಪ್ರಚಾರ ಮತ್ತು ಕ್ರಾಂತಿಕಾರಿ ಕೃಷಿ ಸುಧಾರಣೆಗಳ ಬಗೆಗಿನ ಲೇಖನಗಳು ಈ ಸಂಚಿಕೆಯ ಭಾಗವಾಗಿವೆ. ಶ್ರೀ ಸೋಮನಾಥ ದೇವಾಲಯದ ವೈಭವವನ್ನು ಹೆಚ್ಚಿಸುವ ಪ್ರಯತ್ನಗಳು, ಅಮೃತ ಮಹೋತ್ಸವ ವಿಭಾಗದಲ್ಲಿ ಭಾರತದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಕಥೆಗಳು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಮನ್ ಕಿ ಬಾತ್ ಈ ಸಂಚಿಕೆಯ ಇತರ ಪ್ರಮುಖ ಆಕರ್ಷಣೆಗಳಾಗಿವೆ.

ಕೋವಿಡ್ ಶಿಷ್ಟಾಚಾರವನ್ನು ಪಾಲಿಸುವ ಮೂಲಕ ಸುರಕ್ಷಿತವಾಗಿರಿ ಮತ್ತು ನಿಮ್ಮ ಸಲಹೆಗಳನ್ನು ನಮಗೆ ಬರೆದು ತಿಳಿಸಿ.

(ಜೈದೀಪ್ ಭಟ್ನಾಗರ್)

ವಿಳಾಸ: ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್,
ಎರಡನೇ ಮಹಡಿ, ಸೂಚನಾ ಭವನ,
ನವದೆಹಲಿ - 110003
ಇ-ಮೇಲ್: response-nis@pib.gov.in

# ಅಂಚೆ ಪೆಟ್ಟಿಗೆ




ಇಂತಹ ಉತ್ತಮ ಮಾಹಿತಿಪೂರ್ಣ ಪತ್ರಿಕೆಯನ್ನು ಪ್ರಕಟಿಸುತ್ತಿರುವುದಕ್ಕೆ ನ್ಯೂ ಇಂಡಿಯಾ ಸಮಾಚಾರದ ತಂಡಕ್ಕೆ ಧನ್ಯವಾದಗಳು. ದಿ ನ್ಯೂ ಇಂಡಿಯಾ ಸಮಾಚಾರ್ ಒಂದು ಮಹತ್ವದ ನಿಯತಕಾಲಿಕವಾಗಿದ್ದು, ಇದು ಭಾರತ ಮತ್ತು ಅದರ ಅಭಿವೃದ್ಧಿಯ ಬಗ್ಗೆ ಇತ್ತೀಚಿನ ಮಾಹಿತಿ ಮತ್ತು ಅಂಕಿಅಂಶಗಳನ್ನು ನಮಗೆ ತಿಳಿಸುತ್ತದೆ ಮತ್ತು ಅರಿವು ಮೂಡಿಸುತ್ತದೆ. ಪತ್ರಿಕೆಯು ವ್ಯಾಪಕವಾದ ಲೇಖನಗಳನ್ನು ಒಳಗೊಂಡಿರುವುದು ಉತ್ತಮವಾಗಿದೆ.

**ಪ್ರೊ. ಸುಬೀರ್ ಸಿನ್ಹಾ**
**subirsinha.2009@gmail.com**

## ನಿಮ್ಮ ಸಲಹೆಗಳನ್ನು ಕಳುಹಿಸಿ

**ಸಂಪರ್ಕ ವಿಳಾಸ ಮತ್ತು ಇ-ಮೇಲ್:**

ಕೊಠಡಿ ಸಂಖ್ಯೆ 278,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್,
ಎರಡನೇ ಮಹಡಿ,
ಸೂಚನಾ ಭವನ, ನವದೆಹಲಿ - 110003

**response-nis@pib.gov.in**

ನಾನು ದುಬೈ ನಿವಾಸಿ ಮತ್ತು "ನ್ಯೂ ಇಂಡಿಯಾ ಸಮಾಚಾರ್" ನ ನಿಯಮಿತ ಓದುಗ. ಇಮೇಲ್ ಮೂಲಕ ಓದಬಹುದಾದ ಈ ಪತ್ರಿಕೆಯು ಭಾರತ ಸರ್ಕಾರದ ಒಂದು ಉತ್ತಮ ಉಪಕ್ರಮವಾಗಿದೆ. ಇದು ಭಾರತದ ಜನರ ಸ್ಥಿತಿಯನ್ನು ಸುಧಾರಿಸಲು ಮತ್ತು ದೇಶದ ಸಮಗ್ರ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ವಿವಿಧ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುತ್ತಿದೆ. ನ್ಯೂ ಇಂಡಿಯಾ ಸಮಾಚಾರ ತಂಡಕ್ಕೆ ಅಭಿನಂದನೆಗಳು ಮತ್ತು ಪತ್ರಿಕೆ ಮತ್ತು ನಮ್ಮ ಭವ್ಯ ಭಾರತಕ್ಕೆ ಯಶಸ್ವಿ ಭವಿಷ್ಯವನ್ನು ಹಾರೈಸುತ್ತೇವೆ! ಜೈ ಹಿಂದ್!

**ಸಿಎ ಸಂಜೀತ್ ಕುಮಾರ್**
**casanjeetkumar@gmail.com**

ನ್ಯೂ ಇಂಡಿಯಾ ಸಮಾಚಾರ ಪತ್ರಿಕೆಯ ಮೂಲಕ ನಮ್ಮ ಸರ್ಕಾರದ ಉಪಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಹೊಸ ಹೊಸ ಮಾಹಿತಿಯನ್ನು ಪಡೆಯುತ್ತಿರುವುದು ಸಂತೋಷ ತಂದಿದೆ. ನಾಗರಿಕರು ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಇದು ನಿಜವಾಗಿಯೂ ಸಹಾಯ ಮಾಡುತ್ತಿದೆ, ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ಈ ಉಪಕ್ರಮ ನನಗೆ ಇಷ್ಟವಾಯಿತು.

**ವಿಜಯಗಣೇಶ್ ಸೆಲ್ವಕುಮಾರ್**
**vijayganesh.s1996@gmail.com**

ಪತ್ರಿಕೆಯು, ಓದುಗರಿಂದ, ಓದುಗರಿಗಾಗಿ. ಓದುಗರಿಗೋಸ್ಕರ ಇದೆ. ನ್ಯೂ ಇಂಡಿಯಾ ಸಮಾಚಾರ್ ನಿರಂತರವಾಗಿ ವಿಕಸನಗೊಳ್ಳಲಿ ಮತ್ತು ಪ್ರಮುಖ ಸ್ಥಾನದಲ್ಲಿ ಮುಂದುವರಿಯಲಿ.

**ಟಿ.ಎಸ್.ಕಾರ್ತಿಕ್**
**tskarthik13@gmail.com**

ನಾನೊಬ್ಬ ಹೈಯರ್ ಸೆಕೆಂಡರಿ ವಿದ್ಯಾರ್ಥಿ. ಈ ಪತ್ರಿಕೆ ನನಗೆ ಮೋಡಿ ಮಾಡಿದೆ. ನಾನು ವಾಸ್ತವ ಲೇಖನಗಳನ್ನು ಹಾಗೂ ವಾಸ್ತವಾಂಶಗಳನ್ನು ಬರೆಯಲು ಇಷ್ಟಪಡುತ್ತೇನೆ. ನನ್ನ ದೃಷ್ಟಿಕೋನವನ್ನು ವಿಸ್ತರಿಸುವ ಮೂಲಕ ನನ್ನ ಬರವಣಿಗೆಯ ಆಸಕ್ತಿಯನ್ನು ಮುಂದುವರಿಸಲು ನ್ಯೂ ಇಂಡಿಯಾ ಸಮಾಚಾರವು ಸಹಾಯ ಮಾಡುತ್ತಿದೆ. ಮತ್ತೊಮ್ಮೆ ಪತ್ರಿಕೆಗೆ ಧನ್ಯವಾದಗಳು.

**krishnapriya2409@gmail.com**

# ಅಸಂಘಟಿತ ವಲಯದ 38 ಕೋಟಿಗೂ ಹೆಚ್ಚು ಕಾರ್ಮಿಕರ ಹಿತದೃಷ್ಟಿಯಿಂದ 'ಇ-ಶ್ರಮ' ಪೋರ್ಟಲ್ ಆರಂಭ




ಸ್ವಾತಂತ್ರ್ಯದ 7 ದಶಕಗಳ ನಂತರವೂ, ದೇಶದಲ್ಲಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸ್ಪಷ್ಟ ಅಂದಾಜು ಇಲ್ಲ. ಒಂದು ಅಂದಾಜಿನ ಪ್ರಕಾರ, ಅಂತಹ ಕೆಲಸಗಾರರ ಸಂಖ್ಯೆ 38 ಕೋಟಿಗಿಂತ ಹೆಚ್ಚಿದೆ. ಆದರೆ ಮಾಹಿತಿಯ ಕೊರತೆಯಿಂದಾಗಿ, ಅವರು ಸಂಘಟಿತ ವಲಯಕ್ಕೆ ಲಭ್ಯವಿರುವ ಕೇಂದ್ರ ಸರ್ಕಾರದ ಸಾಮಾಜಿಕ ಮತ್ತು ಭದ್ರತಾ ಯೋಜನೆಗಳ ಪ್ರಯೋಜನಗಳನ್ನು ಪಡೆಯುತ್ತಿಲ್ಲ. ಈ ಪರಿಸ್ಥಿತಿಯನ್ನು ಪರಿಹರಿಸುವಲ್ಲಿ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು 'ಇ-ಶ್ರಮ' ಪೋರ್ಟಲ್ ಅನ್ನು ಪ್ರಾರಂಭಿಸಿದೆ, ಇದು ಅಸಂಘಟಿತ ವಲಯದ ಕಾರ್ಮಿಕರ ಡೇಟಾ ಮತ್ತು ಮಾಹಿತಿ ಸಂಗ್ರಹಣೆಗೆ ಸಹಾಯ ಮಾಡುತ್ತದೆ. ಕೆಲಸಗಾರರಿಗೆ ಇ-ಶ್ರಮ್ ಕಾರ್ಡ್ ನೀಡಲಾಗುತ್ತದೆ, ಇದರಲ್ಲಿ ಅವರಿಗೆ 12 ಸಂಖ್ಯೆಗಳ ವಿಶಿಷ್ಟ ಕೋಡ್ ನೀಡಲಾಗುತ್ತದೆ, ಅದು ಅವರ ಗುರುತನ್ನು ಸಕ್ರಿಯಗೊಳಿಸುತ್ತದೆ. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಕಾರ್ಮಿಕರು ಪೋರ್ಟಲ್‌ನಲ್ಲಿ ನೋಂದಾಯಿಸಲು ಅಗತ್ಯವಾದ ಎಲ್ಲಾ ನೆರವನ್ನು ನೀಡುತ್ತದೆ. ರಾಜ್ಯ ಸರ್ಕಾರ, ಕಾರ್ಮಿಕ ಸಂಘಟನೆಗಳು ಮತ್ತು ಸಾಮಾನ್ಯ ಸೇವಾ ಕೇಂದ್ರವು ಕಾರ್ಮಿಕರ ನೋಂದಣಿಗೆ ಸಹಾಯ ಮಾಡುತ್ತವೆ. ಯಾವುದೇ ಸಮಸ್ಯೆಯಿದ್ದಲ್ಲಿ, ಟೋಲ್-ಫ್ರೀ ಸಂಖ್ಯೆ 14434 ಗೆ ಕರೆ ಮಾಡುವ ಮೂಲಕ ಸಂಪೂರ್ಣ ಮಾಹಿತಿಯನ್ನು ಪಡೆಯಬಹುದು. ಈ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡ ಕೆಲಸಗಾರನು ಆಕಸ್ಮಿಕ ಸಾವನ್ನಪ್ಪಿದರೆ ಅಥವಾ ಶಾಶ್ವತ ದೈಹಿಕ ಅಂಗವೈಕಲ್ಯ ಉಂಟಾದರೆ 2 ಲಕ್ಷ ರೂ. ವಿಮೆಯ ಸುರಕ್ಷೆ ಒದಗಿಸಲಾಗುವುದು. ಭಾಗಶಃ ಅಂಗವೈಕಲ್ಯದ ಸಂದರ್ಭದಲ್ಲಿ 1 ಲಕ್ಷ ರೂ ವಿಮೆ ದೊರೆಯಲಿದೆ. "ಅಸಂಘಟಿತ ವಲಯದ ಕಾರ್ಮಿಕರು ಭಾರತದ ರಾಷ್ಟ್ರ ನಿರ್ಮಾಪಕರು ಮತ್ತು ಅವರ ಕಲ್ಯಾಣಕ್ಕಾಗಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಮುಂದುವರಿಸುವಲ್ಲಿ ಈ ಪೋರ್ಟಲ್ ಮತ್ತೊಂದು ಪ್ರಮುಖ ಹೆಜ್ಜೆಯಾಗಿದೆ." ಎಂದು ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದ್ರ ಯಾದವ್ ಹೇಳುತ್ತಾರೆ.

## ಅಪೌಷ್ಟಿಕತೆಯ ಬಗ್ಗೆ ಜಾಗೃತಿ ಮೂಡಿಸಲು 75 ಶಾಲೆಗಳಿಗೆ ಭೇಟಿ ನೀಡಲಿರುವ ಭಾರತೀಯ ಒಲಿಂಪಿಯನ್‌ಗಳು

ಟೋಕಿಯೊದಿಂದ ಹಿಂದಿರುಗಿದ ಭಾರತೀಯ ಒಲಿಂಪಿಯನ್‌ಗಳು ಮುಂದಿನ ಸ್ವಾತಂತ್ರ್ಯ ದಿನಾಚರಣೆಯವರೆಗೆ 75 ಶಾಲೆಗಳಿಗೆ ಭೇಟಿ ನೀಡಿ ಅಪೌಷ್ಟಿಕತೆಯ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ. ಪೌಷ್ಟಿಕಾಂಶದ ಮಹತ್ವದ ಬಗ್ಗೆ ಅರಿವು ಮೂಡಿಸುವ ಉಪಕ್ರಮವನ್ನು ಕೈಗೊಳ್ಳುವಂತೆ ಒಲಿಂಪಿಯನ್‌ಗಳಿಗೆ ಪ್ರಧಾನಿ ನರೇಂದ್ರ ಮೋದಿಯವರು ಮಾಡಿದ ವಿನಂತಿಗೆ ಅವರು ಈ ಹೆಜ್ಜೆ ಇರಿಸಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಿಂದ ಹಿಂದಿರುಗಿದ ಕ್ರೀಡಾಪಟುಗಳೊಂದಿಗಿನ ಸಂವಾದದಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯದ 75 ನೇ ವರ್ಷದ ಅಮೃತ್ ಮಹೋತ್ಸವದ ಪ್ರಯುಕ್ತ 75 ಶಾಲೆಗಳಿಗೆ ಭೇಟಿ ನೀಡುವಂತೆ ಮನವಿ ಮಾಡಿದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಅತ್ಯದ್ಭುತ ಪ್ರದರ್ಶನದ ಅತ್ಯಂತ ಸಕಾರಾತ್ಮಕ ಪರಿಣಾಮವೆಂದರೆ ಪೋಷಕರು ಈಗ ಮಕ್ಕಳನ್ನು ಕ್ರೀಡೆಗೆ ಪ್ರೋತ್ಸಾಹಿಸುತ್ತಿರುವುದರಿಂದ ಕ್ರೀಡೆಗಳ ಬಗೆಗಿನ ಮನೋಭಾವ ಬದಲಾಗಿದೆ. ಈ ಹಿನ್ನೆಲೆಯಲ್ಲಿ, ಅಪೌಷ್ಟಿಕತೆಯ ವಿರುದ್ಧ ಜಾಗೃತಿ ಮೂಡಿಸಲು ಒಲಿಂಪಿಯನ್‌ಗಳು ಶಾಲೆಗಳಿಗೆ ಭೇಟಿ ನೀಡಿದಾಗ ಮಕ್ಕಳಿಗೆ ಪ್ರೋತ್ಸಾಹ ದೊರೆಯುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.



## ನೇಕಾರರ ಸಬಲೀಕರಣಕ್ಕಾಗಿ ಇನ್ನೂ 10 ನಗರಗಳಲ್ಲಿ ಕೈಮಗ್ಗ ವಿನ್ಯಾಸ ಸಂಪನ್ಮೂಲ ಕೇಂದ್ರ ಸ್ಥಾಪನೆ

ಸುಮಾರು 116 ವರ್ಷಗಳ ಹಿಂದೆ 1905ರ ಆಗಸ್ಟ್, 7ರಂದು ಭಾರತದಲ್ಲಿ ಸ್ವದೇಶಿ ಚಳುವಳಿ ಆರಂಭವಾದಾಗ ಜನರು ಉತ್ಸಾಹದಿಂದ ಸ್ವದೇಶಿ ಕೈಮಗ್ಗ ಉತ್ಪನ್ನಗಳನ್ನು ಅಳವಡಿಸಿಕೊಂಡರು. ಆದರೆ ಸ್ವಾತಂತ್ರ್ಯದ ನಂತರ, ಕ್ರಮೇಣ ಅದರ ಪ್ರಾಮುಖ್ಯ ಮರೆಯಾಯಿತು. ಕೈಮಗ್ಗದ ಗತ ವೈಭವವನ್ನು ಪುನರುಜ್ಜೀವಗೊಳಿಸುವ ಉದ್ದೇಶದಿಂದ, ಪ್ರಧಾನಿ ನರೇಂದ್ರ ಮೋದಿ ಪ್ರತಿ ವರ್ಷ ಆಗಸ್ಟ್ 7 ರಂದು ಕೈಮಗ್ಗ ದಿನವನ್ನು ಆಚರಿಸಲು ಘೋಷಿಸಿದ್ದರು. ಕೈಮಗ್ಗ ವಲಯವು ಕಳೆದ 7 ವರ್ಷಗಳಲ್ಲಿ ಪ್ರಮುಖ ಪುನರುಜ್ಜೀವವನ್ನು ಕಂಡಿದೆ. ಏಕೆಂದರೆ ಜನರು "ಸ್ಥಳೀಯತೆಗೆ ಆದ್ಯತೆ" ನೀಡುತ್ತಿದ್ದಾರೆ. ಜವಳಿ ಸಚಿವಾಲಯವು ನೇಕಾರರು, ರಫ್ತುದಾರರು, ತಯಾರಕರು ಮತ್ತು ವಿನ್ಯಾಸಕಾರಿಗೆ ವಿನ್ಯಾಸ ಮಳಿಗೆಗಳ ಲಭ್ಯತೆಯನ್ನು ಸುಲಭಗೊಳಿಸಲು ಇನ್ನೂ 10 ವಿನ್ಯಾಸ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲಿದೆ. ಈ ಕೇಂದ್ರಗಳನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಶನ್ ಟೆಕ್ನಾಲಜಿ (NIFT) ನೆರವಿನಿಂದ ಸ್ಥಾಪಿಸಲಾಗುವುದು. ಈ ಕೇಂದ್ರಗಳನ್ನು ಕೋಲ್ಕತ್ತಾ, ಚೆನ್ನೈ, ಬೆಂಗಳೂರು, ಹೈದರಾಬಾದ್, ಕಣ್ಣೂರು, ಇಂದೋರ್, ನಾಗ್ಪುರ, ಮೀರತ್, ಭಾಗಲ್ಪುರ ಮತ್ತು ಪಾಣಿಪತ್ ನ ನೇಕಾರರ ಸೇವಾ ಕೇಂದ್ರಗಳಲ್ಲಿ ಸ್ಥಾಪಿಸಲಾಗುವುದು.



## ತಯಾರಿಕಾ ಕ್ಷೇತ್ರದಲ್ಲಿ ವಿಶ್ವದ ಎರಡನೇ ಆಕರ್ಷಕ ಕೇಂದ್ರವಾದ ಭಾರತ



ಕಳೆದ ವರ್ಷ ಕೋವಿಡ್ ಅವಧಿಯಲ್ಲಿ ಭಾರತದ ಆರ್ಥಿಕತೆಯು ಋಣಾತ್ಮಕ ಮಟ್ಟಕ್ಕೆ ಕುಸಿದಾಗ ದೇಶದ ಆರ್ಥಿಕತೆಯ ನಿರೀಕ್ಷೆಗಳ ಮೇಲೆ ಹಲವಾರು ಅನುಮಾನಗಳನ್ನು ಹುಟ್ಟುಹಾಕಲಾಗಿತ್ತು. ಅದರ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆತ್ಮ ನಿರ್ಭರ ಭಾರತದ ದೃಷ್ಟಿಕೋನವನ್ನು ಮಂಡಿಸಿದರು. ಇದರ ಪರಿಣಾಮವಾಗಿ ದೇಶವು ತಯಾರಿಕಾ ಕ್ಷೇತ್ರದಲ್ಲಿ ಯಶೋಗಾಥೆಯನ್ನು ಬರೆಯುತ್ತಿದೆ. ರಿಯಲ್ ಎಸ್ಟೇಟ್ ಕನ್ಸಲ್ಟೆಂಟ್ ಕುಶ್ಮನ್ ಮತ್ತು ವೇಕ್ ಫೀಲ್ಡ್ ನ ಇತ್ತೀಚಿನ ಜಾಗತಿಕ ತಯಾರಿಕಾ ಅಪಾಯ ಸೂಚ್ಯಂಕ 2021 ರ ವರದಿಯ ಪ್ರಕಾರ, ಚೀನಾ ನಂತರ ಭಾರತವು ವಿಶ್ವದಲ್ಲೇ ಎರಡನೇ ಆದ್ಯತೆಯ ಉತ್ಪಾದನಾ ಕೇಂದ್ರವಾಗಿದೆ. ಸೂಚ್ಯಂಕದ ಪ್ರಕಾರ ಭಾರತವು ಅಮೆರಿಕಕ್ಕಿಂತ ಮುಂದಿದೆ. ವರದಿಯ ಪ್ರಕಾರ, ತಯಾರಕರು ಯುಎಸ್ ಮತ್ತು ಏಷ್ಯಾ-ಪೆಸಿಫಿಕ್ ಪ್ರದೇಶಕ್ಕಿಂತ ಭಾರತದ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ. ಕಾರ್ಯಾಚರಣೆಯ ಪರಿಸ್ಥಿತಿಗಳು ಮತ್ತು ವೆಚ್ಚ-ದಕ್ಷತೆಯಿಂದಾಗಿ ಭಾರತವು ತಯಾರಿಕಾ ಕೇಂದ್ರವಾಗಿ ತನ್ನ ಆಕರ್ಷಣೆಯನ್ನು ಹೆಚ್ಚಿಸಿಕೊಂಡಿದೆ. ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ ಭಾರತ ಮತ್ತು ದಕ್ಷತೆ ಆಧಾರಿತ ಉತ್ತೇಜನೆಯಂತಹ ಉಪಕ್ರಮಗಳು ಭಾರತದಲ್ಲಿ ತಯಾರಿಕಾ ವಲಯಕ್ಕೆ ಪ್ರೋತ್ಸಾಹ ನೀಡಿವೆ, ಹಾಗೆಯೇ ಭಾರತ ಎಫ್‌ಡಿಐಗೆ ಆಕರ್ಷಕ ತಾಣವಾಗಿದೆ.

## ಸ್ಥಳೀಯ ಉತ್ಪನ್ನಗಳಿಗೆ ವರದಾನವಾದ ವಾರಾಣಸಿ ಬಂದರು




ಗಂಗಾ ನದಿಯ ಭಾರತದ ಮೊದಲ ಒಳನಾಡಿನ ಜಲಮಾರ್ಗದಲ್ಲಿ ಸುಮಾರು 3 ವರ್ಷಗಳ ಹಿಂದೆ, ಕೋಲ್ಕತ್ತಾದಿಂದ ಮೊದಲ ಕಂಟೇನರ್ ವಾರಾಣಸಿಗೆ ತಲುಪಿತು. ಇದು ಕೇವಲ ಸಾರಿಗೆ ಸೌಲಭ್ಯಗಳ ಆರಂಭ ಮಾತ್ರವಲ್ಲ, ಬದಲಿಗೆ 7 ದಶಕಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಜಲಮಾರ್ಗಗಳ ಅಗಾಧ ಸಾಮರ್ಥ್ಯವನ್ನು ಅನ್ಲಾಕ್ ಮಾಡಿತು. "ಒಂದು ಕಾಲದಲ್ಲಿ ನಮ್ಮ ದೇಶದ ನದಿಗಳಲ್ಲಿ ದೊಡ್ಡ ಹಡಗುಗಳು ಸಂಚರಿಸುತ್ತಿದ್ದವು, ಆದರೆ ಸ್ವಾತಂತ್ರ್ಯದ ನಂತರ, ಅದರ ಬಗ್ಗೆ ಗಮನ ಹರಿಸುವ ಬದಲು ಅವುಗಳನ್ನು ನಿರ್ಲಕ್ಷಿಸಲಾಯಿತು. ನಾವು ಈ ಅನ್ಯಾಯವನ್ನು ಕೊನೆಗೊಳಿಸುತ್ತಿದ್ದೇವೆ." ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ. ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಯೋಜನೆಯಾಗಿ ಆರಂಭವಾದ ವಾರಾಣಸಿ ಬಂದರು ಆಟಿಕೆಗಳು, ಸ್ಥಳೀಯ ಕರಕುಶಲ ವಸ್ತುಗಳು ಮತ್ತು ಇತರ ಸ್ಥಳೀಯ ಉತ್ಪನ್ನಗಳನ್ನು ಕಡಿಮೆ ಸಮಯ ಮತ್ತು ವೆಚ್ಚದಲ್ಲಿ ಜಲಮಾರ್ಗಗಳ ಮೂಲಕ ವಾರಾಣಸಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಸಾಗಿಸಲು ಅನುವು ಮಾಡಿಕೊಟ್ಟಿದೆ. ಸ್ಥಳೀಯ ವ್ಯಾಪಾರ ಮತ್ತು ಉದ್ಯೋಗದ ಸಾಧ್ಯತೆಗಳ ಹೊಸ ಬಾಗಿಲುಗಳನ್ನು ತೆರೆದಿದೆ. ಪ್ರಸ್ತುತ ಕೋಲ್ಕತ್ತಾ, ಜಾರ್ಖಂಡ್, ಬಿಹಾರ ಮತ್ತು ಉತ್ತರ ಪ್ರದೇಶಗಳು ರಾಷ್ಟ್ರೀಯ ಜಲಮಾರ್ಗ - 1 ರೊಂದಿಗೆ ಸಂಪರ್ಕ ಹೊಂದಿವೆ. ಭಾರತದಲ್ಲಿ 2014 ರವರೆಗೆ ಕೇವಲ 5 ರಷ್ಟಿದ್ದ ಜಲಮಾರ್ಗಗಳ ಸಂಖ್ಯೆ ಈಗ 111 ಕ್ಕೆ ಹೆಚ್ಚಿರುವುದು ಪ್ರಧಾನಿ ಮೋದಿಯವರ ಚಾಣಾಕ್ಷ ಚಿಂತನೆಯ ಫಲವಾಗಿದೆ.

## ಇ-ಸಂಜೀವಿನಿ: 1 ಕೋಟಿಗೂ ಹೆಚ್ಚು ಜನರಿಗೆ ವೈದ್ಯಕೀಯ ಸೇವೆ ಸೌಲಭ್ಯ

ಆಯುಷ್ಮಾನ್ ಭಾರತ್ ಅಡಿಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಆರಂಭಿಸಿದ ಟೆಲಿ-ಕನ್ಸಲ್ಟೇಶನ್ ಸೌಲಭ್ಯವಾದ ಇ-ಸಂಜೀವಿನಿ, ಕೋವಿಡ್ ಅವಧಿಯಲ್ಲಿಯೂ ರೋಗಿಗಳಿಗೆ ಆನ್‌ಲೈನ್‌ನಲ್ಲಿ ವೈದ್ಯಕೀಯ ಸಮಾಲೋಚನೆ ಸೌಲಭ್ಯಗಳನ್ನು ಪಡೆಯಲು ಅನುವು ಮಾಡಿಕೊಟ್ಟಿತು. ಈ ಆನ್‌ಲೈನ್ ಸೌಲಭ್ಯದ ಮೂಲಕ, ಇದುವರೆಗೆ ಒಂದು ಕೋಟಿಗೂ ಹೆಚ್ಚು ಜನರಿಗೆ ವೈದ್ಯಕೀಯ ಸಲಹೆಯನ್ನು ಒದಗಿಸಲಾಗಿದೆ. ಸಚಿವಾಲಯದ ಪ್ರಕಾರ, ಇ-ಸಂಜೀವಿನಿ ಮೂಲಕ ಪ್ರತಿದಿನ 75 ಸಾವಿರ ರೋಗಿಗಳಿಗೆ ಸೇವೆ ನೀಡಲಾಗುತ್ತಿದೆ. ಈ ಸೌಲಭ್ಯವು ಕಳೆದ 10 ತಿಂಗಳಲ್ಲಿ ಶೇ.1,000 ರಷ್ಟು ಹೆಚ್ಚಾಗಿದೆ. 2020 ರಲ್ಲಿ, 160,807 ಟೆಲಿ-ಸಮಾಲೋಚನಾ ಸೇವೆಗಳನ್ನು ಸೆಪ್ಟೆಂಬರ್ ವರೆಗೆ ಒದಗಿಸಲಾಯಿತು, ಆದರೆ ಜುಲೈ 2021 ರ ವೇಳೆಗೆ, ಇ-ಸಂಜೀವಿನಿ 16,50,822 ಟೆಲಿ-ಸಮಾಲೋಚನಾ ಸೇವೆಗಳನ್ನು ಒದಗಿಸಲು ಸಾಧ್ಯವಾಯಿತು. ಈ ಸೌಲಭ್ಯವು ದೇಶದ 701 ಜಿಲ್ಲೆಗಳಲ್ಲಿ ಲಭ್ಯವಿದೆ. ಇದರಲ್ಲಿ ಶೇ. 56 ರಷ್ಟು ಫಲಾನುಭವಿಗಳು ಮಹಿಳೆಯರು, ಶೇ.0.5 ರಷ್ಟು ಮಂದಿ 80 ವರ್ಷ ಮೇಲ್ಪಟ್ಟವರು ಮತ್ತು ಶೇ. 18 ರಷ್ಟು ರೋಗಿಗಳು 20 ವರ್ಷಕ್ಕಿಂತ ಮೇಲ್ಪಟ್ಟವರು. ■

### ನೀವೂ ಇದರ ಪ್ರಯೋಜನ ಪಡೆಯಬಹುದು ...

ಇ-ಸಂಜೀವಿನಿ ಸೇವೆಯ ಲಾಭ ಪಡೆಯಲು, ರೋಗಿಯು ಇ-ಸಂಜೀವಿನಿ ಆಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು. ಇದರ ನಂತರ, ಮೂರು ಆಯ್ಕೆಗಳು ಕಾಣಿಸಿಕೊಳ್ಳುತ್ತವೆ. ಮೊದಲನೆಯದು ರೋಗಿಯ ನೋಂದಣಿ ಮತ್ತು ಟೋಕನ್, ಎರಡನೆಯದು ಲಾಗಿನ್. ಮತ್ತು ಮೂರನೆಯದು ಪ್ರಿಸ್ಕ್ರಿಪ್ಷನ್ (ಸಲಹೆ) ಆಯ್ಕೆಯಾಗಿರುತ್ತದೆ. ಈ ಆಪ್ ನಿಂದ ನೋಂದಣಿ ಮತ್ತು ಟೋಕನ್ ಪಡೆದ ನಂತರ, ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ. ಆಗ ಬಳಕೆದಾರನು ತನ್ನ ಮೊಬೈಲ್‌ನಲ್ಲಿ ಒಟಿಪಿಯನ್ನು ಸ್ವೀಕರಿಸುತ್ತಾನೆ. ಒಟಿಪಿ ನಮೂದಿಸಿದ ನಂತರ ಬಳಕೆದಾರರು ಫಾರ್ಮ್ ಅನ್ನು ಭರ್ತಿ ಮಾಡಲು ಸಾಧ್ಯವಾಗುತ್ತದೆ. ಇ ಸಂಜೀವಿನಿ ಎರಡು ರೀತಿಯ ಟೆಲಿ ಮೆಡಿಸಿನ್ ಸಮಾಲೋಚನೆಯನ್ನು ಒದಗಿಸುತ್ತದೆ. ಈ ವೇದಿಕೆಯು ವೈದ್ಯರನ್ನು ವೈದ್ಯರೊಂದಿಗೆ ಮತ್ತು ರೋಗಿಯನ್ನು ವೈದ್ಯರೊಂದಿಗೆ ಸಂಪರ್ಕಿಸುತ್ತದೆ.

# ಅಂತ್ಯೋದಯದ ಹರಿಕಾರ



**ಕೆಲವರು ಹುಟ್ಟಿನಿಂದಲೇ ಶ್ರೇಷ್ಠರಾಗಿರುತ್ತಾರೆ, ಕೆಲವರು ಶ್ರೇಷ್ಠತೆಯನ್ನು ಸಾಧಿಸುತ್ತಾರೆ ಮತ್ತೆ ಕೆಲವರು ಶ್ರೇಷ್ಠತೆಯ ಹಸಿವು ಹೊಂದಿರುತ್ತಾರೆ ಎಂದು ಹೇಳಲಾಗುತ್ತದೆ. ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರು ಶ್ರೇಷ್ಠತೆಯನ್ನು ಸಾಧಿಸಿದ ಅಂತಹ ಒಬ್ಬ ಮಹಾನ್ ವ್ಯಕ್ತಿ. ಪಂಡಿತ್ ದೀನದಯಾಳ್ ಉಪಾಧ್ಯಾಯರು ಸಮಗ್ರ ಮಾನವತಾವಾದ ಮತ್ತು ಅಂತ್ಯೋದಯ ಮಾರ್ಗದ ಹರಿಕಾರರು. ಅವರ ದೃಷ್ಟಿಕೋನದಿಂದ ಸ್ಫೂರ್ತಿ ಪಡೆದ ಕೇಂದ್ರ ಸರ್ಕಾರವು ಸಮಾಜದ ಪ್ರತಿಯೊಂದು ವರ್ಗದ ಕನಸುಗಳನ್ನು ಈಡೇರಿಸುವ ಮೂಲಕ ಸ್ವಾವಲಂಬಿ ಭಾರತದತ್ತ ಹೆಜ್ಜೆ ಹಾಕುತ್ತಿದೆ. ಅವರ ಸಿದ್ಧಾಂತಗಳು ಮತ್ತು ತತ್ವಗಳು ರಾಷ್ಟ್ರದ ಪುನರ್ನಿರ್ಮಾಣದಲ್ಲಿ ಜನರಿಗೆ ಸ್ಫೂರ್ತಿಯಾಗಿವೆ.**

ದಲಿತರು, ದಮನಿತರು, ಶೋಷಿತರು, ವಂಚಿತರು, ಹಳ್ಳಿಯ ಜನರು, ಬಡವರು, ರೈತರು ಹೀಗೆ ಸಮಾಜದ ತಳವರ್ಗದವರನ್ನು ಮೊದಲು ಮೇಲೆತ್ತಬೇಕು. ರಾಷ್ಟ್ರವನ್ನು ಬಲಿಷ್ಠ ಮತ್ತು ಸ್ವಾವಲಂಬಿ ಮಾಡಲು ಸಮಾಜದ ತಳಸ್ತರದ ಈ ಜನರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವುದು ಅತ್ಯಗತ್ಯ. ಅಂತ್ಯೋದಯದ ಮೂಲದ ಹಿಂದೆ ಪಂಡಿತ್ ದೀನದಯಾಳ್ ಉಪಾಧ್ಯಯರ ಈ ಕಲ್ಪನೆ ಇದೆ. ಇದು ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್‌ನ ಮೂಲವಾಗಿದೆ.

ಪಂಡಿತ್ ದೀನದಯಾಳ್ ಉಪಾಧ್ಯಾಯರು ಸೆಪ್ಟೆಂಬರ್ 25, 1916 ರಂದು ರಾಜಸ್ಥಾನದ ಧಂಕಿಯಾ ಗ್ರಾಮದ ತಾಯಿಯ ಅಜ್ಜ ಚುನಿಲಾಲ್ ಶುಕ್ಲಾ ಅವರ ಮನೆಯಲ್ಲಿ ಜನಿಸಿದರು. ಆದರೆ ದೀನದಯಾಳ್ ಅವರ ಪೂರ್ವಿಕರ ಊರು ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ನಾಗಲಾ ಚಂದ್ರಭಾನ. ದೀನದಯಾಳ್ ತಂದೆ ಭಗವತಿ ಪ್ರಸಾದ್ ಉಪಾಧ್ಯಾಯ ಅವರು ಮಥುರಾದ ಜಲೇಸರ್ ರೈಲು ನಿಲ್ದಾಣದಲ್ಲಿ ಸ್ಟೇಷನ್ ಮಾಸ್ಟರ್ ಆಗಿದ್ದರು. ಪಂ. ದೀನದಯಾಳ್ ಉಪಾಧ್ಯಾಯರ ಬಾಲ್ಯ ಬಹಳ ಕಷ್ಟಕರವಾಗಿತ್ತು. ದೀನದಯಾಳ್ ಅವರು ಮೂರು ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡರು. ತಾಯಿ ರಾಂಪ್ಯಾರಿಯೊ ಅವರು ಕೇವಲ ಏಳು ವರ್ಷದವರಿದ್ದಾಗ ಅಕಾಲಿಕವಾಗಿ ತೀರಿಕೊಂಡರು. ತಂದೆಯ ರಕ್ಷಣೆ ಮತ್ತು ತಾಯಿಯ ಪ್ರೀತಿಯ ಅಗತ್ಯವಿದ್ದ ಸಮಯದಲ್ಲಿ ತಮ್ಮ ಹೆತ್ತವರನ್ನು ಕಳೆದುಕೊಂಡರು. ಪಂಡಿತ್ ಜಿ ಬಹಳ ಭರವಸೆಯ ಮತ್ತು ಬುದ್ಧಿವಂತ ಹುಡುಗನಾಗಿದ್ದರು. ಅವರು ಸಿಕಾರ್ ನ ಕಲ್ಯಾಣ್ ಪ್ರೌಢಶಾಲೆಯಿಂದ ಮೆಟ್ರಿಕ್ಯುಲೇಷನ್‌ನಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಅಜ್ಮೇರ್ ಬೋರ್ಡ್ ಮತ್ತು ಶಾಲೆಯು ಶೈಕ್ಷಣಿಕ ಶ್ರೇಷ್ಠತೆಗಾಗಿ ಅವರಿಗೆ ತಲಾ ಒಂದು ಚಿನ್ನದ ಪದಕ ಲಭಿಸಿದವು. ಎರಡು ವರ್ಷಗಳ ನಂತರ, ಅವರು ಬಿರ್ಲಾ ಕಾಲೇಜ್ ಪಿಲಾನಿಯಿಂದ ಹೈಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು ಮತ್ತು ಅವರು ಎರಡು ಚಿನ್ನದ ಪದಕಗಳನ್ನು ಪಡೆದರು. 1939 ರಲ್ಲಿ, ಅವರು ಕಾನ್ಪುರದ ಸನಾತನ ಧರ್ಮ ಕಾಲೇಜಿನಿಂದ ಗಣಿತದಲ್ಲಿ ಬಿಎ ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದರು. ಇಲ್ಲಿ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರನ್ನು ಭೇಟಿಯಾದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರ ತಪಸ್ವಿ ಜೀವನದಿಂದ ಪ್ರಭಾವಿತರಾಗಿ, ದೇಶ ಸೇವೆ ಮಾಡುವ ಚಿಂತನೆಯೂ ಅವರ ಮನಸ್ಸಿನಲ್ಲಿ ನಾಟಿತು. ಪಂಡಿತ್ ಜಿ ಆಗ್ರಾದ ಸೇಂಟ್ ಜಾನ್ಸ್ ಕಾಲೇಜಿನಲ್ಲಿ ಎಂಎಗೆ ಸೇರಿಕೊಂಡರು. ಆದರೆ ಕೆಲವು ಕಾರಣಗಳಿಂದಾಗಿ ತಮ್ಮ ಅಧ್ಯಯನವನ್ನು ಅರ್ಧದಲ್ಲೇ ಬಿಡಬೇಕಾಯಿತು. ಈ ಹೊತ್ತಿಗೆ ಅವರು ಯಾವುದೇ ವೃತ್ತಿಯನ್ನು ಮುಂದುವರಿಸದೇ ರಾಷ್ಟ್ರೀಯ ಜಾಗೃತಿ ಮತ್ತು ರಾಷ್ಟ್ರೀಯ ಏಕೀಕರಣಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಅರ್ಪಿಸಿಕೊಂಡರು. 1951 ರವರೆಗೆ, ಅವರು ಸಂಘದಲ್ಲಿ ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಸಾಮಾಜಿಕ ಪ್ರಜ್ಞೆಗಾಗಿ ಕೆಲಸ ಮಾಡುವುದನ್ನು ಮುಂದುವರಿಸಿದರು. ನಂತರ ಅವರು 1951 ರಲ್ಲಿ ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿ ಸ್ಥಾಪಿತವಾದ ಜನಸಂಘಕ್ಕೆ ಸೇರಿದರು.

**ಬಹುಮುಖಿ ವ್ಯಕ್ತಿತ್ವದ ಅವರು ಅತ್ಯಂತ ಅದ್ಭುತವಾದ ರಾಜಕಾರಣಿ, ಸಂಘಟಕರಾಗಿದ್ದರು ಮತ್ತು ಉತ್ತಮ ವಾಕ್ಪಟುವಾಗಿದ್ದರು. ಅವರು ಅಸಾಧಾರಣ ಅರ್ಥಶಾಸ್ತ್ರಜ್ಞ, ಸಾಮಾಜಿಕ ಚಿಂತಕರು, ಶಿಕ್ಷಣ ತಜ್ಞ, ಬರಹಗಾರ ಮತ್ತು ಪತ್ರಕರ್ತರಾಗಿದ್ದರು**

ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರು ಪಂಡಿತ್ ಜಿಯ ಸಂಘಟನಾ ಸಾಮರ್ಥ್ಯದಿಂದ ತುಂಬಾ ಪ್ರಭಾವಿತರಾಗಿದ್ದರು, ಇನ್ನೂ ಇಬ್ಬರು ದೀನದಯಾಳರು ಇದ್ದಿದ್ದರೆ ಭಾರತದ ರಾಜಕೀಯ ಚಿತ್ರಣವನ್ನೇ ಬದಲಾಯಿಸುತ್ತಿದ್ದೆ ಎಂದು ಮುಖರ್ಜಿ ಕಾನ್ಪುರ ಅಧಿವೇಶನದ ನಂತರ ಪ್ರಶಂಸಿಸಿದರು. ದುರದೃಷ್ಟವಶಾತ್, ಡಾ. ಮುಖರ್ಜಿ 1953 ರಲ್ಲಿ ನಿಧನರಾದರು, ನಂತರ ದೀನದಯಾಳ್ ಜಿಗೆ ಜನಸಂಘದ ನೇತೃತ್ವ ವಹಿಸಲಾಯಿತು. 1967 ರ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು ಎಲ್ಲರನ್ನೂ ಅಚ್ಚರಿಗೊಳಿಸುವಂತೆ ಅವರು ತಮ್ಮ ಜವಾಬ್ದಾರಿಗಳನ್ನು ಅಸಾಧಾರಣ ರೀತಿಯಲ್ಲಿ ಶ್ರದ್ಧೆಯಿಂದ ಸದ್ದಿಲ್ಲದೆ ಪೂರೈಸಿದರು. ಮತಗಳಿಕೆಯಲ್ಲಿ ಜನಸಂಘ ಎರಡನೇ ಅತಿ ದೊಡ್ಡ ಪಕ್ಷವಾಯಿತು. ಈ ಹೊತ್ತಿಗೆ ದೀನದಯಾಳ್ ಅವರು ದೇಶದ ಅಗ್ರ ನಾಯಕರಲ್ಲಿ ಒಬ್ಬರಾಗಿದ್ದರು ಆದರೆ ಸರಳ ಜೀವನವನ್ನು ಮುಂದುವರಿಸಿದರು. ಅವರು ತನ್ನ ಬಟ್ಟೆಗಳನ್ನು ತಾನೇ ಒಗೆಯುತ್ತಿದ್ದರು ಮತ್ತು ಎಂದಿಗೂ ವಿದೇಶಿ ವಸ್ತುಗಳನ್ನು ಖರೀದಿಸುತ್ತಿರಲಿಲ್ಲ.

ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ, ಅನೇಕ ನಾಯಕರು ದೇಶಪ್ರೇಮವನ್ನು ಜಾಗೃತಗೊಳಿಸಲು ಪತ್ರಿಕೋದ್ಯಮವನ್ನು ಬಳಸಿದರು. ಪಂಡಿತ್ ದೀನದಯಾಳ್ ಉಪಾಧ್ಯಾಯರು ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಲೇಖನಿಯ ಬಲವನ್ನು ಬಳಸಿದ ಒಬ್ಬ ಶ್ರೇಷ್ಠ ನಾಯಕ. ಅವರೊಬ್ಬ ಅನುಭವಿ ರಾಜಕಾರಣಿ ಮಾತ್ರವಲ್ಲದೇ, ಅವರು ಸಾಹಿತ್ಯದೊಂದಿಗೆ ಸಹ ಸಂಬಂಧ ಹೊಂದಿದ್ದರು. ಅವರ ಹಿಂದಿ ಮತ್ತು ಇಂಗ್ಲಿಷ್ ಲೇಖನಗಳು ನಿಯಮಿತವಾಗಿ ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಅವರು ಹೆಚ್ಚಿನ ಬೌದ್ಧಿಕ ಸಾಮರ್ಥ್ಯವನ್ನು ಹೊಂದಿದ್ದರು. ಅವರು ಕೇವಲ 16 ಗಂಟೆಗಳಲ್ಲಿ 'ಚಂದ್ರಗುಪ್ತ ಮೌರ್ಯ' ಎಂಬ ಸಣ್ಣ ಕಾದಂಬರಿಯನ್ನು ಬರೆದಿದ್ದಾರೆ. ದೀನದಯಾಳ್ ಅವರು ರಾಷ್ಟ್ರಧರ್ಮ ಪ್ರಕಾಶನವನ್ನು ಲಕ್ನೋದಲ್ಲಿ ಸ್ಥಾಪಿಸಿದರು. ರಾಷ್ಟ್ರೀಯವಾದಿ ವಿಚಾರಗಳನ್ನು ಪ್ರಚುರಪಡಿಸಲು ರಾಷ್ಟ್ರಧರ್ಮ ಮಾಸಿಕ ಪತ್ರಿಕೆಯನ್ನು ಆರಂಭಿಸಿದರು. ನಂತರ ಅವರು 'ಪಾಂಚಜನ್ಯ' (ಸಾಪ್ತಾಹಿಕ) ಮತ್ತು 'ಸ್ವದೇಶ್' (ದಿನಪತ್ರಿಕೆ) ಯನ್ನೂ ಆರಂಭಿಸಿದರು. ಅವರು ಪ್ರತಿಭಾನ್ವಿತ ಪತ್ರಕರ್ತರಾಗಿದ್ದರು. 1968 ರ ಫೆಬ್ರವರಿ 11 ರಂದು ಮೊಘಲ್‌ಸರೈ ರೈಲ್ವೇ ಯಾರ್ಡ್‌ನಲ್ಲಿ ಅವರ ಶವ ಪತ್ತೆಯಾದ ನಂತರ, ಅವರ ಸಾವಿನ ಸುದ್ದಿಯನ್ನು ಕೇಳಿ ರಾಷ್ಟ್ರವು ಆಘಾತಕ್ಕೊಳಗಾಯಿತು. ಅವರ ಹತ್ಯೆಯನ್ನು ಭಾರತದ ಅತ್ಯಂತ ಕೆಟ್ಟ ಹಗರಣಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಪಂಡಿತ್ ದೀನದಯಾಳ್ ಜಿ ಅವರ ಹತ್ಯೆಗೆ ಸಂಬಂಧಿಸಿದ ರಹಸ್ಯವನ್ನು ಇಂದಿಗೂ ಭೇದಿಸಲಾಗಿಲ್ಲ.



File Photo

“

ದೀನ್ ದಯಾಳ್ ಉಪಾಧ್ಯಾಯರು ನಮಗೆ ಅಂತ್ಯೋದಯ ಮಾರ್ಗವನ್ನು ತೋರಿಸಿದರು. ಅದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆ. 21 ನೇ ಶತಮಾನದ ಭಾರತ, ಈ ಕಲ್ಪನೆಯಿಂದ ಸ್ಫೂರ್ತಿ ಪಡೆದು ಅಂತ್ಯೋದಯಕ್ಕಾಗಿ ಕೆಲಸ ಮಾಡುತ್ತಿದೆ. ಅಭಿವೃದ್ಧಿಯಲ್ಲಿ ಅತ್ಯಂತ ತಳಮಟ್ಟದಲ್ಲಿರುವವರನ್ನು ಅತ್ಯಂತ ಉನ್ನತ ಹಂತಕ್ಕೆ ತರುವ ಕೆಲಸ ಮಾಡಲಾಗುತ್ತಿದೆ. ಪೂರ್ವಾಂಚಲ, ಪೂರ್ವ ಭಾರತ, ಈಶಾನ್ಯ ಭಾರತ ಹೀಗೆ ಎಲ್ಲೆಡೆ ದೇಶದ 100 ಕ್ಕೂ ಹೆಚ್ಚು ಆಕಾಂಕ್ಷಿತ ಜಿಲ್ಲೆಗಳಿವೆ, ಎಲ್ಲ ಪ್ರದೇಶಗಳಲ್ಲಿ ಅಭೂತಪೂರ್ವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಪಂಡಿತ್ ದೀನದಯಾಳ್ ಉಪಾಧ್ಯಾಯರು ಭಾರತದ ಪ್ರಜಾಪ್ರಭುತ್ವದ ಪ್ರವರ್ತಕರಲ್ಲಿ ಒಬ್ಬರಾಗಿದ್ದರು, ಅವರು ಅದರ ಉದಾರವಾದ ಮತ್ತು ದೇಶೀಯ ಲಕ್ಷಣಗಳನ್ನು ರೂಪಿಸಿದರು. ಅವರು ಅಧಿಕಾರವನ್ನು ಪಡೆಯುವ ಉದ್ದೇಶದಿಂದ ರಾಜಕೀಯಕ್ಕೆ ಪ್ರವೇಶಿಸಲಿಲ್ಲ. ರಾಷ್ಟ್ರದ ಸೇವೆಗಾಗಿ ಬಂದವರು. ಬಹುಮುಖಿ ವ್ಯಕ್ತಿತ್ವದ ಅವರು ಅತ್ಯಂತ ಉತ್ಕೃಷ್ಟ ರಾಜಕಾರಣಿ, ಸಂಘಟಕರಾಗಿದ್ದರು ಮತ್ತು ಉತ್ತಮ ವಾಕ್ಪಟುವಾಗಿದ್ದರು. ಅವರು ಅಸಾಧಾರಣ ಅರ್ಥಶಾಸ್ತ್ರಜ್ಞ, ಶಿಕ್ಷಣ ತಜ್ಞ, ಬರಹಗಾರ ಮತ್ತು ಪತ್ರಕರ್ತರಾಗಿದ್ದರು. ದೀನದಯಾಳ್ ಉಪಾಧ್ಯಾಯರ ರಾಜಕೀಯ ಜೀವನ ಎಲ್ಲರಿಗೂ ತಿಳಿದಿದೆ. ಅವರು ಜನಸಂಘವನ್ನು ಸಮರ್ಥವಾಗಿ ಮುನ್ನಡೆಸಿದರು, ಅದಕ್ಕಾಗಿ ತತ್ವಗಳನ್ನು ರೂಪಿಸಿದರು ಮತ್ತು ಪಕ್ಷಕ್ಕೆ ಉನ್ನತ ನೈತಿಕ ಮೌಲ್ಯಗಳನ್ನು ನಿಗದಿಪಡಿಸಿದರು. ■

# ಸಂಜ್ಞಾ ಭಾಷೆ

## ಶ್ರವಣ ಮತ್ತು ವಾಕ್‌ದೋಷಿಗಳ ಸಶಕ್ತಗೊಳಿಸುವಿಕೆ



**ದೇಶದಲ್ಲಿ ಕಿವುಡ -ಮೂಕ ಜನರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಸಂಜ್ಞಾ ಭಾಷೆಗೆ ಅಧಿಕೃತ ವಿಷಯದ ಸ್ಥಾನಮಾನ ನೀಡಲಾಗಿದೆ. ಅಲ್ಲದೆ, ದೇಶದಲ್ಲಿ ಮೊದಲ ಬಾರಿಗೆ, ಸಾಮಾನ್ಯ ಶಬ್ದಕೋಶವನ್ನು ರಚಿಸಲಾಗಿದೆ. ಕಿವುಡ - ಮೂಕ ಜನರು ತಮ್ಮ ಭಾವನೆಗಳನ್ನು ಕೈ, ಮುಖ ಅಥವಾ ದೇಹದ ಸನ್ನೆಗಳ ಮೂಲಕ ವ್ಯಕ್ತಪಡಿಸಲು ಸಂಜ್ಞಾ ಭಾಷೆಯನ್ನು ಬಳಸುತ್ತಾರೆ.**

ತಾವು ರಚಿಸಿದ ಕಲಾಕೃತಿಯೊಂದನ್ನು ತಮಗೆ ಕಳುಹಿಸಿದ ಕಿವುಡ - ಮೂಕ ವರ್ಣಚಿತ್ರಕಾರೊಬ್ಬರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬರೆದ ಪತ್ರದಲ್ಲಿ, ಕಠಿಣ ಸವಾಲುಗಳನ್ನು ಎದುರಿಸುವ ಮೂಲಕ ಹಾಗು ಧನಾತ್ಮಕ ಚಿಂತನೆಯೊಂದಿಗೆ ಅಡೆತಡೆಗಳನ್ನು ನಿವಾರಿಸಿಕೊಂಡು ಜೀವನದಲ್ಲಿ ಹೊಸ ಎತ್ತರಕ್ಕೆ ಏರಬಹುದು ಎಂದು ಹೇಳಿದ್ದಾರೆ. ಜೈಪುರದ ಅಜಯ್ ಗರ್ಗ್ ತಮ್ಮ ಬಾಲ್ಯದಲ್ಲಿ ಸಂಭವಿಸಿದ ಅಪಘಾತದಲ್ಲಿ ಶ್ರವಣ ಮತ್ತು ವಾಕ್ ಶಕ್ತಿಯನ್ನು ಕಳೆದುಕೊಂಡರು. ಸಾಮಾನ್ಯವಾಗಿ, ಅಂತಹ ಸಂದರ್ಭ ತುಂಬಾ ಕಷ್ಟಕರವಾಗಿರುತ್ತದೆ. ಆದರೆ ಅಂಗವೈಕಲ್ಯದ ಹೊರತಾಗಿಯೂ, ಗರ್ಗ್ ಎಂದಿಗೂ ತಮ್ಮ ಭರವಸೆಯನ್ನು ಕಳೆದುಕೊಳ್ಳಲಿಲ್ಲ ಮತ್ತು ತಮ್ಮ ದೌರ್ಬಲ್ಯಗಳನ್ನು ಶಕ್ತಿಯನ್ನಾಗಿ ಮಾಡಿಕೊಂಡರು. ಗರ್ಗ್ ತಮ್ಮ ಸಮರ್ಪಣೆ, ಶ್ರದ್ಧೆ ಮತ್ತು ನಿರಂತರ ಅಭ್ಯಾಸದಿಂದ ಚಿತ್ರಕಲಾ ಜಗತ್ತಿನಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇಂದು ಅವರ ಕಲಾಕೃತಿಗಳ ಅನೇಕ ಪ್ರದರ್ಶನಗಳನ್ನು ದೇಶ ಮಾತ್ರವಲ್ಲದೆ ವಿದೇಶಗಳಲ್ಲೂ ಆಯೋಜಿಸಲಾಗಿದೆ. ಶ್ರವಣ ಮತ್ತು ವಾಕ್ ದೋಷವಿರುವ ಮಕ್ಕಳಿಗೆ ಗರ್ಗ್ ಉಚಿತ ಚಿತ್ರಕಲೆ ತರಬೇತಿಯನ್ನೂ ನೀಡುತ್ತಿದ್ದಾರೆ.

ಗರ್ಗ್‌ಗೆ ಬರೆದ ಪತ್ರದಲ್ಲಿ ಪ್ರಧಾನಿ ಮೋದಿಯವರು, "ಜೀವನದಲ್ಲಿ ಹಲವಾರು ತೊಂದರೆಗಳನ್ನು ಮತ್ತು ಅಡೆತಡೆಗಳನ್ನು ಎದುರಿಸಿದ ಅನೇಕರಿಗೆ ನಿಮ್ಮ ಜೀವನವು ಸ್ಫೂರ್ತಿಯಾಗಿದೆ." ಎಂದು ಹೇಳುತ್ತಾರೆ. ಇಂದು ಗರ್ಗ್ ಜೀವನದಲ್ಲಿ ಅತ್ಯಂತ ಯಶಸ್ವಿ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇದಕ್ಕಾಗಿ ಆತ್ಮವಿಶ್ವಾಸದ ಜೊತೆಗೆ ಪ್ರೀತಿಪಾತ್ರರ ನಂಬಿಕೆ ಮತ್ತು ಬೆಂಬಲವೂ ಅಗತ್ಯವಾಗಿದೆ. 2011 ರ ಜನಗಣತಿಯ ಪ್ರಕಾರ, ಭಾರತದಲ್ಲಿ ಸುಮಾರು 50 ಲಕ್ಷ ಜನರಿಗೆ ಮಾತನಾಡಲು ಅಥವಾ ಕೇಳಲು ಸಾಧ್ಯವಾಗುವುದಿಲ್ಲ ಅಥವಾ ಶ್ರವಣ ದೋಷವನ್ನು ಹೊಂದಿದ್ದಾರೆ.

### ಭಾರತೀಯ ಸಂಜ್ಞಾ ಭಾಷೆ ಸಂಶೋಧನಾ ಮತ್ತು ತರಬೇತಿ ಕೇಂದ್ರ

2016 ರಲ್ಲಿ ಆರಂಭಿಸಲಾದ ಭಾರತೀಯ ಸಂಜ್ಞಾ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರವು ಶ್ರವಣ ಮತ್ತು ವಾಕ್‌ದೋಷವಿರುವವರನ್ನು ಸಬಲೀಕರಣಗೊಳಿಸುವ ಪ್ರಮುಖ ಹೆಜ್ಜೆಯಾಗಿದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಸ್ಥಾಪನೆಯಾದ ಈ ಕೇಂದ್ರವು ಪ್ರಾಥಮಿಕವಾಗಿ ಸಂಜ್ಞಾ ಭಾಷೆ ದುಭಾಷಿಗಳು, ಆರ್ & ಡಿ ಮತ್ತು ಕೆಲಸದ ಸ್ಥಳ ಹಾಗು ಸಾರ್ವಜನಿಕ ಜೀವನದ ಎಲ್ಲಾ ಚಟುವಟಿಕೆಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಜನರಿಗೆ ಸಮಾನ ಪ್ರವೇಶವನ್ನು ಒದಗಿಸಲು ಹೊಸ ತಂತ್ರಜ್ಞಾನವನ್ನು ಉತ್ತೇಜಿಸುವತ್ತ ಗಮನಹರಿಸುತ್ತದೆ. . ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಶ್ರವಣದೋಷವುಳ್ಳವರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳಿಗೆ ದೀನ್ ದಯಾಳ್ ಉಪಾಧ್ಯಾಯ ಯೋಜನೆ ಅಡಿಯಲ್ಲಿ ಸಹಾಯವನ್ನು ನೀಡುತ್ತಿದೆ. ವಿಕಲಾಂಗ ಚೇತನರ ಹಕ್ಕುಗಳ ಕಾಯ್ದೆ 2016 ರ ಅಡಿಯಲ್ಲಿ, ಶ್ರವಣ ದೋಷವುಳ್ಳವರಿಗೆ ಮೊದಲಿಗಿಂತ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗಿದೆ. 5 ವರ್ಷಕ್ಕಿಂತ



## ಜಾಗೃತಿಗಾಗಿ ಜಾಗತಿಕ ಸಂಜ್ಞಾ ಭಾಷಾ ದಿನದ ಆಚರಣೆ

ವಿಶ್ವ ಕಿವುಡರ ಒಕ್ಕೂಟದ ಪ್ರಕಾರ, ಪ್ರಪಂಚದಲ್ಲಿ ಸರಿಸುಮಾರು 720 ಮಿಲಿಯನ್ ಕಿವುಡರಿದ್ದಾರೆ. ಇವರಲ್ಲಿ 80 ಪ್ರತಿಶತ ಜನರು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅವರು 300 ವಿವಿಧ ರೀತಿಯ ಸಂಜ್ಞಾ ಭಾಷೆಗಳನ್ನು ಬಳಸುತ್ತಾರೆ. ಕೇಳಲು ಸಾಧ್ಯವಾಗದ ಅಥವಾ ಶ್ರವಣ ದೋಷವಿರುವವರಿಗೆ ಸಂಜ್ಞಾ ಭಾಷೆಯು ಸಂವಹನದ ಏಕೈಕ ಮಾರ್ಗವಾಗಿದೆ. ಇತರ ಯಾವುದೇ ಭಾಷೆಯಂತೆ, ಸಂಜ್ಞಾ ಭಾಷೆ ಕೂಡ ತನ್ನದೇ ವ್ಯಾಕರಣ ಮತ್ತು ನಿಯಮಗಳನ್ನು ಹೊಂದಿದೆ. ಶ್ರವಣದೋಷವುಳ್ಳವರ ಪ್ರಗತಿಗೆ ಸಂಜ್ಞಾ ಭಾಷೆ ಬಹಳ ಮುಖ್ಯ. ಇದನ್ನು ಶ್ರವಣದೋಷವುಳ್ಳ ಜನರ ಮಾತೃಭಾಷೆ ಎಂದೂ ಕರೆಯಬಹುದು. ವಿಶ್ವ ಮೂಕರ ಫೆಡರೇಶನ್ ಅನ್ನು ಸೆಪ್ಟೆಂಬರ್ 23, 1951 ರಂದು ಸ್ಥಾಪಿಸಲಾಯಿತು. ಸಂಜ್ಞಾ ಭಾಷೆಯ ಬಗ್ಗೆ ಜಾಗೃತಿ ಮೂಡಿಸಲು 2018 ರಿಂದ ಪ್ರತಿ ವರ್ಷ ಅಂತಾರಾಷ್ಟ್ರೀಯ ಸಂಜ್ಞಾ ಭಾಷೆ ದಿನವನ್ನು ಆಚರಿಸಲಾಗುತ್ತಿದೆ.



ಕಡಿಮೆ ವಯಸ್ಸಿನ ಮತ್ತು 15,000 ರೂ.ಗಿಂತ ಕಡಿಮೆ ಮಾಸಿಕ ಆದಾಯ ಹೊಂದಿರುವ ಕುಟುಂಬದ ಮಗುವಿಗೆ ಕಾಕ್ಲಿಯರ್ ಇಂಪ್ಲಾಂಟ್ ಮಾಡಬೇಕಾದರೆ, ಕೇಂದ್ರ ಸರ್ಕಾರವು ಎಲ್ಲಾ ವೆಚ್ಚಗಳನ್ನು ಭರಿಸುತ್ತದೆ. ಅಂತಹ ಮಕ್ಕಳಿಗೆ ಎರಡು ವರ್ಷಗಳವರೆಗೆ ಸ್ಪೀಚ್ ಥೆರಪಿಯನ್ನು ಉಚಿತವಾಗಿ ನೀಡಲಾಗುತ್ತದೆ. ಅಂಥವರ ಕೌಶಲ್ಯ ಅಭಿವೃದ್ಧಿಯ ತರಬೇತಿಗೆ ವಿಶೇಷ ವ್ಯವಸ್ಥೆ ಮಾಡಲಾಗಿದೆ.

### ದೇಶದ ಮೊದಲ ಸಂಜ್ಞಾ ಭಾಷೆಯ ನಿಘಂಟು

ಸಂಜ್ಞಾ ಭಾಷೆಯನ್ನು ಭಾರತದಲ್ಲಿ ಸುಮಾರು 100 ವರ್ಷಗಳಿಂದ ಬಳಸಲಾಗುತ್ತಿದೆ ಆದರೆ ರಾಷ್ಟ್ರದಾದ್ಯಂತ ಏಕರೂಪತೆಯ ಕೊರತೆಯಿರುವುದರಿಂದ ಒಂದೇ ವಿಷಯವನ್ನು ಸಂಜ್ಞೆಗಳ ಮೂಲಕ ಹೇಳುವ ವಿಭಿನ್ನ ವಿಧಾನಗಳು ಆಚರಣೆಯಲ್ಲಿವೆ. ಉದಾಹರಣೆಗೆ, ದಕ್ಷಿಣ ಭಾರತದಲ್ಲಿ, ಎರಡೂ ಕೈಗಳನ್ನು ಮುಷ್ಟಿಯ ಮೇಲೆ ಇರಿಸಿದರೆ, ಅದನ್ನು 'ಮದುವೆಯ' ಸಂಕೇತವೆಂದು ಪರಿಗಣಿಸಲಾಗುತ್ತದೆ, ಆದರೆ ಈ 'ಸಂಜ್ಞೆಯನ್ನು' ಉತ್ತರ ಭಾರತದ ಕೆಲವು ಭಾಗಗಳಲ್ಲಿ 'ಜೈಲು' ಎಂದು ಕರೆಯಲಾಗುತ್ತದೆ. ಭಾಷೆ ಮತ್ತು ಪ್ರಾದೇಶಿಕತೆಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬಲ್ಲ ನಿಘಂಟಿನ ಅವಶ್ಯಕತೆ ಇತ್ತು. ಭಾರತೀಯ ಸಂಜ್ಞಾ ಭಾಷೆ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸಾಕಷ್ಟು ಸಂಶೋಧನೆ ಮತ್ತು ಅಧ್ಯಯನದ ನಂತರ ಭಾರತದ ಮೊದಲ ಸಂಜ್ಞಾ ಭಾಷೆಯ ನಿಘಂಟು ರಚಿಸಿತು. ಸುಮಾರು 10 ಸಾವಿರ ಪದಗಳನ್ನು ಈ ನಿಘಂಟಿನಲ್ಲಿ ಸೇರಿಸಲಾಗಿದೆ, ಅದನ್ನು ಮೂರು ಸಂಪುಟಗಳಲ್ಲಿ ಬಿಡುಗಡೆ ಮಾಡಲಾಗಿದೆ. ನಿಘಂಟಿನ ಮೊದಲ ಆವೃತ್ತಿಯನ್ನು ಮಾರ್ಚ್ 23, 2018 ರಂದು 3000 ಪದಗಳೊಂದಿಗೆ ಬಿಡುಗಡೆ ಮಾಡಲಾಯಿತು. 6000 ಪದಗಳ (ಮೊದಲ 3000 ಪದಗಳನ್ನು ಒಳಗೊಂಡಂತೆ) ಎರಡನೇ ಆವೃತ್ತಿಯನ್ನು ಫೆಬ್ರವರಿ 27, 2019 ರಂದು ಬಿಡುಗಡೆ ಮಾಡಲಾಯಿತು. ಮೂರನೇ ಆವೃತ್ತಿ ಫೆಬ್ರವರಿ 17, 2021 ರಂದು ಬಿಡುಗಡೆಯಾಯಿತು. ನಿಘಂಟಿನಲ್ಲಿ ಸಂಜ್ಞೆ, ಸಂಜ್ಞೆಗಾಗಿ ಇಂಗ್ಲೀಷ್ ಪದ ಮತ್ತು ಸಂಬಂಧಿತ ಚಿತ್ರಗಳನ್ನು ಒಳಗೊಂಡಿರುವ ವೀಡಿಯೊಗಳು ಕೂಡ ಇವೆ. ದೇಶದ ವಿವಿಧ ಭಾಗಗಳಲ್ಲಿ ಬಳಸಲಾಗುವ ಪ್ರಾದೇಶಿಕ ಸಂಜ್ಞೆಗಳನ್ನು ಸಹ ನಿಘಂಟು ಒಳಗೊಂಡಿದೆ.

### ಮೊದಲ ಬಾರಿಗೆ ಒಂದು ಭಾಷೆಯಾಗಿ ಸಂಜ್ಞಾ ಭಾಷೆಗೆ ಮಾನ್ಯತೆ

ಭಾರತದಲ್ಲಿ ಸಂಜ್ಞಾ ಭಾಷೆಗೆ ಒಂದು ವಿಷಯದ ಸ್ಥಾನಮಾನ ನೀಡಿದ್ದು ಇದೇ ಮೊದಲು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಒಂದು ವರ್ಷ ಸಂದ ಸಂದರ್ಭದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ಘೋಷಿಸಿದರು. "ಈಗ ವಿದ್ಯಾರ್ಥಿಗಳು ಇದನ್ನು ಒಂದು ಭಾಷೆಯಾಗಿ ಓದಲು ಸಾಧ್ಯವಾಗುತ್ತದೆ. ಇದು ಭಾರತೀಯ ಸಂಜ್ಞಾ ಭಾಷೆಗೆ ದೊಡ್ಡ ಉತ್ತೇಜನ ನೀಡುತ್ತದೆ ಮತ್ತು ನಮ್ಮ ದಿವ್ಯಾಂಗರಿಗೆ ಬಹಳಷ್ಟು ಸಹಾಯ ಮಾಡುತ್ತದೆ" ಎಂದು ಅವರು ಹೇಳಿದರು. ಎನ್ ಸಿ ಇ ಆರ್ ಟಿ ಮತ್ತು ಭಾರತೀಯ ಸಂಜ್ಞಾ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರದ ನಡುವಿನ ಒಪ್ಪಂದದ ಪ್ರಕಾರ, ಒಂದರಿಂದ ಹತ್ತನೇ ತರಗತಿಯ ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮದ ಎಲ್ಲಾ ಎನ್ ಸಿ ಇ ಆರ್ ಟಿ ಪಠ್ಯಪುಸ್ತಕಗಳು, ಶಿಕ್ಷಕರ ಕೈಪಿಡಿಗಳು ಮತ್ತು ಇತರೆ ಪೂರಕ ಪಠ್ಯಪುಸ್ತಕಗಳನ್ನು ಭಾರತೀಯ ಸಂಜ್ಞಾ ಭಾಷೆಗೆ ಪರಿವರ್ತಿಸಲಾಗುತ್ತದೆ. ಈ ಉಪಕ್ರಮವು ಎಲ್ಲಾ ಶ್ರವಣ ದೋಷವುಳ್ಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಉಪಯುಕ್ತವಾಗುತ್ತದೆ.

ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ. ಇದು ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ತತ್ವವಾಗಿದೆ. ಹಿರಿಯ ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು, ಬುಡಕಟ್ಟು ಜನಾಂಗಗಳು ಅಥವಾ ವಿಭಿನ್ನ ಸಾಮರ್ಥ್ಯವುಳ್ಳ ವರ್ಗಕ್ಕೆ ತನ್ನ ನೀತಿಗಳ ಪ್ರಯೋಜನಗಳನ್ನು ವಿಸ್ತರಿಸಲು ಸರ್ಕಾರವು ಈ ವಿಧಾನವನ್ನು ಅನುಸರಿಸುತ್ತಿದೆ. ಸರ್ಕಾರದ ಉಪಕ್ರಮಗಳ ಪ್ರಯೋಜನಗಳನ್ನು ಸಮಾಜದ ಆ ವರ್ಗಕ್ಕೆ ವಿಸ್ತರಿಸಲಾಯಿತು, ಅದು 2014 ರ ಹಿಂದಿನ ಅವಧಿಯಲ್ಲಿ ವಿವಿಧ ಸರ್ಕಾರಿ ನೀತಿಗಳ ಪ್ರಯೋಜನಗಳ ವ್ಯಾಪ್ತಿಯ ಹೊರಗಿತ್ತು. ಕೌಶಲ್ಯ ತರಬೇತಿಯಿಂದ ಹಿಡಿದು ವಿಭಿನ್ನ ಸಾಮರ್ಥ್ಯದ ಉದ್ಯೋಗಿಗಳಿಗೆ ಮೀಸಲಾತಿಯನ್ನು 3 ರಿಂದ 4 ಪ್ರತಿಶತದವರೆಗೆ ಹೆಚ್ಚಿಸಲಾಗಿದೆ. ತರಬೇತಿ, ಶಿಕ್ಷಣ, ಸಂಶೋಧನೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಯಿತು. ಈಗ ಕಿವುಡ ಮತ್ತು ಮೂಕರು ಕೂಡ ಕೇಂದ್ರ ಸರ್ಕಾರದ ವಿವಿಧ ಉಪಕ್ರಮಗಳ ಆದ್ಯತೆಯ ಭಾಗವಾಗಿದ್ದಾರೆ. ■

# ಉದಯೋನ್ಮುಖ ನವ ಭಾರತದಲ್ಲಿ ಹೊಸ ಪರಂಪರೆ

**ಜನಸಾಮಾನ್ಯರು ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಂತೆ ಮಾಡಲು ಸಂಕಲ್ಪ ಮತ್ತು ದೃಢ ನಿಶ್ಚಯದ ಅಗತ್ಯವಿದೆ. ದೇಶದ ಪರಿವರ್ತನೆಗೆ ಪಣ ತೊಟ್ಟಿರುವ ಪ್ರಧಾನಿ ನರೇಂದ್ರ ಮೋದಿಯವರಲ್ಲಿ ಇಂತಹ ದೃಢತೆ ಇದೆ. ದೇಶದಲ್ಲಿ ಶೌಚಾಲಯಗಳ ನಿರ್ಮಾಣದ ಬಗ್ಗೆ ಪ್ರಧಾನಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾರೆ ಎಂದು ಯಾರಾದರೂ ಅಂದುಕೊಂಡಿದ್ದರಾ? ಅಥವಾ ಅಪ್ರತಿಮ ಮತ್ತು ಅನಾಮಧೇಯ ರಾಷ್ಟ್ರ ನಾಯಕರು ಪದ್ಮ ಗೌರವವನ್ನು ಪಡೆಯುತ್ತಾರೆ ಎಂದು ಯಾರಾದರೂ ಊಹಿಸಿದ್ದರಾ?**

2014 ನೇ ವರ್ಷವು ಭಾರತದ ರಾಜಕೀಯದಲ್ಲಿ ನಿರ್ಣಾಯಕ ಕ್ಷಣವಾಗಿದ್ದು, ಇದು ಸರಿಯಾದ ಅಭ್ಯಾಸಗಳು ಮತ್ತು ಪದ್ಧತಿಗಳನ್ನು ಹುಟ್ಟುಹಾಕುವ ಮೂಲಕ ನಮ್ಮ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳನ್ನು ಹೆಚ್ಚಿಸಿತು. ದೇಶದ ಪದ್ಧತಿಗಳು ಮತ್ತು ನೀತಿಗಳು ಮಾತ್ರ ಬದಲಾಗಲಿಲ್ಲ, ಮೊದಲ ಬಾರಿಗೆ ಸಾರ್ವಜನಿಕರ ಭಾಗವಹಿಸುವಿಕೆ ವಿವಿಧ ಸರ್ಕಾರಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಪ್ರಮುಖ ಕಾರಣವಾಯಿತು. ಸ್ವತಃ ಪ್ರಧಾನಿ ನರೇಂದ್ರ ಮೋದಿಯವರು ಕೆಂಪು ಕೋಟೆಯ ಪ್ರಾಂಗಣದಲ್ಲಿ ತಮ್ಮ ಭಾಷಣದಲ್ಲಿ ಇಂತಹ ಒಳ್ಳೆಯ ಪದ್ಧತಿಗಳು ಮತ್ತು ಆಚರಣೆಗಳನ್ನು ಬಹಳ ಹಿಂದೆಯೇ ಅಳವಡಿಸಿಕೊಳ್ಳಬೇಕಿತ್ತು. ಆದರೆ ಅವುಗಳಿಗೆ ಸರಿಯಾದ ಪ್ರಾಮುಖ್ಯವನ್ನು ನೀಡಲಿಲ್ಲ ಎಂದು ಅನೇಕ ಬಾರಿ ಸೂಚಿಸಿದ್ದರು. ಈಗ ಸರಿಯಾದ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವ ಮನೋಭಾವದಲ್ಲಿನ ಈ ಬದಲಾವಣೆಯು ದೇಶದ ಆಕಾಂಕ್ಷೆಗಳನ್ನು ರೂಪಿಸುತ್ತಿದೆ...



"ಕೆಂಪುಕೋಟೆಯ ಮೇಲಿನಿಂದ ಶುಚಿತ್ವ ಮತ್ತು ಶೌಚಾಲಯಗಳ ಬಗ್ಗೆ ಮಾತನಾಡುವ ಇವರು ಯಾವ ರೀತಿಯ ಪ್ರಧಾನಿ ಎಂದು ನೀವು ಯೋಚಿಸುತ್ತಿರಬೇಕು. ನಾನು ಟೀಕೆಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಆದರೆ ನಾನು ನನ್ನ ಹೃದಯ ಹೇಳಿದಂತೆ ನಡೆಯುತ್ತೇನೆ. ನಾನು ಬಡ ಕುಟುಂಬದಿಂದ ಬಂದವನು ಮತ್ತು ಬಡವರಿಗೆ ಗೌರವ ಸಿಗಬೇಕು, ಅದು ನನ್ನ ಆದ್ಯತೆಯಾಗಿದೆ."

"ನಾವು ಈ "ಗಿವ್ ಇಟ್ ಅಪ್" ಆಂದೋಲನದಲ್ಲಿ ಸೇರಿಕೊಳ್ಳೋಣ, ಅಡುಗೆಅನಿಲ ಸಬ್ಸಿಡಿಯನ್ನು ಬಿಟ್ಟುಬಿಡೋಣ. ನೀವು ಬಿಟ್ಟುಕೊಡುವ ಸಬ್ಸಿಡಿಯನ್ನು ಬಡವರಿಗೆ ವರ್ಗಾಯಿಸುವ ಭರವಸೆಯನ್ನು ನಾನು ನಿಮಗೆ ನೀಡುತ್ತೇನೆ. ಇದು ಬಡವರಿಗೆ ಉಪಯುಕ್ತವಾಗಲಿದೆ. ಸಬ್ಸಿಡಿಗಳನ್ನು ಉಳಿಸುವ ಮೂಲಕ ಬೊಕ್ಕಸವನ್ನು ತುಂಬಲು ಸರ್ಕಾರ ಉದ್ದೇಶಿಸಿಲ್ಲ. ಇದು ಸೇವೆಯಲ್ಲವೇ ನೀವೇ ಹೇಳಿ?"

"ಈಗ ನಾವು ಬಜೆಟ್ ಅನ್ನು ಒಂದು ತಿಂಗಳು ಮೊದಲು ಮಂಡಿಸುತ್ತಿದ್ದೇವೆ. ಒಂದು ತಿಂಗಳು ಮುಂಚಿತವಾಗಿ ಮಾಡುವುದು ಎಂದರೆ ದೇಶದ ಆರ್ಥಿಕ ವ್ಯವಸ್ಥೆಯನ್ನು ಒಂದು ತಿಂಗಳು ಮುಂಚಿತವಾಗಿ ನಡೆಸುವುದು. ಇದಷ್ಟೇ ಅಲ್ಲ, ಬಜೆಟ್‌ನ ನಂತರ ಪಾಲುದಾರರೊಂದಿಗೆ ಸಂವಹನ ನಡೆಸಲು ಒಂದು ಉತ್ತಮ ಉಪಕ್ರಮ, ಇದು ಇನ್ನಷ್ಟು ಪರಿಣಾಮಕಾರಿಯಾಗಲಿದೆ ಎಂದು ನಾನು ಭಾವಿಸುತ್ತೇನೆ."

"ನಮ್ಮ ದೇಶದಲ್ಲಿ, ಸರ್ಕಾರಗಳ ಮೌಲ್ಯಮಾಪನ, ಸರ್ಕಾರದ ಶಕ್ತಿಯ ಮೌಲ್ಯಮಾಪನ, ಸರ್ಕಾರದ ಕಾರ್ಯಕ್ಷಮತೆಯ ಬಗೆಗಿನ ಮಾತುಕತೆಗಳು ಹೆಚ್ಚಾಗಿ ಸರ್ಕಾರವು ಮಾಡಿದ ದೊಡ್ಡ ಘೋಷಣೆಗಳನ್ನು ಆಧರಿಸಿವೆ. ಆದರೆ ಮೊದಲ ಬಾರಿಗೆ, ಈ ನಿಯಮಗಳು ಬದಲಾಗುತ್ತಿವೆ, ಪರಿಕಲ್ಪನೆ ಬದಲಾಗಿದೆ. ನಮ್ಮ ಸರ್ಕಾರವನ್ನು ಅದರ ಅನುಷ್ಠಾನ ವ್ಯವಸ್ಥೆಯಿಂದ ಮೌಲ್ಯಮಾಪನ ಮಾಡಲಾಗುತ್ತಿದೆ."

-ನರೇಂದ್ರ ಮೋದಿ,
ಪ್ರಧಾನಮಂತ್ರಿ

ಮುಂದಿನ 25 ವರ್ಷಗಳಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ದಿಕ್ಕಿನಲ್ಲಿ ಸರ್ಕಾರ ಮುನ್ನಡೆಯುತ್ತಿದೆ. ಅದು ಭವಿಷ್ಯದ ದೃಷ್ಟಿಯಿಂದ ಅಮೃತ ಕಾಲವನ್ನು ಆರಂಭಿಸುತ್ತಿರುವುದಾಗಿರಬಹುದು ಅಥವಾ ಕೆಂಪು ಕೋಟೆಯಿಂದ ಪ್ರಧಾನಿ ನರೇಂದ್ರ ಮೋದಿಯವರು ಸ್ವಚ್ಛತೆ ಮತ್ತು ಸ್ಯಾನಿಟರಿ ಪ್ಯಾಡ್‌ಗಳ ಪ್ರಚಾರದ ವಿಚಾರವನ್ನು ಕೈಗೆತ್ತಿಕೊಳ್ಳುವುದಾಗಿರಬಹುದು. ಸಾಮಾನ್ಯ ಬಜೆಟ್‌ಗೆ ಹೊಸ ನಿರ್ದೇಶನ ನೀಡುವುದು ಅಥವಾ ಪ್ರಗತಿ ಮುಂತಾದ ವೇದಿಕೆಗಳ ಮೂಲಕ ದಶಕಗಳ ಕಾಲದ ಯೋಜನೆಗಳಿಗೆ ಉತ್ತೇಜನ ನೀಡುವುದರ ಜೊತೆಗೆ ಸರ್ಕಾರವು ಆಮೂಲಾಗ್ರ ಬದಲಾವಣೆಗಳನ್ನು ತರುತ್ತಿದೆ. ಅಲ್ಲದೆ, ಪದ್ಮ ಪ್ರಶಸ್ತಿಗಳು ಹಾಗೂ ಸುಗಮ ವ್ಯವಹಾರದಲ್ಲಿ ಅನೇಕ ಸುಧಾರಣಾತ್ಮಕ ಬದಲಾವಣೆಗಳನ್ನು ತರಲಾಗಿದೆ. ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿ ರದ್ದು ಅಥವಾ ಜಿಎಸ್‌ಟಿ ಜಾರಿಯಂತಹ ಅನೇಕ ದಿಟ್ಟ ಕ್ರಮಗಳು ನವ ಭಾರತದ ಆಶಯಗಳನ್ನು ರೂಪಿಸುತ್ತಿವೆ.

ನವ ಭಾರತದ ಅಭಿವೃದ್ಧಿ ಪಯಣವನ್ನು ಬರೆಯಲು ಸರ್ಕಾರವು ಹಲವು ವಿನೂತನ ಮತ್ತು ವಿಶಿಷ್ಟ ಹೆಜ್ಜೆಗಳನ್ನು ಇಡುತ್ತಿದೆ.

**ಆತ್ಮನಿರ್ಭರ ಭಾರತ ಮತ್ತು ಸ್ಥಳೀಯತೆಗೆ ಆದ್ಯತೆ ಅಭಿಯಾನಗಳು ಕೇವಲ ಒಂದು ಕರೆಯಿಂದಾಗಿ ಜನಾಂದೋಲನವಾದವು**

2047 ರಲ್ಲಿ ಭಾರತವು ತನ್ನ ಸ್ವಾತಂತ್ರ್ಯದ ಶತಮಾನೋತ್ಸವ ವರ್ಷವನ್ನು ಆಚರಿಸುವ ಸಮಯಕ್ಕೆ ಈ ಸಂಕಲ್ಪಗಳನ್ನು ಸಾಧಿಸುವುದರಿಂದ ಭಾರತವು ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

ವಾಸ್ತವವಾಗಿ, ಇದು ಪ್ರಧಾನಿ ನರೇಂದ್ರ ಮೋದಿ ಅವರ ವ್ಯಕ್ತಿತ್ವದ ಉತ್ತಮ ಗುಣವಾಗಿದ್ದು, ಅವರು ದೈನಂದಿನ ಚಟುವಟಿಕೆಗಳಲ್ಲಿಯೂ ಭಾವನಾತ್ಮಕ ಶಕ್ತಿಯನ್ನು ತುಂಬುತ್ತಾರೆ. ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ, ಲೋಕಮಾನ್ಯ ಬಾಲಗಂಗಾಧರ ತಿಲಕರು ಗಣೇಶ



## ಅಮೃತ ಕಾಲ

# ಸ್ವಾತಂತ್ರ್ಯ ದಿನದಂದು ಹೊಸ ಸಂಕಲ್ಪ

ನಮ್ಮ ಸ್ವಾತಂತ್ರ್ಯ ದಿನವಾದ ಆಗಸ್ಟ್ 15 ಇನ್ನು ಮುಂದೆ ಕೇವಲ ದಿನಾಂಕವಲ್ಲ. ಅದು ನವ ಭಾರತದ ಸಂಕಲ್ಪ. ಈಗ ಕೆಂಪು ಕೋಟೆಯಿಂದ ಕೇವಲ ಘೋಷಣೆಗಳನ್ನು ಮಾಡಲಾಗುವುದಿಲ್ಲ. ಬದಲಿಗೆ ಅವುಗಳನ್ನು ಜನಾಂದೋಲನವನ್ನಾಗಿಸುವ ಮೂಲಕ ಸಾಕಾರಗೊಳಿಸಲಾಗುತ್ತಿದೆ.

- ಸ್ವಾತಂತ್ರ್ಯದ 75 ನೇ ವರ್ಷವನ್ನು ಅಮೃತ ಮಹೋತ್ಸವ ಎಂದು ಹೆಸರಿಸಲಾಗಿದೆ. ಇದನ್ನು ಆಯೋಜಿಸಲು ವಿಶೇಷ ಸಮಿತಿಯನ್ನು ರಚಿಸಲಾಗಿದೆ.
- ಅನಾಮಧೇಯ ವೀರರ ಕಥೆಗಳನ್ನು ಬರೆಯುವಂತೆ ಯುವಕರಿಗೆ ಸ್ಫೂರ್ತಿ ನೀಡಲಾಗಿದೆ.
- ಮುಂದಿನ 25 ವರ್ಷಗಳಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಸಂಕಲ್ಪ ಮಾಡಲಾಗಿದೆ
- ರಾಷ್ಟ್ರಗೀತೆಯನ್ನು ಹಾಡಿದ ವಿಡಿಯೋ ಅಪ್ಲೋಡ್ ಮಾಡಲು ಉಪಕ್ರಮ. 30 ವರ್ಷದೊಳಗಿನ ಯುವ ಬರಹಗಾರರಿಗೆ 'ಯುವ ಯೋಜನೆ' ಆರಂಭ.
- ಕೆಂಪು ಕೋಟೆಯಿಂದ ಮಾಡಿದ ಎಲ್ಲಾ ಘೋಷಣೆಗಳ ಸಾಕಾರ.





ಚತುರ್ಥಿಯನ್ನು ಸಾಮೂಹಿಕ ಜಾಗೃತಿಯ ಮಾಧ್ಯಮವನ್ನಾಗಿ ಮಾಡಿದರು. 1857 ರ ಮೊದಲ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ 'ರೊಟ್ಟಿ ಮತ್ತು ಕಮಲ' ನಮ್ಮ ಸಹಿಷ್ಣುತೆಯ ಸಂಕೇತವಾಯಿತು. ನಾಗರಿಕರ ಸಾಮೂಹಿಕ ಶಕ್ತಿಯು ನಮ್ಮ ಸ್ವಾತಂತ್ರ್ಯದ ಸಾಧನ ಮತ್ತು ಮಾಧ್ಯಮವಾಯಿತು. ಮಹಾತ್ಮ ಗಾಂಧಿಯವರು ಚರಕ ಮತ್ತು ಖಾದಿಯನ್ನು ಉತ್ತೇಜಿಸುವ ಮೂಲಕ ರಾಷ್ಟ್ರವನ್ನು ಜಾಗೃತಗೊಳಿಸಲು ಒಂದು ಬೃಹತ್ ಚಳುವಳಿಯನ್ನು ಮಾಡಿದರು. ಸ್ವಾತಂತ್ರ್ಯ ಚಳುವಳಿಯಿಂದ ಸ್ಫೂರ್ತಿ ಪಡೆದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಮೃತ ಮಹೋತ್ಸವ ವರ್ಷವನ್ನು ಸಂಕಲ್ಪವಾಗಿ ಮಾಡಲು ಸ್ಪಷ್ಟ ಕರೆ ನೀಡಿದ್ದಾರೆ. ಕೆಂಪು ಕೋಟೆಯ ಪ್ರಾಂಗಣದಿಂದ ಮಾಡಿದ ಘೋಷಣೆಗಳು ವಾಸ್ತವವಾಗುತ್ತಿವೆ. ಈಗ ಸಮಾಜದ ಕಟ್ಟಕಡೆಯ ವರ್ಗಕ್ಕೂ ಪ್ರಯೋಜನಗಳನ್ನು ಖಾತ್ರಿಪಡಿಸಲಾಗುತ್ತಿದೆ ಎಂಬುದು ಅವರ ಪ್ರಬಲ ಸಂಕಲ್ಪದ ಫಲಿತಾಂಶವಾಗಿದೆ.

> “ಮೊದಲು ಭರವಸೆಗಳಿಗೆ ಕೊರತೆ ಇರಲಿಲ್ಲ. ಆದರೆ ಆಶಯಗಳಿಗೆ ಕೊರತೆ ಇತ್ತು. ಹಣದ ಕೊರತೆ ಇರಲಿಲ್ಲ, ಆದರೆ ಉತ್ಸಾಹದ ಕೊರತೆಯಿತ್ತು, ಪರಿಹಾರಗಳ ಕೊರತೆ ಇರಲಿಲ್ಲ, ಆದರೆ ಸಾಮರ್ಥ್ಯ ಮತ್ತು ಕಾಯಕ ಸಂಸ್ಕೃತಿಯ ಕೊರತೆಯಿತ್ತು. ಬಹಳ ಸುಲಭವಾಗಿ ಕೆಲವರು ಕಬೀರ್ ದಾಸ್ ಅವರ ನಾಣ್ಣುಡಿಗಳಲ್ಲಿ ಒಂದಾದ
> 'कल करे सो आज कर, आज करे सो अब'
> ನಾಳೆಯ ಕೆಲಸವನ್ನು ಇಂದೇ ಮಾಡು - ಇಂದಿನ ಕೆಲಸವನ್ನು ಈಗಲೇ ಮಾಡು ಎಂಬುದನ್ನು ಉದಾಹರಿಸುತ್ತಾರೆ. ಈ ಭಾವನೆಯು ದಶಕಗಳ ಹಿಂದೆ ನಮ್ಮ ಕೆಲಸದ ಸಂಸ್ಕೃತಿಯಲ್ಲಿ ಬಂದಿದ್ದರೆ ಇಂದು ದೇಶದ ಚಿತ್ರ ಏನಾಗುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಿ.”
>
> - ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಸಾರ್ವಜನಿಕರ ಭಾಗವಹಿಸುವಿಕೆ

# ಸ್ವಚ್ಛತೆ ಈಗ ರಾಷ್ಟ್ರದ ಅಭಿಯಾನವಾಗಿದೆ



**"ನಾವು 21 ನೇ ಶತಮಾನದಲ್ಲಿದ್ದೇವೆ. ನಮ್ಮ ತಾಯಂದಿರು ಮತ್ತು ಸಹೋದರಿಯರು ಬಹಿರ್ದೆಸೆಗಾಗಿ ಬಯಲಿಗೆ ಹೋಗಬೇಕಾಗಿ ಬಂದಿರುವುದಕ್ಕೆ ನಾವು ಎಂದಾದರೂ ನೋವು ಅನುಭವಿಸಿದ್ದೇವೆಯೇ? ಅವರು ಎಷ್ಟು ನೋವನ್ನು ಸಹಿಸಿಕೊಳ್ಳಬೇಕು? ನಮ್ಮ ತಾಯಂದಿರು ಮತ್ತು ಸಹೋದರಿಯರ ಗೌರವಕ್ಕಾಗಿ ಕನಿಷ್ಠ ಶೌಚಾಲಯಗಳ ವ್ಯವಸ್ಥೆಯನ್ನು ಮಾಡಬಹುದಲ್ಲವೇ?**

2014 ರ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿಯವರು ಕೆಂಪು ಕೋಟೆಯಿಂದ ದೇಶಕ್ಕೆ ಈ ಪ್ರಶ್ನೆಯನ್ನು ಕೇಳಿದರು. ಮಾತ್ರವಲ್ಲದೆ ಮಹಾತ್ಮ ಗಾಂಧಿಯವರ 150 ನೇ ಜನ್ಮದಿನದಂದು ಸ್ವಚ್ಛ ಭಾರತದ ದೃಷ್ಟಿಕೋನವನ್ನು ಮುಂದಿರಿಸುವುದರ ಮೂಲಕ ಹೊಸ ಪರಂಪರೆಯನ್ನು ಪ್ರಾರಂಭಿಸಿದರು.

- 5 ವರ್ಷಗಳಲ್ಲಿ 55 ಕೋಟಿಗೂ ಹೆಚ್ಚು ಜನರು ಬಯಲು ಶೌಚದ ಅಭ್ಯಾಸವನ್ನು ಬಿಟ್ಟು ಶೌಚಾಲಯಗಳನ್ನು ಬಳಸಲು ಆರಂಭಿಸಿದರು. ಎಲ್ಲರಿಗೂ ಶೌಚಾಲಯ ಎಂಬ ವಿಶ್ವಸಂಸ್ಥೆಯ ಗುರಿಯನ್ನು ಭಾರತವು 11 ವರ್ಷಗಳ ಮುಂಚೆಯೇ ಸಾಧಿಸಿತು.
- ಗ್ರಾಮೀಣ ಸ್ವಚ್ಛ ಭಾರತ ಅಭಿಯಾನ ಪ್ರಯಾಣ ಮುಂದುವರಿಸಿದೆ, ಇದು ಈಗ ಪ್ರತಿ ಹಳ್ಳಿಯ ಘನ ಮತ್ತು ದ್ರವ ತ್ಯಾಜ್ಯದ ಸೂಕ್ತ ನಿರ್ವಹಣೆಯ ಗುರಿಯನ್ನು ಹೊಂದಿದೆ. ಇದಕ್ಕಾಗಿ, ಸರ್ಕಾರವು ಐದು ವರ್ಷಗಳವರೆಗೆ 1,40,881 ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತವನ್ನು ಮೀಸಲಿರಿಸಿದೆ.

100 %

**2014 ರಲ್ಲಿ ಇದರ ವ್ಯಾಪ್ತಿ ಕೇವಲ ಶೇಕಡಾ 38.70 ಮಾತ್ರ ಇತ್ತು**

**30 ಆಗಸ್ಟ್ 2021 ರ ವೇಳೆಗೆ**

**10.71**

**ಕೋಟಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ**

**ದೇಶದ ಬಹುತೇಕ ಗ್ರಾಮಗಳನ್ನು ಬಯಲು ಶೌಚ ಮುಕ್ತ ಎಂದು ಘೋಷಿಸಲಾಗಿದೆ**



**ಸಾಮೂಹಿಕ ಮತ್ತು ಜಾಗತಿಕ ಕಲ್ಯಾಣ ಯೋಜನೆಗಳಲ್ಲಿ ಜನರ ಭಾಗವಹಿಸುವಿಕೆ**

ಅಭಿವೃದ್ಧಿಗೆ ಒತ್ತು ನೀಡುವಲ್ಲಿ ಉನ್ನತ ನಾಯಕತ್ವದ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಕೆಂಪು ಕೋಟೆಯಿಂದ ಪ್ರಧಾನಿಯವರು ಮಾಡಿದ ಭಾಷಣಗಳಲ್ಲಿ ಇದು ಪ್ರತಿಫಲಿಸುತ್ತದೆ. ಜನಸಾಮಾನ್ಯರಿಂದ ಸಲಹೆಗಳನ್ನು ಆಹ್ವಾನಿಸುವ ಮೂಲಕ ಅಭಿವೃದ್ಧಿ ಯೋಜನೆಗಳಿಗೆ ನಿರ್ದೇಶನ ನೀಡಲು ಇದು ಪ್ರಬಲ ಮಾಧ್ಯಮವಾಯಿತು. ಕೆಂಪು ಕೋಟೆಯಿಂದ ತಮ್ಮ ಮೊದಲ ಭಾಷಣದಲ್ಲಿ, ಅವರು ಪ್ರತಿ ಮನೆಯಲ್ಲೂ ಶೌಚಾಲಯಗಳನ್ನು ಒದಗಿಸುವ ಪ್ರತಿಜ್ಞೆಯನ್ನು ಕೈಗೊಂಡಿದ್ದರು. ಪ್ರಧಾನಿ ಮೋದಿಯವರು ಸ್ವಚ್ಛತೆಯ ಬಗ್ಗೆ ಮಾತನಾಡುವ ಮೂಲಕ ಅದನ್ನು ನಿಜವಾದ ಜನಾಂದೋಲನವನ್ನು ಮಾಡಿದರು. ಮೊದಲ ಬಾರಿಗೆ ಕೆಂಪು ಕೋಟೆಯಿಂದ, ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡ್‌ಗಳ ಮಹತ್ವದ ಕುರಿತು ಪ್ರಧಾನಮಂತ್ರಿಯವರು ಭಾಷಣವನ್ನು ಆರಂಭಿಸಿದರು. ಮಹಾತ್ಮ ಗಾಂಧಿಯವರ ಜನ್ಮ ದಿನವಾದ ಅಕ್ಟೋಬರ್ 2,

**ದೇಶಕ್ಕೆ ಸೇವೆ ಸಲ್ಲಿಸುತ್ತಿರುವ ಸೈನಿಕರಿಗೆ ದೀಪಾವಳಿಯಂದು ಕೃತಜ್ಞತೆ ಸಲ್ಲಿಸುವಂತೆ 'ಸಂದೇಶ್2ಸೋಲ್ಜರ್ಸ್' - ಸೈನಿಕರಿಗೆ ಸಂದೇಶ ಅಭಿಯಾನದ ಮೂಲಕ ನಾಗರಿಕರಿಗೆ ಪ್ರಧಾನಿ ಕರೆ ನೀಡಿದರು.**

2014 ರಂದು, ಪ್ರಧಾನಿ ಮೋದಿ ದೇಶದಾದ್ಯಂತ ಸ್ವಚ್ಛತೆಯನ್ನು ಉತ್ತೇಜಿಸಲು 'ಸ್ವಚ್ಛ ಭಾರತ್ ಮಿಷನ್'ಗೆ ಚಾಲನೆ ನೀಡಿದರು. 2014 ರಲ್ಲಿ ನೈರ್ಮಲ್ಯ ವ್ಯಾಪ್ತಿಯು ಶೇ.38 ಆಗಿತ್ತು, ಅದು ಇಂದು ಶೇ.99 ಕ್ಕೆ ಏರಿದೆ. ಹಲವಾರು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಬಯಲು ಶೌಚ ಮುಕ್ತ (ಒಡಿಎಫ್) ಎಂದು ಘೋಷಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಸ್ವಚ್ಛ ಭಾರತ್ ಮಿಷನ್ ಅನ್ನು ಶ್ಲಾಘಿಸಿದೆ ಮತ್ತು ಇದು 3 ಲಕ್ಷ ಜೀವಗಳನ್ನು ಉಳಿಸಬಹುದು ಎಂದು ಹೇಳಿದೆ.

ಸ್ವಚ್ಛತೆ ಮಾತ್ರವಲ್ಲ, ಸಾಮಾಜಿಕ ಕಾಳಜಿಗೆ ಸಂಬಂಧಿಸಿದ ಯೋಜನೆಗಳಲ್ಲಿ ಮೊದಲ ಬಾರಿಗೆ ಕೇಂದ್ರ



ಸೌಲಭ್ಯಗಳ ಸುಧಾರಣೆ

# ಸುಲಭ ಬದುಕು ಮತ್ತು ಸುಗಮ ವ್ಯಾಪಾರದಲ್ಲಿ ಸುಧಾರಣೆ

**ಉದ್ಯಮಗಳ ಬಗ್ಗೆ ದೇಶದಲ್ಲಿ ಬೆಳೆಯುತ್ತಿರುವ ನಂಬಿಕೆಯ ಪರಿಣಾಮವಾಗಿ, ಸುಗಮ ವ್ಯಾಪಾರ ಮತ್ತು ಸುಲಭ ಜೀವನದಲ್ಲಿ ಸುಧಾರಣೆಯಾಗಿದೆ. ಈಗ ಪ್ರತಿಯೊಬ್ಬರೂ ದೇಶದ ಸಂಪನ್ಮೂಲಗಳ ಮೇಲೆ ಹಕ್ಕನ್ನು ಪಡೆಯುತ್ತಿದ್ದಾರೆ.**

- ಕೋವಿಡ್ ಅವಧಿಯಲ್ಲಿ 2 ಲಕ್ಷ ಕೋಟಿ ರೂ ವೆಚ್ಚದಲ್ಲಿ 80 ಕೋಟಿಗೂ ಹೆಚ್ಚು ಜನರಿಗೆ ಉಚಿತ ಪಡಿತರವನ್ನು ಒದಗಿಸಲಾಗಿದೆ.
- 65.41 ಕೋಟಿಗೂ ಹೆಚ್ಚು ಕೋವಿಡ್ ಲಸಿಕೆ ಡೋಸ್‌ಗಳನ್ನು ನೀಡಲಾಗಿದೆ - ಎಲ್ಲರಿಗೂ ಉಚಿತ ಲಸಿಕೆ.
- 8 ಕೋಟಿಗೂ ಹೆಚ್ಚು ಕುಟುಂಬಗಳಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲಾಗಿದೆ.
- 2 ಕೋಟಿಗೂ ಹೆಚ್ಚು ಕುಟುಂಬಗಳಿಗೆ ಪಕ್ಕಾ ಮನೆಗಳನ್ನು ನೀಡಲಾಗಿದೆ.
- 2024 ರ ವೇಳೆಗೆ ಎಲ್ಲಾ ಗ್ರಾಮೀಣ ಮನೆಗಳಿಗೆ ಉಚಿತ ಕೊಳವೆ ನೀರಿನ ಸಂಪರ್ಕ, ಇದರಲ್ಲಿ 8 ಕೋಟಿ ಕುಟುಂಬಗಳು ಸೌಲಭ್ಯದ ಅಡಿಯಲ್ಲಿ ಪ್ರಯೋಜನವನ್ನು ಪಡೆದಿವೆ.





**43** ಕೋಟಿ ಜನ್ ಧನ್ ಖಾತೆಗಳನ್ನು ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸಲು ತೆರೆಯಲಾಗಿದೆ

**2300** ಕೋಟಿಗಳನ್ನು 23 ಲಕ್ಷಕ್ಕೂ ಹೆಚ್ಚು ಬೀದಿ ಬದಿ ವ್ಯಾಪಾರಿಗಳಿಗೆ ಸ್ವನಿಧಿ ಯೋಜನೆಯಡಿ ನೀಡಲಾಗಿದೆ.

- ಕೋವಿಡ್ ಅವಧಿಯಲ್ಲಿ 20 ಕೋಟಿಗೂ ಹೆಚ್ಚು ಮಹಿಳೆಯರ ಜನ-ಧನ್ ಖಾತೆಗಳಿಗೆ 30 ಸಾವಿರ ಕೋಟಿ ರೂಗಳನ್ನು ವರ್ಗಾಯಿಸಲಾಗಿದೆ.
- ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ 11.4 ಕೋಟಿಗೂ ಹೆಚ್ಚು ರೈತರಿಗೆ 1.5 ಲಕ್ಷ ಕೋಟಿ ರೂಗೂ ಹೆಚ್ಚು ಮೊತ್ತ ನೀಡಲಾಗಿದೆ.
- ಪಿ ಎಂ ಜೆ ಎ ವೈ- ಆಯುಷ್ಮಾನ್ ಭಾರತ್ ಅಡಿಯಲ್ಲಿ 50 ಕೋಟಿಗೂ ಹೆಚ್ಚು ಜನರು 5 ಲಕ್ಷ ರೂಗಳವರೆಗೆ ಉಚಿತ ಚಿಕಿತ್ಸಾ ಸೌಲಭ್ಯವನ್ನು ಪಡೆದಿದ್ದಾರೆ.

ಸರ್ಕಾರವು ಫಲಾನುಭವಿಗಳನ್ನು ನೇರ ಭಾಗೀದಾರರನ್ನಾಗಿ ಮಾಡಿತು. ಇದರಿಂದ ಭ್ರಷ್ಟಾಚಾರ ರಹಿತ ವಿತರಣೆಯನ್ನು ಖಾತ್ರಿಪಡಿಸಲಾಗಿದೆ. ಅದಕ್ಕಾಗಿಯೇ ಪ್ರಧಾನಮಂತ್ರಿಯವರು ದೇಶದ ಜನರಲ್ಲಿ ಹೊಸ ಭರವಸೆ ಮತ್ತು ಶಕ್ತಿಯನ್ನು ತುಂಬಿದರು, ತಮ್ಮ ಪ್ರತಿಯೊಂದು ಯೋಜನೆ ಮತ್ತು ಚಿಂತನೆಯಲ್ಲಿ ಅವರು ಜನರನ್ನು ಸಂಪರ್ಕಿಸಿದರು. ವಾಸ್ತವವಾಗಿ, 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಮತ್ತು ಸಬ್ಕಾ ಪ್ರಯಾಸ್' ಎಂಬ ಧ್ಯೇಯವಾಕ್ಯದಿಂದ ಪ್ರೇರಿತವಾಗಿ, ಆಡಳಿತ ವ್ಯವಸ್ಥೆಯಲ್ಲಿ ಒಂದು ಮಾದರಿ ಬದಲಾವಣೆಯು ಪ್ರಾರಂಭವಾಗಿದೆ, ಇದು ಎಲ್ಲರನ್ನೂ ಒಳಗೊಳ್ಳುವ, ಅಭಿವೃದ್ಧಿ-ಆಧಾರಿತ ಮತ್ತು ಭ್ರಷ್ಟಾಚಾರ ರಹಿತ ಆಡಳಿತವನ್ನು ಖಚಿತಪಡಿಸುವ ಗುರಿಯನ್ನು ಹೊಂದಿದೆ. ಅಂತ್ಯೋದಯದ ಉದ್ದೇಶವನ್ನು ಅರಿತುಕೊಳ್ಳಲು ಮತ್ತು ಸಮಾಜದ ಕಟ್ಟಕಡೆಯ ಜನರು ಸರ್ಕಾರದ ಯೋಜನೆಗಳು ಮತ್ತು ಉಪಕ್ರಮಗಳ ಪ್ರಯೋಜನಗಳನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಅಭಿವೃದ್ಧಿ ಯೋಜನೆಗಳನ್ನು ಹೆಚ್ಚಿನ ವೇಗದಲ್ಲಿ ತಲುಪಿಸುವುದು ಪ್ರಧಾನಮಂತ್ರಿಯವರ ಪ್ರಯತ್ನವಾಗಿದೆ. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಭಾರತವು ದಾಖಲೆಯ ವೇಗದಲ್ಲಿ ಬಡತನವನ್ನು ನಿವಾರಿಸುತ್ತದೆ ಎಂದು ಹಲವಾರು ಅಂತಾರಾಷ್ಟ್ರೀಯ ಸಂಸ್ಥೆಗಳು ಈಗ ಒಪ್ಪಿಕೊಳ್ಳುತ್ತಿವೆ. ಇಂದು ಭಾರತವು ವಿಶ್ವದ ಅತಿದೊಡ್ಡ ಆರೋಗ್ಯ ರಕ್ಷಣಾ ಕಾರ್ಯಕ್ರಮವಾದ ಆಯುಷ್ಮಾನ್ ಭಾರತ್ ಅನ್ನು ಮುನ್ನಡೆಸುತ್ತಿದೆ. 50 ಕೋಟಿಗೂ ಹೆಚ್ಚು ಭಾರತೀಯರನ್ನು ಒಳಗೊಂಡ ಆಯುಷ್ಮಾನ್ ಭಾರತ್ ಬಡ ಮತ್ತು ನವ-ಮಧ್ಯಮ ವರ್ಗದವರಿಗೆ ಉತ್ತಮ ಗುಣಮಟ್ಟದ ಮತ್ತು ಕೈಗೆಟುಕುವ ಆರೋಗ್ಯ ಸೇವೆಯನ್ನು ಖಾತ್ರಿಪಡಿಸುತ್ತಿದೆ. ವಿಶ್ವದ ಅತ್ಯಂತ ಪ್ರಸಿದ್ಧ ಆರೋಗ್ಯ ನಿಯತಕಾಲಿಕಗಳಲ್ಲಿ ಒಂದಾದ ಲ್ಯಾನ್ಸೆಟ್, ಆಯುಷ್ಮಾನ್ ಭಾರತ್ ಅನ್ನು ಪ್ರಶಂಸಿಸಿದೆ, ಈ ಯೋಜನೆಯು ಭಾರತದ ಆರೋಗ್ಯ ವಲಯದಲ್ಲಿನ ನ್ಯೂನತೆಗಳನ್ನು ಪರಿಹರಿಸುತ್ತಿದೆ ಎಂದು ಅದು ಹೇಳಿದೆ.

ಕೃಷಿಯನ್ನು ಲಾಭದಾಯಕವಾಗಿಸುವುದಾಗಲಿ, ರೈತರ ಆದಾಯವನ್ನು ದ್ವಿಗುಣಗೊಳಿಸುವ ಗುರಿಯಾಗಲಿ ಅಥವಾ ರೈತರನ್ನು ಋಣಮುಕ್ತರನ್ನಾಗಿ ಮಾಡುವ ಉಪಕ್ರಮವಾಗಲಿ,



ಸಾಮಾನ್ಯ ಬಜೆಟ್

# ಪ್ರಾಯೋಗಿಕ ವಿಧಾನ ಅಳವಡಿಕೆ

- ಮೊದಲ ಬಾರಿಗೆ, ಆರೋಗ್ಯ ಕ್ಷೇತ್ರವು ಸರ್ಕಾರದ ಆದ್ಯತೆಯಾಗಿದೆ. ಬಜೆಟ್ ನಲ್ಲಿ ಈ ವಲಯಕ್ಕೆ ಶೇ. 137 ರಷ್ಟು ಹೆಚ್ಚಳ ಮಾಡಲಾಗಿದೆ.
- ಒಂದು ದೇಶ ಒಂದು ಪಡಿತರ ಚೀಟಿ ಯೋಜನೆಯ ಮೂಲಕ ವಲಸೆ ಕಾರ್ಮಿಕರು ದೇಶದಲ್ಲಿ ಎಲ್ಲಿಯಾದರೂ ಪಡಿತರ ಪಡೆಯುವ ಹಕ್ಕನ್ನು ಪಡೆದಿದ್ದಾರೆ.
- ದೇಶದಲ್ಲಿ ಮೊದಲ ಬಾರಿಗೆ, ಆರ್ಥಿಕವಾಗಿ ದುರ್ಬಲವಾಗಿರುವ ಮೇಲ್ವರ್ಗದವರಿಗೆ ಶೇ.10 ಮೀಸಲಾತಿಯ ಲಾಭ.
- ಜನಸಾಮಾನ್ಯರ ಅಗ್ಗದ ವಿಮಾನ ಪ್ರಯಾಣದ ಕನಸನ್ನು 'ಉಡಾನ್' ಯೋಜನೆಯ ಮೂಲಕ ಸಾಕಾರಗೊಳಿಸಲಾಗುತ್ತಿದ್ದು, ಇದು ಕೇವಲ 2500 ರೂಗಳಲ್ಲಿ 500 ಕಿಮೀ ವಿಮಾನ ಪ್ರಯಾಣವನ್ನು ಸಾಧ್ಯವಾಗಿಸುತ್ತದೆ
- ಸುಗಮ ವ್ಯಾಪಾರದಲ್ಲಿ ಭಾರತದ ಶ್ರೇಯಾಂಕವು 2014 ರಿಂದ 79 ಸ್ಥಾನ ಸುಧಾರಣೆ ಕಂಡು 63 ನೇ ಸ್ಥಾನಕ್ಕೇರಿದೆ.
- ಎಂಎಸ್ಎಂಇ ವಲಯವು 11 ಕೋಟಿ ಜನರಿಗೆ ಉದ್ಯೋಗದ ಮೂಲವಾಗಿದೆ, ಇದು ಜಿಡಿಪಿಗೆ 29 ಪ್ರತಿಶತದಷ್ಟು ಕೊಡುಗೆ ನೀಡುತ್ತದೆ. ಈ ವಲಯಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಲಾಗಿದೆ
- 13 ಕ್ಷೇತ್ರಗಳಿಗೆ 1.97 ಲಕ್ಷ ಕೋಟಿ ರೂ. ಬಜೆಟ್ ಹೊಂದಿರುವ ಪಿ ಎಲ್ ಐ ಯೋಜನೆಗೆ ಅನುಮೋದನೆ ನೀಡಲಾಗಿದೆ.

- ಈ ಮೊದಲು ಫೆಬ್ರವರಿ ಅಂತ್ಯದಲ್ಲಿ ಮಂಡಿಸಲಾಗುತ್ತಿದ್ದ ಸಾಮಾನ್ಯ ಬಜೆಟ್ ಈಗ ಫೆಬ್ರವರಿ 1 ರಂದು ಮಂಡನೆಯಾಗುತ್ತಿದೆ. ಇದರ ಅನುಕೂಲವೆಂದರೆ ಬಜೆಟ್ ಪ್ರಸ್ತಾಪಗಳು ಈಗ ಸಮಯಕ್ಕೆ ಸರಿಯಾಗಿ ಜಾರಿಯಾಗುತ್ತಿವೆ.
- ಸಾಮಾನ್ಯ ಬಜೆಟ್‌ನ ನಂತರ ಮೊದಲ ಬಾರಿಗೆ, ಪ್ರಧಾನಮಂತ್ರಿಯವರು ಎಲ್ಲಾ ಪಾಲುದಾರರೊಂದಿಗೆ ಸಂವಾದವನ್ನು ಆರಂಭಿಸಿದ್ದಾರೆ, ಇದರಿಂದ ಯೋಜನೆಗಳು ಮತ್ತು ಬಜೆಟ್ ಹಂಚಿಕೆಗಳು ಸಕಾಲದಲ್ಲಿ ಜಾರಿಗೆ ಬರುತ್ತವೆ.
- ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿಸುವ ನಿಟ್ಟಿನಲ್ಲಿ ಸಾಮಾನ್ಯ ಬಜೆಟ್ ಅನ್ನು ದೀರ್ಘಾವಧಿಯ ದೃಷ್ಟಿಕೋನದ ಬುನಾದಿಯನ್ನಾಗಿ ಮಾಡಲಾಗಿದೆ.
- ವಿದ್ಯಾರ್ಥಿಗಳು 12 ನೇ ತರಗತಿಯ ಪರೀಕ್ಷೆಯನ್ನು ಒತ್ತಡ ಮುಕ್ತರಾಗಿ ಬರೆಯಲು ಅನುವಾಗುವಂತೆ ಪ್ರಥಮ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಪರೀಕ್ಷೆಯ ಕುರಿತು ಚರ್ಚೆಯನ್ನು ಆರಂಭಿಸಿದರು. ಸರ್ಕಾರದಲ್ಲಿ ಯುವಕರನ್ನು ಪಾಲುದಾರರನ್ನಾಗಿ ಮಾಡಲು ಯುವ ಸಂಸತ್ತಿನ ಉಪಕ್ರಮವನ್ನು ಜಾರಿಮಾಡಲಾಗಿದೆ.
- ಪ್ರಧಾನಿಯವರು ಮೊದಲ ಬಾರಿಗೆ ಕ್ರೀಡಾಪಟುಗಳೊಂದಿಗೆ ನೇರ ಸಂವಾದ ನಡೆಸಿದ್ದರಿಂದ ದೇಶದಲ್ಲಿ ಕ್ರೀಡಾ ಸಂಸ್ಕೃತಿಗೆ ಉತ್ತೇಜನ ದೊರೆತಿದೆ.
- ಸರ್ಕಾರದ ಯೋಜನೆಗಳ ಫಲಾನುಭವಿಗಳು ಭ್ರಷ್ಟಾಚಾರ ಮುಕ್ತ ಪರಿಸರದಲ್ಲಿ ಎಲ್ಲಾ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.



ಕೇಂದ್ರ ಸರ್ಕಾರದ ಹೊಸ ನೀತಿಯ ಪರಿಣಾಮಗಳು ಈಗ ಗೋಚರಿಸುತ್ತಿವೆ.

ಇದುವರೆಗೆ, 1 ಲಕ್ಷ 60 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನೇರವಾಗಿ 11 ಕೋಟಿಗೂ ಅಧಿಕ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದ್ದು, ಇದು ರೈತರಿಗೆ ವರದಾನವಾಗಿದೆ. ದೇಶದ ಪ್ರತಿಯೊಬ್ಬರಿಗೂ ಸಂಪನ್ಮೂಲಗಳ ಮೇಲೆ ಸಮಾನ ಹಕ್ಕುಗಳಿವೆ ಎಂದು ಖಾತ್ರಿಪಡಿಸಲಾಗುತ್ತಿದೆ.

**ಹೊಸ ಮನೋಭಾವದೊಂದಿಗೆ ದೇಶದಲ್ಲಿ ಬದಲಾವಣೆ**

ಜಾಗತಿಕ ಕಾರ್ಯಸೂಚಿಯನ್ನು ರೂಪಿಸಲು ಭಾರತಕ್ಕೆ ಒಂದು ಅನನ್ಯ ಅವಕಾಶವಿದೆ. ಈ ಅವಕಾಶಗಳನ್ನು ಬಳಸಿಕೊಳ್ಳುವ ಮೂಲಕ, ಭಾರತವು ತನ್ನನ್ನು ವಿಶ್ವಕ್ಕೆ ಒಂದು ಮಾದರಿ ಮತ್ತು ಸ್ಫೂರ್ತಿಯಾಗಿ ಸ್ಥಾಪಿಸಿಕೊಳ್ಳಬಹುದು. ಆದರೆ ಸ್ವಾತಂತ್ರ್ಯದ ನಂತರ, ಈ ದಿಕ್ಕಿನಲ್ಲಿ ದೀರ್ಘಾವಧಿಯವರೆಗೆ ಯಾವುದೇ ಕ್ರಮಗಳು ಇರಲಿಲ್ಲ, ಅಂದರೆ ಸೂಕ್ತ ವಿಧಾನದ ಕೊರತೆ ಇತ್ತು ಎಂಬುದು ತಿಳಿಯುತ್ತದೆ. ಆದರೆ ಈಗಿನ

**ಜನಸಾಮಾನ್ಯರೊಂದಿಗೆ ಸಂವಹನ ನಡೆಸುವ ಒಂದು ಅನನ್ಯ ಉಪಕ್ರಮವಾದ `ಮನ್ ಕಿ ಬಾತ್' ಕಾರ್ಯಕ್ರಮವನ್ನು ಪ್ರತಿ ತಿಂಗಳ ಕೊನೆಯ ಭಾನುವಾರ ಆರಂಭಿಸಲಾಗಿದೆ.**

ಕೇಂದ್ರ ಸರ್ಕಾರದ ಹೊಸ ಚಿಂತನೆಯನ್ನು ಈ ಎರಡು ಉದಾಹರಣೆಗಳಿಂದ ಅರ್ಥಮಾಡಿಕೊಳ್ಳಬಹುದು. ಹಿಂದೆ ಹಿಂದುಳಿದ ಎಂದು ಕರೆಯಲಾಗುತ್ತಿದ್ದ ಜಿಲ್ಲೆ ಅಥವಾ ರಾಜ್ಯವನ್ನು ಈಗ ಪ್ರಧಾನಿಯವರು 'ಮಹತ್ವಾಕಾಂಕ್ಷೆಯ ಜಿಲ್ಲೆಗಳು' ಎಂದು ಹೆಸರಿಸಿದ್ದಾರೆ. ಅಂದರೆ, ಅಭಿವೃದ್ಧಿಯ ಮುಖ್ಯವಾಹಿನಿಗೆ ಸೇರುವ ಆಕಾಂಕ್ಷೆ ಹೊಂದಿರುವವರಿಗೆ ಅವಕಾಶದ ಅಗತ್ಯವಿರುತ್ತದೆ. ಅಂತೆಯೇ, ಟೋಕಿಯೋ ಪ್ಯಾರಾಲಿಂಪಿಕ್ಸ್‌ನಲ್ಲಿ, ಭಾರತೀಯ ಕ್ರೀಡಾಪಟುಗಳು ತಮ್ಮ ಸಾಮರ್ಥ್ಯವನ್ನು ತೋರಿಸಿದ್ದಾರೆ. ವರ್ತನೆಯ ಬದಲಾವಣೆಯಿಂದಾಗಿ ಇದು ಸಾಧ್ಯವಾಗಿದೆ. ಅವರನ್ನು ಒಂದು ಕಾಲದಲ್ಲಿ ಸಮಾಜದಲ್ಲಿ ದುರ್ಬಲರೆಂದು ಪರಿಗಣಿಸಲಾಗುತ್ತಿತ್ತು ಮತ್ತು ವಿಕಲಾಂಗ ಚೇತನರೆಂದು




ಪ್ರಗತಿಪರ ಉಪಕ್ರಮಗಳು

# ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ದೃಢ ಸಂಕಲ್ಪ

- ಅಭಿವೃದ್ಧಿ ಯೋಜನೆಗಳು ಅನುಷ್ಠಾನ ಹಂತದಲ್ಲಿ ನನೆಗುದಿಗೆ ಬಿದ್ದಿದ್ದ ಕಾಲವೊಂದಿತ್ತು. ಕೇರಳದ ಕೊಲ್ಲಂನಲ್ಲಿ ಹದಿಮೂರೂವರೆ ಕಿಮೀ ಬೈಪಾಸ್ ನಿರ್ಮಿಸಲು 5 ದಶಕಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳಲಾಗಿತ್ತು. ಒಡಿಶಾದಲ್ಲಿ ಖುರ್ದಾ-ಬಲಂಗೀರ್ ರೈಲು ಮಾರ್ಗವನ್ನು ನಿರ್ಮಿಸಲು 25 ವರ್ಷಗಳಿಗಿಂತ ಹೆಚ್ಚು ಸಮಯ ಹಿಡಿದಿತ್ತು.
- ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ತಕ್ಷಣ, ಅವರು 'ಪ್ರಗತಿ' ವೇದಿಕೆಯನ್ನು ರಚಿಸುವ ಮೂಲಕ ಇಂತಹ ಸಮಸ್ಯೆಗಳನ್ನು ಪರಿಹರಿಸುವತ್ತ ಹೆಜ್ಜೆ ಹಾಕಿದರು. ಭವಿಷ್ಯದ ಯೋಜನೆಗಳನ್ನು ಅವರೇ ಪರಿಶೀಲಿಸುತ್ತಾರೆ.
- 'ಪ್ರಗತಿ' ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ (ಐಸಿಟಿ) ಆಧಾರಿತ ಬಹು-ಮಾದರಿ ವೇದಿಕೆಯಾಗಿದೆ. ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಅದರಲ್ಲಿರುವ ಅಡೆತಡೆಗಳನ್ನು ತೆಗೆದುಹಾಕುವುದು ಇದರ ಉದ್ದೇಶವಾಗಿದೆ.
- 'ಪ್ರಗತಿ'ಯ 37 ಸಭೆಗಳಲ್ಲಿ ನಡೆಸಿರುವ ಪ್ರಧಾನ ಮಂತ್ರಿಯವರು 14 ಲಕ್ಷ ಕೋಟಿ ರೂ ಮೌಲ್ಯದ 300 ಯೋಜನೆಗಳನ್ನು ಪರಿಶೀಲಿಸಿದ್ದಾರೆ.

## ದಶಕಗಳಷ್ಟು ಸಮಯ ಕಡಿತ

- ಜಮ್ಮು ಮತ್ತು ಕಾಶ್ಮೀರದ 370 ನೇ ವಿಧಿಯನ್ನು ರದ್ದುಗೊಳಿಸಿ, ಅದನ್ನು ಮತ್ತೆ ಅಭಿವೃದ್ಧಿಯ ಪಥದಲ್ಲಿ ತರಲಾಗಿದೆ.
- ಒಂದು ರಾಷ್ಟ್ರ-ಒಂದು ತೆರಿಗೆ ಅಂದರೆ ಜಿಎಸ್‌ಟಿಯಿಂದ ಆರ್ಥಿಕ ಕ್ರಾಂತಿಯು ಆರಂಭವಾಯಿತು. ಅಭಿವೃದ್ಧಿಯನ್ನು ವೇಗಗೊಳಿಸಲು ಕೊಲ್ಲಂ ಬೈಪಾಸ್, ಚೆನಾಬ್ ಸೇತುವೆ, ಅಟಲ್ ಸುರಂಗ, ಜೊಜಿಲಾ ಸುರಂಗ, ಬೋಗಿಬೀಲ್ ಸೇತುವೆ, ಪಂಬನ್ ಸೇತುವೆ ಮುಂತಾದ ವಿವಿಧ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ.



ಅಯೋಧ್ಯೆಯಲ್ಲಿ ಭಗವಾನ್ ಶ್ರೀರಾಮ ಮಂದಿರಕ್ಕೆ ಭೂಮಿಪೂಜೆ.
ಶ್ರೀ ಕರ್ತಾರ್‌ಪುರ ಕಾರಿಡಾರ್ ಉದ್ಘಾಟನೆ

- ಪೌರತ್ವ ಕಾಯ್ದೆಯ ತಿದ್ದುಪಡಿಯಿಂದಾಗಿ ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶದ ಅಲ್ಪಸಂಖ್ಯಾತರು ದಶಕಗಳ ನಂತರ ನ್ಯಾಯವನ್ನು ಪಡೆದರು. ತ್ರಿವಳಿ ತಲಾಕ್ ಕಾನೂನಿನ ಮೂಲಕ ಶತಮಾನಗಳ ನಂತರ ಮುಸ್ಲಿಂ ಮಹಿಳೆಯರಿಗೆ ನ್ಯಾಯ ದೊರೆಯಿತು.
- 5 ದಶಕಗಳ ಸುದೀರ್ಘ ಕಾಯುವಿಕೆಯ ನಂತರ, ಬೋಡೋ ಒಪ್ಪಂದವು ಈ ಪ್ರದೇಶದಲ್ಲಿ ಶಾಂತಿಯನ್ನು ತಂದಿತು ಮತ್ತು ಬ್ರೂರಿಯಾಂಗ್ ನಿರಾಶ್ರಿತರ ಬಿಕ್ಕಟ್ಟನ್ನು ಸಹ ಪರಿಹರಿಸಲಾಯಿತು.

**ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಈಗ ಸಬ್ ಕಾ ಪ್ರಯಾಸ್ (ಎಲ್ಲರ ಪ್ರಯತ್ನ) ನವ ಭಾರತ ನಿರ್ಮಾಣದ ಮೂಲ ಮಂತ್ರವಾಗಿದೆ.**

ಕರೆಯಲಾಗುತ್ತಿತ್ತು,ಆದರೆ ಪ್ರಧಾನಿ ಮೋದಿ ಅವರನ್ನು ದೈವತ್ವದೊಂದಿಗೆ ಜೋಡಿಸಿ 'ದಿವ್ಯಾಂಗರು' ಎಂದು ಕರೆದರು. ಅಂದರೆ, ಯಾರಿಗೆ ದೇವರು ಒಬ್ಬ ಸಾಮಾನ್ಯ ಮನುಷ್ಯನಿಗಿಂತ ಕೆಲವು ವಿಭಿನ್ನ ಶಕ್ತಿಯನ್ನು ನೀಡಿರುತ್ತಾನೋ ಅವರು ದಿವ್ಯಾಂಗರು. ಈ ಚಿಂತನೆಯ ಫಲಿತಾಂಶವು ದಿವ್ಯಾಂಗರಿಗೆ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಲು ಕಷ್ಟಗಳನ್ನು ಜಯಿಸಲು ಶಕ್ತವಾಗಿದೆ. ಮೊದಲ ಬಾರಿಗೆ, ದೇಶದ ಪ್ರಧಾನಿಯೊಬ್ಬರು ಈ ಆಟಗಾರರೊಂದಿಗೆ ನೇರವಾಗಿ ಸಂವಹನ ನಡೆಸುವುದಲ್ಲದೆ ಅನೌಪಚಾರಿಕ ಚರ್ಚೆಗಳನ್ನು ಮಾಡಿದ್ದಾರೆ. ಹಿಂದೆ ಆಟಗಾರರು ಮಾಧ್ಯಮದ ಮೂಲಕ ಗೆಲುವಿನ ಕುರಿತು ಉನ್ನತ ನಾಯಕತ್ವದಿಂದ ಕೇವಲ ಅಭಿನಂದನಾ ಸಂದೇಶಗಳನ್ನು ಮಾತ್ರ ಪಡೆಯುತ್ತಿದ್ದರು. ಯುವಕರೊಂದಿಗೆ ಸಂವಹನದ ಹೊಸ ಸಂಪ್ರದಾಯಗಳನ್ನು ಸಹ ಪ್ರೋತ್ಸಾಹಿಸಲಾಗುತ್ತಿದೆ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವ ಪ್ರಧಾನ ಮಂತ್ರಿಯವರ ಉಪಕ್ರಮವು ದೇಶವನ್ನು ಒಂದು ತಂತುವಿನಲ್ಲಿ ಬೆಸೆಯುತ್ತದೆ. ಚಿಂತನೆಗಳು ಸಾಮಾಜಿಕ ಮತ್ತು ಮಾನವ ದೃಷ್ಟಿಕೋನವನ್ನು ಬದಲಾಯಿಸಿರುವುದು ಮಾತ್ರವಲ್ಲದೇ, ಆರ್ಥಿಕ ರಂಗದಲ್ಲಿ ದೊಡ್ಡ ಲಾಭ ಗಳಿಸಿದೆ.

ಸಾಮಾನ್ಯ ಬಜೆಟ್ ಈ ಹಿಂದೆ ನಿಗದಿತ ದಿನಾಂಕದ ಏಕತಾನತೆಯ ಸಮಾವೇಶದಂತಾಗಿತ್ತು ಮತ್ತು ಹಣಕಾಸಿನ ಅಗತ್ಯಗಳನ್ನು ಪೂರೈಸುವ ದಾಖಲೆ ಮಾತ್ರವಾಗಿತ್ತು. ಆದರೆ ಈ ಸಂಪ್ರದಾಯವನ್ನು ಮುರಿಯುವ ಮೊದಲ ಉಪಕ್ರಮವು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಕಾಲದಲ್ಲಿ ನಡೆಯಿತು. ಹೊಸ ಶಿಷ್ಟಾಚಾರದ ಪ್ರಕಾರ ಬಜೆಟ್ ಅನ್ನು ಸಂಜೆ 4 ಗಂಟೆಗೆ ಬದಲಾಗಿ 11 ಗಂಟೆಗೆ ಮಂಡಿಸಲಾಯಿತು. ಬ್ರಿಟಿಷರ ಆಳ್ವಿಕೆಯಲ್ಲಿ, ಬ್ರಿಟನ್‌ನಲ್ಲಿ ಹಗಲಿನಲ್ಲಿ ನೋಡಲು ಅನುವಾಗುವಂತೆ 4 ಗಂಟೆಯ ಸಮಯವನ್ನು ನಿಗದಿಪಡಿಸಿದ್ದರು. ಅಟಲ್ ಜಿಯವರ ಉಪಕ್ರಮವನ್ನು ಮುಂದುವರೆಸಿದ ಪ್ರಧಾನ





ಇ-ಆಡಳಿತ

# ವಿವಿಧ ಸುಧಾರಣೆಗಳ ಮೂಲಕ ನಾಗರಿಕರ ಸಬಲೀಕರಣ

**ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್ ಮೂಲ ಮಂತ್ರದೊಂದಿಗೆ, ಉತ್ತಮ ಆಡಳಿತವು 130 ಕೋಟಿಗೂ ಹೆಚ್ಚು ದೇಶವಾಸಿಗಳಿಗೆ ಜೀವನವನ್ನು ಸುಲಭವಾಗಿಸಿದೆ ಮತ್ತು ಅವರನ್ನು ಸರ್ಕಾರದ ಆಡಳಿತ ಯಂತ್ರದ ಅಡಚಣೆಗಳಿಂದ ಮುಕ್ತಗೊಳಿಸಿದೆ.**

- ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್ ಮೂಲ ಮಂತ್ರದೊಂದಿಗೆ, ಉತ್ತಮ ಆಡಳಿತವು 130 ಕೋಟಿಗೂ ಹೆಚ್ಚು ದೇಶವಾಸಿಗಳಿಗೆ ಜೀವನವನ್ನು ಸುಲಭವಾಗಿಸಿದೆ ಮತ್ತು ಅವರನ್ನು ಸರ್ಕಾರದ ಆಡಳಿತ ಯಂತ್ರದ ಅಡಚಣೆಗಳಿಂದ ಮುಕ್ತಗೊಳಿಸಿದೆ.
- ಮಿಷನ್ ಕರ್ಮಯೋಗಿಗೆ ಚಾಲನೆ. ಅಧಿಕಾರಶಾಹಿಯನ್ನು ಜನಕೇಂದ್ರಿತ ಮತ್ತು ಜನಸ್ನೇಹಿ ಮಾಡಲು ಹೊಸ ಉಪಕ್ರಮ. ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಬಹುದಾದ ಸಾರ್ವಜನಿಕ ಸೇವೆಗಳಿಗಾಗಿ ಮೀಸಲಾದ ಕಾರ್ಯಪಡೆಗಳನ್ನು ರಚಿಸುವುದು ಇದರ ಉದ್ದೇಶ.
- ಕಾರ್ಯನಿರ್ವಹಿಸದ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ಆರಂಭಿಸಲಾಗಿದೆ.
- ನಿವೃತ್ತ ನೌಕರರು ಶ್ಲಾಘನೀಯ ಕೆಲಸವನ್ನು ಪ್ರದರ್ಶಿಸಲು ಅನುವು ಮಾಡಿಕೊಡುವುದು. ವಾರ್ಷಿಕ 'ಜೀವನ್ ಪ್ರಮಾಣ' ಸೌಲಭ್ಯವನ್ನು ವಿದ್ಯುನ್ಮಾನವಾಗಿ ಲಭ್ಯಗೊಳಿಸಲಾಗಿದೆ. ದಾಖಲೆಗಳ ಸ್ವಯಂ ದೃಢೀಕರಣದ ಸೌಲಭ್ಯ.
- ಕೆಳ ಹಂತದ ಉದ್ಯೋಗಗಳಿಗೆ ಸಂದರ್ಶನಗಳನ್ನು ನಿಲ್ಲಿಸಲಾಗಿದೆ. ಆನ್‌ಲೈನ್ ಆರ್‌ಟಿಐ ಆರಂಭಿಸಲಾಗಿದೆ. ಡಿಜಿಲಾಕರ್, ಉಮಂಗ್, ರಾಷ್ಟ್ರೀಯ ಡಿಜಿಟಲ್ ಸಾಕ್ಷರತೆ ಮಿಷನ್, ಇ ಪೋಸ್ಟ್ ಇತ್ಯಾದಿಗಳ ಪ್ರಾರಂಭ.



ವಿದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಭಾರತೀಯರಿಗೆ ಸಾಮಾಜಿಕ ಮಾಧ್ಯಮವು ಉತ್ತಮ ಮಾಧ್ಯಮವಾಗಿದೆ. ದೇಶದಲ್ಲೂ ಈ ಮಾಧ್ಯಮದ ಮೂಲಕ ಸಾಮಾನ್ಯ ಜನರಿಗೆ ತ್ವರಿತ ನೆರವು ಒದಗಿಸಲಾಗಿದೆ.

> ನಾವು ವಿಷಯಗಳನ್ನು ನೋಡುವ ರೀತಿಯನ್ನು ಬದಲಾಯಿಸೋಣ. ಪರಿಭಾಷೆಯನ್ನು ಬದಲಾಯಿಸುವುದು ಸಹ ಕೆಲವೊಮ್ಮೆ ಸಹಾಯ ಮಾಡುತ್ತದೆ. ಮೊದಲು ಜನರು ಇವುಗಳನ್ನು 'ಹಿಂದುಳಿದ ಜಿಲ್ಲೆಗಳು' ಎಂದು ಕರೆಯುತ್ತಿದ್ದರು. ಈಗ ನಾವು ಮಹತ್ವಾಕಾಂಕ್ಷೆಯ ಜಿಲ್ಲೆಗಳು ಎಂದು ಕರೆಯುತ್ತೇವೆ. ಯಾವುದನ್ನಾದರೂ ಶಿಕ್ಷೆಯ ವರ್ಗಾವಣೆ ಎಂದು ಏಕೆ ನೋಡಬೇಕು? ಅದನ್ನು ಒಂದು ಅವಕಾಶವಾಗಿ ಏಕೆ ನೋಡಬಾರದು?



ಮಂತ್ರಿ ಮೋದಿಯವರು ಮೊದಲು ರೈಲ್ವೆ ಬಜೆಟ್ ಅನ್ನು ಸಾಮಾನ್ಯ ಬಜೆಟ್ ನಲ್ಲಿಯೇ ವಿಲೀನಗೊಳಿಸಿದರು ಮತ್ತು ಅತ್ಯಂತ ಕ್ರಾಂತಿಕಾರಿ ಬದಲಾವಣೆ ಮೂಲಕ ಒಂದು ತಿಂಗಳು ಮುಂಚಿತವಾಗಿ ಬಜೆಟ್ ಮಂಡನೆ ಮಾಡಲಾಗುತ್ತಿದೆ.

ಇದಷ್ಟೇ ಅಲ್ಲ, ಪ್ರಧಾನ ಮಂತ್ರಿಯವರು ಸಾಮಾನ್ಯ ಬಜೆಟ್ ನಂತರ ಎಲ್ಲಾ ಪಾಲುದಾರರೊಂದಿಗೆ ನೇರವಾಗಿ ಸಂವಾದ ಮಾಡುವ ಉಪಕ್ರಮವನ್ನು ಆರಂಭಿಸಿದರು. ರಾಷ್ಟ್ರ ನಿರ್ಮಾಣದ ಹೊಸ ಮಾರ್ಗವನ್ನು ಅಳವಡಿಸಿಕೊಂಡರು. ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಸಾಮಾನ್ಯ ಬಜೆಟ್ ನಂತರ, ಪ್ರಧಾನ ಮಂತ್ರಿಯೊಬ್ಬರು ಪಾಲುದಾರರೊಂದಿಗೆ ಸಂವಾದ ನಡೆಸಿದರು. ನಂತರ, ಬಜೆಟ್ ಭರವಸೆಗಳನ್ನು ಅನುಷ್ಠಾನಗೊಳಿಸಲು ಮತ್ತು ಅದರ ಪ್ರಯೋಜನಗಳನ್ನು ಪ್ರತಿಯೊಬ್ಬ ವ್ಯಕ್ತಿಗೂ ತಲುಪುವಂತೆ ಮಾಡುವಲ್ಲಿ ತೊಡಗಿಸಿಕೊಂಡರು. ಸರ್ಕಾರದ ಕಾರ್ಯನಿರ್ವಹಣೆಯ ಮಾದರಿ ಬದಲಾಗಿದೆ, ಆದ್ದರಿಂದ ಹೊಸ ಸಂಸ್ಕೃತಿಯೂ ಬೆಳೆಯುತ್ತಿದೆ. ಈ ಹಿಂದೆ ಸರ್ಕಾರ ಅಥವಾ ನಾಯಕರ ಶಿಫಾರಸುಗಳ ಮೇರೆಗೆ ಪದ್ಮ ಪ್ರಶಸ್ತಿಗಳನ್ನು ವಿತರಿಸಲಾಗುತ್ತಿತ್ತು, ಆದರೆ ಕೇಂದ್ರ ಸರ್ಕಾರವು ಹೊಸ ನೀತಿಯನ್ನು ಮಾಡಿತು. ಇಡೀ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲಿ ಮಾಡಲಾಗಿದ್ದು ಇಲ್ಲಿ ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದು ಅಥವಾ ನಾಮನಿರ್ದೇಶನ ಮಾಡಬಹುದು. ಇದರ ಪರಿಣಾಮವಾಗಿ, ದೇಶದ ತೆರೆಮರೆಯ ನಾಯಕರು ದೇಶದ ಅತ್ಯುನ್ನತ ನಾಗರಿಕ ಗೌರವವನ್ನು ಪಡೆಯಲು ಪ್ರಾರಂಭಿಸಿದ್ದಾರೆ. ಇದಷ್ಟೇ ಅಲ್ಲ, ದಶಕಗಳಿಂದ ಕಡೆಗಣಿಸಲ್ಪಟ್ಟಿರುವ ಭಾರತದ ರಾಷ್ಟ್ರೀಯ ವೀರರಿಗೆ ತಕ್ಕ ಮನ್ನಣೆ ಸಿಗುತ್ತಿದೆ. ಪ್ರಧಾನಿ ಮೋದಿಯವರ ವಿಶೇಷತೆ ಏನೆಂದರೆ, ಮಹಾನ್ ವೀರರ ಜಯಂತಿಯನ್ನು ಅವರು ನಿರ್ದಿಷ್ಟ ವಿಷಯದೊಂದಿಗೆ ಸಂಯೋಜಿಸುತ್ತಾರೆ, ಇದರಿಂದ ಜನರು ಸ್ವಯಂಚಾಲಿತವಾಗಿ ಅದರೊಂದಿಗೆ ಬೆಸೆದುಕೊಳ್ಳುತ್ತಾರೆ. ಉದಾಹರಣೆಗೆ, ಗಾಂಧೀಜಿಯವರ 150 ನೇ ಜನ್ಮ ದಿನಾಚರಣೆಗೆ ಅವರು ಸ್ವಚ್ಛ ಭಾರತದ ಗುರಿಯನ್ನು ಜೋಡಿಸಿದ್ದರು. 'ಅಂತರಾಷ್ಟ್ರೀಯ ಯೋಗ ದಿನ' ಆಚರಿಸುವ ಪ್ರಧಾನಿ ನರೇಂದ್ರ ಮೋದಿಯವರ ಮನವಿಗೆ ವಿಶ್ವಸಂಸ್ಥೆಯಲ್ಲಿ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ವಿಶ್ವಸಂಸ್ಥೆಯಲ್ಲಿ ಒಟ್ಟು 177 ರಾಷ್ಟ್ರಗಳು ಒಟ್ಟಾಗಿ ಜೂನ್ 21 ನ್ನು 'ಅಂತರಾಷ್ಟ್ರೀಯ ಯೋಗ ದಿನ' ಎಂದು ಘೋಷಿಸುವ ನಿರ್ಣಯವನ್ನು



ನೈಜ ಹೀರೋಗಳಿಗೆ ಗೌರವ

# ತೆರೆಮರೆಯ ನಾಯಕರಿಗೆ ಪುರಸ್ಕಾರ

- ನವ ಭಾರತದ ನಿರ್ಮಾಣದಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯ ಕೊಡುಗೆಯನ್ನೂ ಪ್ರೋತ್ಸಾಹಿಸುವ ಉದ್ದೇಶದಿಂದ, ಸರ್ಕಾರ ಪದ್ಮ ಪ್ರಶಸ್ತಿಯ ಸಂಪೂರ್ಣ ಪ್ರಕ್ರಿಯೆಯನ್ನು ಬದಲಾಯಿಸಿತು.
- ಈಗ ಪದ್ಮ ಪ್ರಶಸ್ತಿಯನ್ನು ಅರ್ಹತೆಯ ಆಧಾರದ ಮೇಲೆ ನೀಡಲಾಗುತ್ತದೆಯೇ ಹೊರತು ಸಾಮಾಜಿಕ ಸ್ಥಾನಮಾನದ ಮೇಲೆ ಅಲ್ಲ. ನವ ಭಾರತದಲ್ಲಿ, ಒಬ್ಬ ಸಾಮಾನ್ಯ ವ್ಯಕ್ತಿ ಕೂಡ ಅತ್ಯುತ್ತಮ ಕೆಲಸದ ಮೂಲಕ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಪಡೆಯಬಹುದು.
- ಯಾವುದೇ ನಾಗರಿಕರು padmaawards.gov.in ವೆಬ್‌ಸೈಟ್‌ನಲ್ಲಿ ಯಾರನ್ನಾದರೂ ನಾಮನಿರ್ದೇಶನ ಮಾಡಬಹುದು. ಆನ್‌ಲೈನ್ ಪದ್ಮ ಅಪ್ಲಿಕೇಶನ್ ಪ್ರಕ್ರಿಯೆಯನ್ನು ಪಾರದರ್ಶಕವಾಗಿಸಿದೆ.
- ಇಂದು ದೇಶದ ಸಾಮಾನ್ಯ ಪ್ರಜೆಗಳು ಕೂಡ ಪದ್ಮ ಪ್ರಶಸ್ತಿಗಳನ್ನು ಪಡೆಯುತ್ತಿದ್ದಾರೆ ಮತ್ತು ಅವರನ್ನು ಯಾವ ಮಾಧ್ಯಮವೂ ಗುರುತಿಸಿರುವುದಿಲ್ಲ.

ಈಗ, ಪದ್ಮ ಪ್ರಶಸ್ತಿ ಪುರಸ್ಕೃತರಲ್ಲಿ ಹೆಚ್ಚಿನವರು ತಮ್ಮ ಕಾರ್ಯಕ್ಷೇತ್ರದಾಚೆ ಜನಪ್ರಿಯರಾಗದವರು. ಆದರೆ ಈಗ ಪದ್ಮ ಪ್ರಶಸ್ತಿಗಳು ಅಂತಹ ನಿಜವಾದ ಹೀರೋಗಳನ್ನು ಗುರುತಿಸುತ್ತಿವೆ.

"

ನಮ್ಮ ದೇಶದಲ್ಲಿ ಪದ್ಮ ಪ್ರಶಸ್ತಿಗಳನ್ನು ಹೇಗೆ ನೀಡಲಾಗುತ್ತಿತ್ತು? ಕೆಲವು ನಾಯಕರು ಶಿಫಾರಸು ಮಾಡುತ್ತಿದ್ದರು, ಸರ್ಕಾರ ಶಿಫಾರಸು ಮಾಡಬಹುದಾಗಿತ್ತು. ಆದರೆ ನಾವು ಒಂದು ಸಣ್ಣ ತಿದ್ದುಪಡಿಯನ್ನು ಮಾಡಿದ್ದೇವೆ, ಈಗ ಶಿಫಾರಸು ಅಗತ್ಯವಿಲ್ಲ ಎಂದು ನಾವು ಹೇಳಿದ್ದೇವೆ. ಯಾರು ಬೇಕಾದರೂ ವಿವರಗಳನ್ನು ಆನ್‌ಲೈನ್‌ನಲ್ಲಿ ಕಳುಹಿಸಬಹುದು. ಈಗ ನೀವು ನೋಡಿರಬೇಕು, ಅಂತಹ ಅನಾಮಧೇಯ ನಾಯಕರು ಇಂದು ಪದ್ಮಶ್ರೀ ಪಡೆಯುತ್ತಿದ್ದಾರೆ.
ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಅಂಗೀಕರಿಸಿದವು. ಇಂದು ಯೋಗವು ಜನಸಮೂಹದೊಂದಿಗೆ ಸಂಬಂಧ ಹೊಂದಿದೆ.

**ಹೊಸ ವಿಶ್ವಾಸ ತುಂಬಿದ ಸ್ವಾವಲಂಬನೆ**

ತುಲನಾತ್ಮಕವಾಗಿ ಚಿಕ್ಕದಾಗಿ ಕಾಣುವ ವಿಷಯಗಳು ರಾಷ್ಟ್ರಕ್ಕೆ ದೊಡ್ಡ ಸೇವೆ ಸಲ್ಲಿಸುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಸ್ಥಳೀಯತೆಗೆ ಆದ್ಯತೆ (ವೋಕಲ್ ಫಾರ್ ಲೋಕಲ್) ಮತ್ತು ಆತ್ಮನಿರ್ಭರ ಭಾರತ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ, ಪ್ರಧಾನ ಮಂತ್ರಿಯವರು 'ಸ್ವಾವಲಂಬನೆ'ಯನ್ನು ಜನರು ಸುಲಭವಾಗಿ ಅಳವಡಿಸಿಕೊಳ್ಳುವ ಅವಕಾಶವಾಗಿ ಮಾಡಿದರು. ಸ್ವಾವಲಂಬನೆ ಮತ್ತು ಸಂಸ್ಕೃತಿಯೊಂದಿಗೆ ಆಟಿಕೆಗಳ ಮೂಲಕ ವ್ಯಾಪಾರವನ್ನು ಸ್ಥಾಪಿಸುವುದು ಅಭೂತಪೂರ್ವವಾಗಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸಮಗ್ರ ಚಿಂತನೆ ಮತ್ತು ಸ್ಪಷ್ಟ ಉದ್ದೇಶದಿಂದ ಆರಂಭವಾದ ಈ ಉಪಕ್ರಮವು ಇಂದು ಏಕ ಭಾರತ ಶ್ರೇಷ್ಠ ಭಾರತದ ಕನಸನ್ನು ನನಸಾಗಿಸುವಲ್ಲಿ ನೆರವಾಗಿದೆ. ಗುಜರಾತ್‌ನ ಕೆವಾಡಿಯಾದಲ್ಲಿರುವ ಏಕತಾ ಪ್ರತಿಮೆ ಆಕರ್ಷಣೆಯ ಕೇಂದ್ರವಾಗಿದೆ. ಹಬ್ಬದ ಸಮಯದಲ್ಲಿ, ಸ್ಥಳೀಯ ಉತ್ಪನ್ನಗಳನ್ನು ಖರೀದಿಸುವ ಹೊಸ ಪ್ರವೃತ್ತಿ ಪ್ರಾರಂಭವಾಗಿದೆ.

**ಉತ್ತಮ ಆಡಳಿತದ ಬುನಾದಿಯಾದ ತಂತ್ರಜ್ಞಾನ**

ಜನಸಾಮಾನ್ಯರನ್ನು ತಂತ್ರಜ್ಞಾನದೊಂದಿಗೆ ಸಂಪರ್ಕಿಸುವ ಮತ್ತು ಅದನ್ನು ಉತ್ತಮ ಆಡಳಿತದ ಪ್ರಮುಖ ಸಾಧನವನ್ನಾಗಿಸುವ ಕಲೆಯನ್ನು ಪ್ರಧಾನಿ ನರೇಂದ್ರ ಮೋದಿ ತಿಳಿದಿದ್ದಾರೆ. ಅವರು ತಳಮಟ್ಟದ ಜನರೊಂದಿಗೆ ಉತ್ತಮ ವೈಯಕ್ತಿಕ ಸಂಪರ್ಕವನ್ನು ಹೊಂದಿರುವುದು ಮಾತ್ರವಲ್ಲದೆ, ಸಾಮಾಜಿಕ ಮಾಧ್ಯಮದಲ್ಲಿ ಅವರು ಪ್ರಬಲವಾದ ಅಸ್ತಿತ್ವವನ್ನು ಹೊಂದಿದ್ದಾರೆ. ಅವರನ್ನು ಭಾರತದ ಅತ್ಯಂತ 'ಟೆಕ್ನೊ ಸ್ಯಾವಿ' ನಾಯಕ ಎಂದೂ ಕರೆಯುತ್ತಾರೆ. ಅವರು ಜನರನ್ನು ತಲುಪಲು ಮತ್ತು ಅವರ ಜೀವನದಲ್ಲಿ ಬದಲಾವಣೆ ತರಲು ಸಾಮಾಜಿಕ ಮಾಧ್ಯಮವನ್ನು ಬಳಸುತ್ತಾರೆ. ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳನ್ನು ಉತ್ತೇಜಿಸುವ ಮೂಲಕ ಅವರು ಹೊಸ ವಿತರಣಾ ಕಾರ್ಯವಿಧಾನವನ್ನು ಸೃಷ್ಟಿಸಿದರು. ಈ ಕಾರಣದಿಂದಾಗಿ ರಾಜ್ಯ ಸರ್ಕಾರ ಮತ್ತು ಸಚಿವಾಲಯಗಳ ಸಮನ್ವಯದೊಂದಿಗೆ



ಪರಂಪರೆಯ ಪುನಶ್ಚೇತನ

# ಭವ್ಯ ಪರಂಪರೆಯನ್ನು ಗೌರವಿಸುವುದು

**ಹಿಂದಿನ ಆಡಳಿತದಲ್ಲಿ ದೇಶದ ದಿಗ್ಗಜರ ಬಗೆಗಿದ್ದ ನಿರ್ಲಕ್ಷ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಅಂತ್ಯ ಹಾಡಿದ್ದಾರೆ. ಯಾವುದೇ ಪಕ್ಷ, ಸಿದ್ಧಾಂತ ಅಥವಾ ಕುಟುಂಬವನ್ನು ಮೀರಿ 'ಇಂಡಿಯಾ ಫಸ್ಟ್' - ಭಾರತ ಮೊದಲು ಆದ್ಯತೆ ಪಡೆಯಿತು. ಇದಕ್ಕಾಗಿ, ಸರ್ಕಾರವು ಸಾಂಸ್ಥಿಕ ಬೆಂಬಲವನ್ನು ಖಾತ್ರಿಪಡಿಸಿತು.**

- ಪ್ರಧಾನಿ ಮೋದಿ ಅವರು ಛತ್ರಪತಿ ಶಿವಾಜಿ ಮಹಾರಾಜ್, ಬಿರ್ಸಾ ಮುಂಡಾ, ದೀನಬಂಧು ಸರ್ ಛೋಟು ರಾಮ್ ರಂತಹ ದೇಶದಾದ್ಯಂತದ ಅನೇಕ ಮಹಾನ್ ವ್ಯಕ್ತಿಗಳ ಪರಂಪರೆಯನ್ನು ಪುನರುಜ್ಜೀವಗೊಳಿಸಿದ್ದಾರೆ.
- ಭಾರತವನ್ನು ಒಗ್ಗೂಡಿಸಿದ ಮಹಾನ್ ವ್ಯಕ್ತಿಗೆ ಒಂದು ಭವ್ಯ ಗೌರವವಾಗಿ, ಪ್ರಧಾನಿ ನರೇಂದ್ರ ಮೋದಿ ಅವರು 'ಉಕ್ಕಿನ ಮನುಷ್ಯ' ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಗೌರವಾರ್ಥವಾಗಿ 'ಏಕತಾ ಪ್ರತಿಮೆಯನ್ನು' ಅನಾವರಣಗೊಳಿಸಿದರು. 600 ಅಡಿ ಎತ್ತರದ ಈ ಪ್ರತಿಮೆ ವಿಶ್ವದ ಅತಿ ಎತ್ತರದ ಪ್ರತಿಮೆಯಾಗಿದೆ.
- ನೇತಾಜಿಯವರ 'ಆಜ಼ಾದ್ ಹಿಂದ್ ಸರ್ಕಾರ' ರಚನೆಯ 75 ನೇ ವಾರ್ಷಿಕೋತ್ಸವದ ನೆನಪಿಗಾಗಿ ದೆಹಲಿಯ ಕೆಂಪು ಕೋಟೆಯಲ್ಲಿ ಪ್ರಧಾನಿ ತ್ರಿವರ್ಣ ಧ್ವಜರೋಹಣ ನೆರವೇರಿಸಿದರು.
- ಭಾರತದ ಸ್ವಾತಂತ್ರ್ಯ ಚಳುವಳಿಯ ಮಹಾನ್ ನಾಯಕನ ಪರಂಪರೆಯನ್ನು ಅಂತಿಮವಾಗಿ ಸ್ವಾತಂತ್ರ್ಯಾನಂತರ ಗೌರವಿಸಿದ್ದು ಇಡೀ ದೇಶಕ್ಕೆ ಹೆಮ್ಮೆಯ ಕ್ಷಣವಾಗಿತ್ತು.
- ಆಜ಼ಾದ್ ಹಿಂದ್ ಫೌಜ್ ನ ನಾಲ್ವರು ಸದಸ್ಯರು 2019 ರಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್ ನಲ್ಲಿ ಭಾಗವಹಿಸಿದ್ದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರಿಗೆ ಸಂಬಂಧಿಸಿದ ಗೌಪ್ಯ ಕಡತಗಳನ್ನು ಬಹಿರಂಗಪಡಿಸುವ ಮೂಲಕ ಮೋದಿ ಸರ್ಕಾರವು ನೇತಾಜಿ ಕುಟುಂಬದ ಬಹುಕಾಲದ ಬೇಡಿಕೆಯನ್ನು ಈಡೇರಿಸಿತು.
- ಪ್ರಧಾನಿ ಮೋದಿ ಅವರು 2014 ರ ಸೆಪ್ಟೆಂಬರ್‌ನಲ್ಲಿ ಜಪಾನ್‌ಗೆ ಭೇಟಿ ನೀಡಿದಾಗ, ಜಪಾನ್‌ನಲ್ಲಿ ನೇತಾಜಿಯವರ ಒಡನಾಡಿಯಾಗಿದ್ದ ಸೈಚಿರೊ ಮಿಸುಮಿಯನ್ನು ಭೇಟಿಯಾದರು.
- ಡಾ.ಭೀಮ್ ರಾವ್ ಅಂಬೇಡ್ಕರ್ ಅವರ ಗೌರವಾರ್ಥವಾಗಿ, 26 ನವೆಂಬರ್ ಅನ್ನು 'ಸಂವಿಧಾನ ದಿನ' ಎಂದು ಘೋಷಿಸಲಾಯಿತು. ಅವರ 125 ನೇ ಜನ್ಮ ದಿನಾಚರಣೆಯಂದು ಸಂಸತ್ತಿನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಯಿತು.



ದೀರ್ಘಕಾಲದವರೆಗೆ ನನೆಗುದಿಗೆ ಬಿದ್ದಿದ್ದ ಯೋಜನೆಗಳು ಹೊಸ ದಿಕ್ಕನ್ನು ಪಡೆಯುತ್ತಿವೆ. ವಿದೇಶದಲ್ಲಿ ಕಷ್ಟದಲ್ಲಿರುವ ಯಾವುದೇ ಭಾರತೀಯರು ಸಾಮಾಜಿಕ ಮಾಧ್ಯಮದಲ್ಲಿ ಸರ್ಕಾರದಿಂದ ಸಹಾಯ ಕೇಳಿದಾಗ, ಅವರು ಅದನ್ನು ತಕ್ಷಣವೇ ಪಡೆಯುತ್ತಾರೆ. ದೇಶದಲ್ಲಿ ರೈಲಿನಲ್ಲಿ ಪ್ರಯಾಣಿಸುವಾಗ, ಯಾರಿಗಾದರೂ ಔಷಧಿ ಮತ್ತು ಹಾಲು ಬೇಕಾದರೆ, ಅದನ್ನು ತಕ್ಷಣವೇ ಲಭ್ಯವಾಗುವಂತೆ ಮಾಡಲಾಗುತ್ತದೆ. ಸಮಸ್ಯೆಗಳನ್ನು ಪರಿಹರಿಸುವುದು ಕೂಡ ಈ ಮಾಧ್ಯಮದ ಮೂಲಕ ಸುಲಭವಾಗುತ್ತಿದೆ.

ಯೋಜನೆಗಳ ಸಕಾಲಿಕ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಲು ಸಚಿವಾಲಯ ಮತ್ತು ಇಲಾಖೆಗಳ ನಡುವೆ ಉತ್ತಮ ಸಮನ್ವಯ ಸಾಧಿಸಲು ಪ್ರಧಾನಮಂತ್ರಿಯವರು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡುವುದು ಮಾತ್ರವಲ್ಲದೆ ತಮ್ಮ ಸಚಿವ ಸಂಪುಟದಲ್ಲಿ ಇಲಾಖೆಗಳನ್ನು ಸಮನ್ವಯವನ್ನು ಕಾಪಾಡಿಕೊಳ್ಳುವ ರೀತಿಯಲ್ಲಿ ವಿಂಗಡಿಸಿದ್ದಾರೆ. ನೀರಿನ ಸಮಸ್ಯೆಗೆ ದೀರ್ಘಾವಧಿಯ ಪರಿಹಾರವನ್ನು ಹೊಂದಲು, ಅವರು 2019 ರಲ್ಲಿ ಪ್ರತ್ಯೇಕ ಜಲ ಶಕ್ತಿ ಸಚಿವಾಲಯವನ್ನು ಸ್ಥಾಪಿಸಿದರು. ಇದು ಮಾತ್ರವಲ್ಲ, ಅಧಿಕಾರಶಾಹಿಯನ್ನು ಪರಿಣಾಮಕಾರಿಯಾಗಿ ಮಾಡಲು 'ಮಿಷನ್ ಕರ್ಮಯೋಗಿ'ಯಂತಹ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಐಎಎಸ್-ಐಪಿಎಸ್ ತರಬೇತಿ ಅಧಿಕಾರಿಗಳ ಸಮಾವೇಶ ಅಥವಾ ಪೊಲೀಸ್ ಮಹಾನಿರ್ದೇಶಕರ ವಾರ್ಷಿಕ ಸಮ್ಮೇಳನವಿರಲಿ, ಹಿಂದಿನ ಕಾಲದಲ್ಲಿ ಮಂತ್ರಿಗಳು ಉದ್ಘಾಟನೆ ಮಾಡಿದ ನಂತರ ಅಲ್ಲಿಂದ ಹೊರಡುತ್ತಿದ್ದರು. ಆದರೆ ಈಗ ಪ್ರಧಾನಿ ಮೋದಿಯವರು ಇದನ್ನು ಮಾನವ ಸಂಪನ್ಮೂಲ ನಿರ್ವಹಣೆಯ ಪ್ರಮುಖ ಭಾಗವಾಗಿ ಮಾಡಿದ್ದಾರೆ ಮತ್ತು ಅದಕ್ಕೆ ಸಾಂಸ್ಥಿಕ ರೂಪ ನೀಡಿದ್ದಾರೆ. ಪ್ರಧಾನ ಮಂತ್ರಿಯವರಿಂದಾಗಿ ದೇಶದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಹೊಸ ಪರಂಪರೆಯು ನವ ಭಾರತದ ಕನಸನ್ನು ನನಸಾಗಿಸಲು ಸಹಾಯ ಮಾಡುತ್ತಿರುವುದು ಸಾಬೀತಾಗುತ್ತಿದೆ. ■

**ಬಾಬಾಸಾಹೇಬ್ ಅಂಬೇಡ್ಕರ್ ಅವರ ಪರಂಪರೆಯನ್ನು ಉಳಿಸಲು, ಅವರ ಜೀವನಕ್ಕೆ ಸಂಬಂಧಿಸಿದ ಸ್ಥಳಗಳನ್ನು ಪಂಚತೀರ್ಥವಾಗಿ ಪರಿವರ್ತಿಸಲಾಗಿದೆ.**

ಪ್ಯಾರಾಲಿಂಪಿಕ್ಸ್




# ಒಲಿಂಪಿಕ್ಸ್ ನಂತರ, ಪ್ಯಾರಾಲಿಂಪಿಕ್ಸ್‌ನಲ್ಲಿ ಇತಿಹಾಸ ಸೃಷ್ಟಿಸಿದ ಭಾರತ

ಈ ವರ್ಷದ 75ನೇ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೆಂಪು ಕೋಟೆಯ ಮೇಲಿಂದ ದೇಶವನ್ನುದ್ದೇಶಿಸಿ ಮಾತನಾಡಿದಾಗ ಹಾಜರಿದ್ದ ಇತರರೊಂದಿಗೆ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಇತಿಹಾಸ ಸೃಷ್ಟಿಸಿದ ಭಾರತೀಯ ಆಟಗಾರರೂ ಸೇರಿದ್ದರು. ಪ್ರಧಾನಮಂತ್ರಿಯವರ ಕರೆಯ ಮೇರೆಗೆ ಈ ಕ್ರೀಡಾಪಟುಗಳನ್ನು ಅಲ್ಲಿ ನೆರೆದಿದ್ದ ಎಲ್ಲ ಗಣ್ಯರೂ ಶ್ಲಾಘಿಸಿದ ಅದ್ಭುತ ಕ್ಷಣ ಅದಾಗಿತ್ತು. ಮೊದಲ ಬಾರಿಗೆ ಭಾರತದಲ್ಲಿ ಕ್ರೀಡೆಗಳನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಲಾಗುತ್ತಿದೆ ಎಂಬುದಕ್ಕೆ ಈ ಗೌರವವು ದ್ಯೋತಕವಾಗಿತ್ತು. ಟೋಕಿಯೊ ಒಲಿಂಪಿಕ್ಸ್ ನಂತರ, ಈಗ ಇತಿಹಾಸವನ್ನು ಬರೆವ ಸರದಿ ಭಾರತದ ಪ್ಯಾರಾಲಿಂಪಿಕ್ ಕ್ರೀಡಾಪಟುಗಳದ್ದಾಗಿದೆ. ಜೀವನದ ಎಲ್ಲಾ ಅಡೆತಡೆಗಳನ್ನು ನಿವಾರಿಸುವ ಮೂಲಕ, ಭಾರತೀಯ ಪ್ಯಾರಾಲಿಂಪಿಯನ್ನರು ಅತಿ ಹೆಚ್ಚು 19 ಪದಕಗಳನ್ನು ಗೆದ್ದಿದ್ದಾರೆ, ಇವುಗಳಲ್ಲಿ 5 ಚಿನ್ನ, 8 ಬೆಳ್ಳಿ ಮತ್ತು 6 ಕಂಚಿನ ಪದಕಗಳು ಸೇರಿವೆ ... ಹಿಂದಿನ ಪ್ಯಾರಾಲಿಂಪಿಕ್ಸ್ ನಲ್ಲಿ ಇಲ್ಲಿಯವರೆಗೆ 11 ಭಾರತೀಯ ಆಟಗಾರರು 4 ಚಿನ್ನದ ಪದಕಗಳೊಂದಿಗೆ ಒಟ್ಟು 12 ಪದಕಗಳನ್ನು ಗೆದ್ದಿದ್ದರು.

ಅಪಘಾತದಲ್ಲಿ ತಮ್ಮ ಎರಡೂ ಕಾಲುಗಳನ್ನು ಕಳೆದುಕೊಂಡಾಗ ಅವನಿ ಲೇಖಾರಾ ಖಿನ್ನತೆಗೆ ಜಾರಿದರು. ಅವರು ಎಷ್ಟು ದುರ್ಬಲರಾಗಿದ್ದರೆಂದರೆ ಅವರು ಸ್ವತಃ ಏನನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅವರ ತಂದೆ ಪ್ರವೀಣ ಲೇಖಾರಾ ಕ್ರೀಡೆಯಲ್ಲಿ ಆಸಕ್ತಿಯನ್ನು ಬೆಳೆಸಲು ಪ್ರಯತ್ನಿಸಿದರು. ಆಕೆ ಮೊದಲು ಬಿಲ್ಲುಗಾರಿಕೆಯಲ್ಲಿ ಪ್ರಯತ್ನಿಸಿದರು, ಆದರೆ ಬಿಲ್ಲಿನ ದಾರವನ್ನು ಎಳೆಯಲು ಸಹ ಸಾಧ್ಯವಾಗಲಿಲ್ಲ. ನಂತರ ಅವರು ಶೂಟಿಂಗ್ ಗೆ ತಿರುಗಿದರು, ಆದರೆ ಆಕೆಗೆ ಮೊದಲ ಬಾರಿಗೆ ಬಂದೂಕನ್ನು ಎತ್ತಲೂ ಸಾಧ್ಯವಾಗಲಿಲ್ಲ. ಆದರೆ ಆಕೆ ಪಟ್ಟುಹಿಡಿದರು. ಸಾಧಿಸಿದರು ಫಲಿತಾಂಶವನ್ನು ಎಲ್ಲರೂ ನೋಡುತ್ತಿದ್ದೇವೆ. ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ನಡೆದ 10 ಮೀ ಏರ್ ರೈಫಲ್ ಮತ್ತು 50 ಮೀ ಏರ್ ರೈಫಲ್ ಸ್ಪರ್ಧೆಗಳಲ್ಲಿ ಚಿನ್ನ ಮತ್ತು ಕಂಚಿನ ಪದಕಗಳನ್ನು ಗೆದ್ದು ಅವನಿ ದೇಶವನ್ನು ಹೆಮ್ಮೆಪಡುವಂತೆ ಮಾಡಿದರು. ಯಾವುದೇ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು. ಅಂತೆಯೇ ದೇವೇಂದ್ರ ಝಾಝಾರಿಯಾ ಅವರ ಜೀವನವೂ ಕೂಡ ಹೋರಾಟಗಳಿಂದ ಕೂಡಿದೆ. ಈ ವರ್ಷದ ಆಗಸ್ಟ್ 7ರಂದು ಟೋಕಿಯೊ ಒಲಿಂಪಿಕ್ಸ್ ನಲ್ಲಿ ನೀರಜ್ ಚೋಪ್ರಾ ದೇಶಕ್ಕೆ ಮೊದಲ ಚಿನ್ನದ ಪದಕ ಗೆದ್ದಾಗ, ಇಡೀ ಭಾರತವು ವಿಸ್ಮಯಗೊಂಡಿತ್ತು.



## ಪ್ಯಾರಾಲಿಂಪಿಕ್ಸ್ ಒಲಿಂಪಿಕ್ಸ್ ನಲ್ಲಿ ಭಾರತ

- ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟವು 1960ರಲ್ಲಿ ಪ್ರಾರಂಭವಾಯಿತು, ಆದರೆ ಭಾರತವು ಟೆಲ್ ಅವೀವ್ ಪ್ಯಾರಾಲಿಂಪಿಕ್ಸ್ ನಲ್ಲಿ (1968) ಮೊದಲ ಬಾರಿಗೆ ಭಾಗವಹಿಸಿತು. 1984ರ ಪ್ಯಾರಾಲಿಂಪಿಕ್ಸ್ ನಿಂದ ಭಾರತವು ಈ ಕ್ರೀಡಾಕೂಟಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿದೆ.
- ಭಾರತ ಇದುವರೆಗೆ 11 ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದು, ದೇಶದ ಹೆಸರಿನಲ್ಲಿ 12 ಪದಕಗಳು ದಾಖಲಾಗಿದ್ದವು. ಇದರಲ್ಲಿ 4 ಚಿನ್ನ, 4 ಬೆಳ್ಳಿ ಮತ್ತು 4 ಕಂಚು ಸೇರಿವೆ.
- 2016ರ ರಿಯೋ ಪ್ಯಾರಾಲಿಂಪಿಕ್ಸ್ ನಲ್ಲಿ, ಭಾರತವು ಐದು ಸ್ಪರ್ಧೆಗಳಿಗೆ 19 ಕ್ರೀಡಾಪಟುಗಳನ್ನು ಕಳುಹಿಸಿತ್ತು, ಇದು ಆ ಸಮಯದಲ್ಲಿ ಪ್ಯಾರಾಲಿಂಪಿಕ್ಸ್ ಇತಿಹಾಸದಲ್ಲಿ ಭಾರತದ ಅತಿದೊಡ್ಡ ತಂಡವಾಗಿತ್ತು. ಭಾರತ ಎರಡು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚು ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದಿತ್ತು. ಪುರುಷರ ಎತ್ತರ ಜಿಗಿತದಲ್ಲಿ ಮರಿಯಪ್ಪನ್ ತಂಗವೇಲು, ಜಾವೆಲಿನ್ ಥ್ರೋನಲ್ಲಿ ದೇವೇಂದ್ರ ಝಾಝಾರಿಯಾ ಚಿನ್ನದ ಪದಕಗಳನ್ನು ಗೆದ್ದಿದ್ದರು.
- ಈ ಬಾರಿ ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಭಾರತದ 54 ಆಟಗಾರರು 9 ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ವಿಶ್ವ ಶ್ರೇಯಾಂಕದಲ್ಲಿ ಕನಿಷ್ಠ ನಾಲ್ಕು ಭಾರತೀಯರು ನಂ.1 ಸ್ಥಾನದಲ್ಲಿದ್ದರೆ, ಆರು ಆಟಗಾರರು ವಿಶ್ವದಲ್ಲಿ ಎರಡನೇ ಸ್ಥಾನ ಪಡೆದಿದ್ದರು, ಹೀಗಾಗಿ ಭಾರತೀಯ ಆಟಗಾರರಿಂದ ಅದ್ಭುತ ಯಶಸ್ಸನ್ನು ನಿರೀಕ್ಷಿಸುವುದು ಅಸಮಂಜಸವೇನಾಗಿರಲಿಲ್ಲ. ಅಲ್ಲದೆ ಸುಮಾರು 10 ಆಟಗಾರರು ವಿಶ್ವ ಮೂರನೇ ಶ್ರೇಯಾಂಕವನ್ನು ಹೊಂದಿದ್ದಾರೆ.

ಇದು ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದ ಗೆಲುವು ಮಾತ್ರವಲ್ಲ, ಒಲಿಂಪಿಕ್ಸ್ ನ ಅಥ್ಲೆಟಿಕ್ಸ್ ನಲ್ಲಿ ಭಾರತದ ಮೊದಲ ಚಿನ್ನದ ಪದಕವೂ ಆಗಿದೆ. ಟೋಕಿಯೊ ಪ್ಯಾರಾಲಿಂಪಿಕ್ಸ್ ನಲ್ಲಿ ಈ ಬಾರಿ ಚಿನ್ನದ ಪದಕ ದೇವೇಂದ್ರ ಝಾಝಾರಿಯಾ ಕೈತಪ್ಪಿತು ಮತ್ತು ಬೆಳ್ಳಿ ಪದಕಕ್ಕೆ ತೃಪ್ತಿ ಪಡಬೇಕಾಯಿತು. ಅವರು ಈಗಾಗಲೇ 2004ರ ಅಥೆನ್ಸ್ ನಲ್ಲಿ ಜಾವೆಲಿನ್ ಥ್ರೋ ಮತ್ತು 2016 ರ ರಿಯೋ ಪ್ಯಾರಾಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಗೆದ್ದಿದ್ದರಿಂದ ಈ ವರ್ಷ ಅವರಿಂದ ಹೆಚ್ಚಿನ ನಿರೀಕ್ಷೆಗಳು ಇದ್ದವು. ಕೇವಲ 9ನೇ ವಯಸ್ಸಿನವರಾಗಿದ್ದಾಗ ವಿದ್ಯುದಾಘಾತಕ್ಕೆ ಒಳಗಾಗಿ ಕೈ ಕಳೆದುಕೊಂಡ ದೇವೇಂದ್ರರಿಗೆ, ತದನಂತರದ ಸಮಯದಲ್ಲಿ ಯಾವುದೇ ಸವಾಲು ಕಡಿಮೆಯಾಗಿರಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಸಂಭಾಷಣೆ ನಡೆಸಿದ ಅವರು, "ನಾನು ಶಾಲೆಯಲ್ಲಿ ಭರ್ಜಿಯನ್ನು ಎತ್ತಿಕೊಂಡಾಗ, ನನ್ನನ್ನು ಮೂದಲಿಸುತ್ತಿದ್ದರು. ನಾನು ಅಧ್ಯಯನದ ಮೇಲೆ ಗಮನ ಹರಿಸಬೇಕು ಮತ್ತು ಕ್ರೀಡೆಯಲ್ಲಿ ನನಗೆ ಜಾಗವಿಲ್ಲ ಎಂದು ಹೇಳುತ್ತಿದ್ದರು, ಆದರೆ ನಾನು ಅದನ್ನು ಸವಾಲಾಗಿ ಸ್ವೀಕರಿಸಿದೆ. ನಾನು ಜಾವೆಲಿನ್ ಎಸೆತಕ್ಕೆ ಸಮರ್ಪಿತನಾದೆ ಮತ್ತು ನಾನು ಶಿಸ್ತುಬದ್ಧನಾದೆ. ನಾನು ಮಲಗುವ ಕೋಣೆಯಲ್ಲಿಯೂ ಭರ್ಜಿಯನ್ನು ಇಟ್ಟುಕೊಳ್ಳುತ್ತೇನೆ." ಎಂದಿದ್ದರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ, ಅವನಿ ಅವರೊಂದಿಗೆ ಜಾವಲಿನ್ ಎಸೆತದಲ್ಲಿ ಸುಮಿತ್ ಆಂತಿಲ್, 50 ಮೀ ಪಿಸ್ತೂಲ್ ಶೂಟಿಂಗ್ ನಲ್ಲಿ ಮನೀಶ್ ನರ್ವಾಲ್, ಬ್ಯಾಡ್ಮಿಂಟನ್‌ನಲ್ಲಿ ಪ್ರಮೋದ ಭಗತ್ ಮತ್ತು ಕೃಷ್ಣ ನಾಗರ್ ಚಿನ್ನದ ಪದಕ ಗೆದ್ದಿದ್ದಾರೆ. ಇದೇ ವೇಳೆ ಟೇಬಲ್ ಟೆನಿಸ್ ನಲ್ಲಿ ಭಾವಿನಾ ಬೆನ್ ಪಟೇಲ್, ಎತ್ತರ ಜಿಗಿತದಲ್ಲಿ ನಿಶಾದ್ ಕುಮಾರ್, ಡಿಸ್ಕಸ್ ಥ್ರೋನಲ್ಲಿ ಯೋಗೇಶ್ ಕಥುನಿಯಾ, ಜಾವೆಲಿನ್ ಎಸೆತದಲ್ಲಿ ದೇವೇಂದ್ರ ಝಾಝಾರಿಯಾ, ಎತ್ತರ ಜಿಗಿತದಲ್ಲಿ ಮರಿಯಪ್ಪನ್ ತಂಗವೇಲು ಮತ್ತು ಪ್ರವೀಣ್ ಕುಮಾರ್, 50 ಮೀಟರ್ ಪಿಸ್ತೂಲ್ ಶೂಟಿಂಗ್ ನಲ್ಲಿ ಸಿಂಗ್ ರಾಜ್ ಅಧಾನಾ, ಬ್ಯಾಡ್ಮಿಂಟನ್ ನಲ್ಲಿ ನೋಯ್ಡಾ ಡಿಎಂ ಸುಹಾಸ್ ಎಲ್ ವೈ ಬೆಳ್ಳಿ ಪದಕ ಗೆದ್ದಿದ್ದಾರೆ. ಇಷ್ಟೇ ಅಲ್ಲ, ಜಾವೆಲಿನ್ ಥ್ರೋನಲ್ಲಿ ಸುಂದರ್ ಗುರ್ಜರ್, 10 ಮೀ. ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಸಿಂಗ್ ರಾಜ್ ಅಧಾನಾ, ಎತ್ತರ ಜಿಗಿತದಲ್ಲಿ ಶರದ್ ಕುಮಾರ್, ಬಿಲ್ಲುಗಾರಿಕೆಯಲ್ಲಿ ಹರ್ವಿಂದರ್ ಸಿಂಗ್ ಮತ್ತು ಬ್ಯಾಡ್ಮಿಂಟನ್‌ನಲ್ಲಿ ಮನೋಜ್ ಸರ್ಕಾರ್ ಕಂಚಿನ ಪದಕ ಗಳಿಸಿದ್ದಾರೆ.

### ಪ್ಯಾರಾ ಅಥ್ಲೀಟ್ ಗಳೊಂದಿಗೆ ಪ್ರಧಾನಮಂತ್ರಿ ಸಂವಾದ

ಟೋಕಿಯೊ ಒಲಿಂಪಿಕ್ಸ್ ನಲ್ಲಿ ಭಾರತವನ್ನು ಪ್ರತಿನಿಧಿಸಿದ ಆಟಗಾರರೊಂದಿಗೆ ಸಂವಾದ ನಡೆಸಿದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತೀಯ ಪ್ಯಾರಾಲಿಂಪಿಕ್ಸ್ ತಂಡದೊಂದಿಗೂ ಅದನ್ನು ಮುಂದುವರಿಸಿದರು. ಪ್ಯಾರಾ-ಅಥ್ಲೀಟ್ ಗಳನ್ನು ಪ್ರೋತ್ಸಾಹಿಸಿದ ಅವರು "ನಾನು ನಿಮ್ಮಲ್ಲಿ ಅನಂತ ಆತ್ಮವಿಶ್ವಾಸವನ್ನು ನೋಡುತ್ತಿದ್ದೇನೆ ಮತ್ತು ಏನನ್ನಾದರೂ ಸಾಧಿಸುವ ಇಚ್ಛಾಶಕ್ತಿಯನ್ನು ನೋಡಬಲ್ಲೆ. ನಿಮ್ಮ ಕಠಿಣ ಪರಿಶ್ರಮದ ಫಲವಾಗಿ ಇಂದು ಅತಿ ಹೆಚ್ಚು ಭಾರತೀಯ ಕ್ರೀಡಾಪಟುಗಳು ಪ್ಯಾರಾಲಿಂಪಿಕ್ಸ್‌ಗೆ ಹೋಗುತ್ತಿದ್ದಾರೆ." ಎಂದರು. "ನೀವು ಟೋಕಿಯೋದಲ್ಲಿ ನಿಮ್ಮ ಕೈಲಾದಷ್ಟು ಉತ್ತಮವಾದ್ದನ್ನು ನೀಡಿದಾಗ ತ್ರಿವರ್ಣ ಧ್ವಜ ಹಾರುತ್ತದೆ, ನೀವು ಪದಕಗಳನ್ನು ಗೆಲ್ಲುವುದಷ್ಟೇ ಅಲ್ಲ, ನವ ಭಾರತದ ಸಂಕಲ್ಪಗಳಿಗೆ ಹೊಸ ಚೈತನ್ಯವನ್ನು ನೀಡುತ್ತೀರಿ" ಎಂದು ಪ್ರಧಾನಮಂತ್ರಿ ಹೇಳಿದರು.



ಪ್ರಧಾನಮಂತ್ರಿ ಮೋದಿ ಅವರು: "ಭಾರತದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ನಾವು ನಮ್ಮ ವಿಧಾನಗಳನ್ನು ನಿರಂತರವಾಗಿ ಸುಧಾರಿಸಬೇಕಾಗಿದೆ. ಇಂದು ಅಂತಾರಾಷ್ಟ್ರೀಯ ಕ್ರೀಡೆಗಳ ಜೊತೆಗೆ ಸಾಂಪ್ರದಾಯಿಕ ಭಾರತೀಯ ಕ್ರೀಡೆಗಳಿಗೂ ಹೊಸ ಅಸ್ಮಿತೆ ನೀಡಲಾಗುತ್ತಿದೆ. ನೀವು ಯಾವುದೇ ಕ್ರೀಡೆಗಳೊಂದಿಗೆ ಸಂಬಂಧ ಹೊಂದಿದ್ದರೂ, ನೀವು ಏಕ ಭಾರತ- ಶ್ರೇಷ್ಠ ಭಾರತ ಮನೋಭಾವವನ್ನು ಬಲಪಡಿಸುತ್ತೀರಿ." ಎಂದು ಹೇಳಿದ್ದರು. ಪ್ರಧಾನಮಂತ್ರಿ ಮೋದಿ ಅವರು: "ನೀವು ನಿಜವಾದ ಚಾಂಪಿಯನ್‌ಗಳು. ನೀವು ಜೀವನದ ಆಟದಲ್ಲಿ ಪ್ರತಿಕೂಲ ಪರಿಸ್ಥಿತಿಗಳನ್ನು ಜಯಿಸಿದ್ದೀರಿ ಮತ್ತು ಕೊರೊನಾ ನಿಮ್ಮ ಸಿದ್ಧತೆಯ ಮೇಲೆ ಪರಿಣಾಮ ಬೀರಲು ನೀವು ಬಿಡಲಿಲ್ಲ. ಒಬ್ಬ ಆಟಗಾರನಾಗಿ ನಿಮ್ಮ ಪದಕ ನಿಮಗೆ ಬಹಳ ಮುಖ್ಯ, ಆದರೆ ಇಂದಿನ ನವ ಭಾರತವು ತನ್ನ ಕ್ರೀಡಾಪಟುಗಳ ಮೇಲೆ ಪದಕಗಳಿಗಾಗಿ ಒತ್ತಡ ಹೇರುವುದಿಲ್ಲ." ಎಂದು ಹೇಳಿದರು.

ಎರಡು ಬಾರಿ ಒಲಿಂಪಿಕ್ ಚಿನ್ನದ ಪದಕ ವಿಜೇತ ಜಾವೆಲಿನ್ ಎಸೆತಗಾರ ದೇವೇಂದ್ರ ಝಝಾರಿಯಾ ಅವರ ಪುತ್ರಿಗೆ ಪ್ರಧಾನಮಂತ್ರಿ ಮೋದಿ, ನೀನು ಏಕತಾ ಪ್ರತಿಮೆಗೆ ಭೇಟಿ ನೀಡಿದ್ದೀಯಾ ಎಂದು ಕೇಳಿದರು, ರಿಯೋ ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಮರಿಯಪ್ಪನ್ ತಂಗವೇಲು ಅವರ ತಾಯಿಗೆ ತಮಿಳಿನಲ್ಲಿ ಶುಭ ಕೋರಿದ ಅವರು, ನಿಮ್ಮ ಮಗ ಏನು ತಿನ್ನಲು ಇಷ್ಟಪಡುತ್ತಾನೆ ಎಂದು ಪ್ರಶ್ನಿಸಿದರು. ಗುಜರಾತಿಯಲ್ಲಿ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪರುಲ್ ರೊಂದಿಗೆ ಮತ್ತು ಬಂಗಾಳಿಯಲ್ಲಿ ಪವರ್ ಲಿಫ್ಟರ್ ಸಕಿನಾ ಖತೂನ್ ಅವರೊಂದಿಗೆ ಪ್ರಧಾನಮಂತ್ರಿ ಮಾತನಾಡಿದರು. ಅವರು ಬಿಲ್ಲುಗಾರ್ತಿ ಜ್ಯೋತಿ ಬಲಿಯಾನ್ ಗೆ, "ನಿಮ್ಮ ತಂದೆಯ ಮರಣಾನಂತರ, ನೀವು ನಿಮ್ಮ ಆಟವನ್ನು ಮತ್ತು ಮನೆಯನ್ನು ಸಹ ನೋಡಿಕೊಂಡಿದ್ದೀರಿ. ಉತ್ತಮ ಕ್ರೀಡಾಪಟುವಾಗಿರುವುದರ ಜೊತೆಗೆ, ನೀವು ಉತ್ತಮ ಪುತ್ರಿ ಮತ್ತು ಸಹೋದರಿಯಾಗಿದ್ದೀರಿ, ನಿಮ್ಮ ಬಗ್ಗೆ ತಿಳಿದ ನಂತರ, ದೇಶದ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸಕಾರಾತ್ಮಕ ಆಲೋಚನೆಗಳು ಬರುತ್ತವೆ." ಎಂದರು. 2009ರಲ್ಲಿ ಸಂಭವಿಸಿದ ಅಪಘಾತದಲ್ಲಿ ಕಾಲು ಕಳೆದುಕೊಂಡ ಕಾಟ್ರಾದ ಪ್ಯಾರಾ ಆರ್ಚರ್ ರಾಕೇಶ್ ಕುಮಾರ್ ಅವರನ್ನು ಜೀವನದ ಅಡೆತಡೆಗಳು ಉತ್ತಮ ಆಟಗಾರನಾಗಿ ಹೊರಹೊಮ್ಮಲು ಹೇಗೆ ಸಹಾಯ ಮಾಡಿದವು ಎಂದು ಪ್ರಧಾನಮಂತ್ರಿ ಕೇಳಿದರು. "ಜೀವನದಲ್ಲಿ ಎಷ್ಟೇ ಹೋರಾಟಗಳು ಇದ್ದರೂ, ಜೀವನವು ಅಮೂಲ್ಯವಾಗಿದೆ. ನೀವು ದೇಶವನ್ನು ಪ್ರತಿನಿಧಿಸಲಿದ್ದೀರಿ ಮತ್ತು ಕಠಿಣವಾಗಿ ಆಡಲಿದ್ದೀರಿ. ಕುಟುಂಬ ಮತ್ತು ದೇಶದ ಹೆಸರನ್ನು ಹೆಮ್ಮೆಪಡುವಂತೆ ಮಾಡಿ." ಎಂದು ತಿಳಿಸಿದರು.

2004ರಲ್ಲಿ ಅಥೆನ್ಸ್ ನಲ್ಲಿ ಮತ್ತು 2016ರಲ್ಲಿ ರಿಯೋದಲ್ಲಿ ಜಾವೆಲಿನ್ ಎಸೆತದಲ್ಲಿ ಚಿನ್ನದ ಪದಕಗಳನ್ನು ಗೆದ್ದ ವಿಶ್ವ ದಾಖಲೆ ಹೊಂದಿರುವ ಝಝಾರಿಯಾ ಅವರಿಗೆ ಪ್ರಧಾನಮಂತ್ರಿಯವರು, ಇಷ್ಟು ಬೃಹತ್ ಅಂತರ ಮತ್ತು ವಯಸ್ಸಿನ ಹೊರತಾಗಿಯೂ ನೀವು ಪದಕಗಳನ್ನು ಹೇಗೆ ಗೆದ್ದಿರಿ ಎಂದು ಕೇಳಿದರು. ಅವರು ಝಝಾರಿಯಾ ಅವರ ಪತ್ನಿ ಮತ್ತು ಮಾಜಿ ಕಬಡ್ಡಿ ಆಟಗಾರ್ತಿ ಮಂಜು ಅವರನ್ನು ಈಗ ನೀವು ಆಡುತ್ತೀರಾ ಅಥವಾ ಆಟ ಆಡುವುದನ್ನು ನಿಲ್ಲಿಸಿದ್ದೀರಾ ಎಂದು ಪ್ರಶ್ನಿಸಿದರು. ಅದೇ ಸಮಯದಲ್ಲಿ, ಅವರು ಜಿಯಾಗೆ, "ಟೋಕಿಯೋ ಕ್ರೀಡಾಕೂಟದ ನಂತರ, ನೀವು ಇಡೀ ಕುಟುಂಬದೊಂದಿಗೆ ಏಕತಾ ಪ್ರತಿಮೆಯನ್ನು ನೋಡಲು ಹೋಗುತ್ತೀರಾ." ಎಂದರು. ಕ್ರೀಡಾಪಟುಗಳೊಂದಿಗೆ ಪ್ರಧಾನಮಂತ್ರಿಯವರ ಸಂವಾದದ ಬಗ್ಗೆ ಪ್ರತಿಕ್ರಿಯಿಸಿರುವ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್, "ಭಾರತದಲ್ಲಿ ಕ್ರೀಡಾ ಸಂಸ್ಕೃತಿಯನ್ನು ಸೃಷ್ಟಿಸಲು ಬಯಸುವುದಾಗಿ ಭಾರತದ ಯಾವುದೇ ಪ್ರಧಾನಮಂತ್ರಿ ಎಂದಾದರೂ ಹೇಳಿದ್ದಾರೆಯೇ? ಬಹುಶಃ ಪ್ರಧಾನಮಂತ್ರಿ ಮೋದಿ ಅವರು ಈ ರೀತಿ ಮಾಡಿದ ಮೊದಲ ವ್ಯಕ್ತಿಯಾಗಿದ್ದಾರೆ." ಎಂದು ತಿಳಿಸಿದ್ದಾರೆ. ■



## ತಮ್ಮ ವಾಗ್ದಾನ ಪೂರೈಸಿದ ಪ್ರಧಾನಮಂತ್ರಿ

ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯ ಮೇಲಿಂದ ಭಾಷಣ ಮಾಡಿದ ವೇಳೆ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪ್ರಭಾವಶಾಲಿ ಪ್ರದರ್ಶನಕ್ಕಾಗಿ ಭಾರತದ ಒಲಿಂಪಿಕ್ ತಂಡವನ್ನು ಶ್ಲಾಘಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಂತರ ಆಗಸ್ಟ್ 16 ರಂದು ತಮ್ಮ ನಿವಾಸದಲ್ಲಿ ಉಪಾಹಾರ ಕೂಟದಲ್ಲಿ ಎಲ್ಲರನ್ನೂ ಭೇಟಿಯಾಗಿ, ಆಟಗಾರರಿಗೆ ನೀಡಿದ ಭರವಸೆಗಳನ್ನು ಪೂರೈಸಿದರು. ಟೋಕಿಯೊಗೆ ಹೋಗುವ ಮುನ್ನ ನಡೆದ ಸಂಭಾಷಣೆಯಲ್ಲಿ ಪ್ರಧಾನಮಂತ್ರಿಯವರು ಪಿ.ವಿ.ಸಿಂಧು ಅವರಿಗೆ ಪದಕ ಗೆದ್ದು ಮರಳಿದರೆ, ಐಸ್ ಕ್ರೀಮ್ ಕೊಡಿಸುವುದಾಗಿ ಹೇಳಿದ್ದರು. ಈ ಮುನ್ನ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ನೀರಜ್ ಚೋಪ್ರಾ ಪದಕ ಗೆದ್ದು ತಂದರೆ, ಪ್ರಧಾನಮಂತ್ರಿಯವರು, ಅವರಿಗೆ 'ಚುರ್ಮಾ' ತಿನ್ನಿಸುತ್ತಾರೆ ಎಂದು ಹೇಳಿದ್ದರು. ಸಿಂಧು ಮತ್ತು ನೀರಜ್ ಅವರಿಗೆ ನೀಡಿದ ಭರವಸೆಗಳನ್ನು ಪ್ರಧಾನಮಂತ್ರಿ ಮೋದಿ ಈಡೇರಿಸಿದ್ದಷ್ಟೇ ಅಲ್ಲ, ಅವರೊಂದಿಗೆ ವೈಯಕ್ತಿಕವಾಗಿ ಮಾತುಕತೆ ನಡೆಸುವ ಮೂಲಕ ಉಳಿದ ಆಟಗಾರರ ಅನುಭವಗಳನ್ನೂ ತಿಳಿದುಕೊಂಡರು.

## ಟೋಕಿಯೋದಿಂದ ಪದಕದೊಂದಿಗೆ ಹಿಂದಿರುಗಿದ ಸಿಂಧುಗೆ ಐಸ್ ಕ್ರೀಮ್ ನೀಡಿದರು













# ರಾಷ್ಟ್ರದ ಹೆಮ್ಮೆಯಾಗುತ್ತಿರುವ ಸಣ್ಣ ರೈತರು

ಕಳೆದ ವರ್ಷ ಸೆಪ್ಟೆಂಬರ್ 17ರಂದು ಜಾರಿಗೊಳಿಸಲಾದ ಕೃಷಿ ಕಾನೂನುಗಳು ಕೃಷಿಯನ್ನು ಆಧುನೀಕರಿಸುವ ಮತ್ತು ದುರ್ಬಲ ರೈತರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಸಣ್ಣ ರೈತರನ್ನು ಸಬಲೀಕರಿಸಲು ಕೃಷಿ ಸುಧಾರಣೆಗಳಿಗೆ ಸಂಬಂಧಿಸಿದ ಮೂರು ಕಾನೂನುಗಳನ್ನು ತರಲಾಗಿದೆ ಮತ್ತು ಮಧ್ಯವರ್ತಿಗಳಿಂದ ಮುಕ್ತಗೊಳಿಸುವ ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಬೆಳೆಗಳನ್ನು ಮಾರಾಟ ಮಾಡಲು ಇದ್ದ ಅಡೆತಡೆಗಳನ್ನು ನಿವಾರಿಸಲಾಗಿದೆ. ಕೃಷಿ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಮತ್ತು ರೈತರ (ಸಬಲೀಕರಣ ಮತ್ತು ರಕ್ಷಣೆ), ಬೆಲೆ ಖಾತ್ರಿ ಮತ್ತು ಕೃಷಿ ಸೇವೆಗಳ ಕುರಿತ ಒಪ್ಪಂದದ ಮಸೂದೆಯನ್ನು ಸಂಸತ್ತು ಅಂಗೀಕರಿಸಿದೆ, ಇದು ಇಲ್ಲಿಯವರೆಗಿನ ದೇಶದ ಅತಿದೊಡ್ಡ ಕೃಷಿ ಸುಧಾರಣೆಯಾಗಿದೆ.

ಈ ಸುಧಾರಣೆಗಳ ಫಲವಾಗಿ ಇದೇ ಮೊದಲ ಬಾರಿಗೆ ಭಾರತವು ಕೃಷಿ ರಫ್ತಿಗೆ ಸಂಬಂಧಿಸಿದಂತೆ ವಿಶ್ವದ ಅಗ್ರ-10 ದೇಶಗಳ ಸಾಲಿನಲ್ಲಿ ಸ್ಥಾನ ಪಡೆದಿದೆ. ಕೊರೊನಾ ಅವಧಿಯಲ್ಲಿ ದೇಶವು ಕೃಷಿ ರಫ್ತುಗಳ ಹೊಸ ದಾಖಲೆ ಸ್ಥಾಪಿಸಿದೆ. ಭಾರತವು ಇಂದು ಪ್ರಮುಖ ಕೃಷಿ ರಫ್ತು ರಾಷ್ಟ್ರವಾಗಿ ಹೊರಹೊಮ್ಮಿದೆ. ಅದು ಕೃಷಿ ಮೂಲಸೌಕರ್ಯ, ಸಂಪರ್ಕ ಮೂಲಸೌಕರ್ಯ ಸ್ಥಾಪಿಸುವುದಾಗಿರಲಿ ಅಥವಾ ಬೃಹತ್ ಆಹಾರ ಉದ್ಯಾನವನಗಳನ್ನು ಸ್ಥಾಪಿಸುವುದೇ ಆಗಿರಲಿ ಸಣ್ಣ ರೈತರು ಅದರಿಂದ ಸಾಕಷ್ಟು ಪ್ರಯೋಜನ ಪಡೆಯುತ್ತಿದ್ದಾರೆ. ಕೃಷಿ ಮೂಲಸೌಕರ್ಯ ನಿಧಿಯಾಗಿರಲಿ ಅಥವಾ 10 ಸಾವಿರ ರೈತ ಉತ್ಪಾದಕ ಸಂಸ್ಥೆಗಳ ರಚನೆ ಮಾಡುವುದಾಗಿರಲಿ, ಸಣ್ಣ ರೈತರ ಸಾಮೂಹಿಕ ಶಕ್ತಿಯನ್ನು ಹೆಚ್ಚಿಸುವುದು ಸರ್ಕಾರದ ಗುರಿಯಾಗಿದೆ. ಜೊತೆಗೆ ಇದು, ಮಾರುಕಟ್ಟೆಯಲ್ಲಿ ರೈತರಿಗೆ ಹೆಚ್ಚಿನ ಪ್ರವೇಶಾವಕಾಶ ಮತ್ತು ಚೌಕಾಶಿ ಮಾಡುವ ಶಕ್ತಿಯನ್ನು ಒದಗಿಸಲು ಉದ್ದೇಶಿಸಿದೆ. ನೂರಾರು ಸಣ್ಣ ರೈತರು ಈ ರೈತ ಉತ್ಪಾದಕ ಸಂಸ್ಥೆಗಳೊಂದಿಗೆ ಒಗ್ಗೂಡಿದಾಗ ಅವರ ಸಾಮೂಹಿಕ ಶಕ್ತಿ ಹಲವು ಪಟ್ಟು ಹೆಚ್ಚಾಗುತ್ತದೆ. ಇದು ಆಹಾರ ಸಂಸ್ಕರಣೆ ಆಗಿರಲಿ ಅಥವಾ ರಫ್ತೇ ಆಗಿರಲಿ, ರೈತರು ಇತರರ ಮೇಲೆ ಅವಲಂಬನೆ ಆಗುವುದನ್ನು ಕಡಿಮೆ ಮಾಡುತ್ತದೆ.

ದೇಶದ ಶೇಕಡಾ 80ಕ್ಕಿಂತ ಹೆಚ್ಚು ರೈತರು 2 ಹೆಕ್ಟೇರ್ ಗಿಂತ ಕಡಿಮೆ ಭೂಮಿಯನ್ನು ಹೊಂದಿರುವವರಾಗಿದ್ದಾರೆ. ದೇಶದಲ್ಲಿ ಈ ಹಿಂದೆ ಮಾಡಲಾದ ನೀತಿಗಳು ಈ ಸಣ್ಣ ರೈತರ ಮೇಲೆ ಎಷ್ಟು ಗಮನ ಹರಿಸಬೇಕಿತ್ತೋ ಅಷ್ಟು ಗಮನ ಹರಿಸಲಿಲ್ಲ. ಈಗ ಈ ಸಣ್ಣ ರೈತರನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ, ಸರ್ಕಾರವು ರೈತರ ಸಾಮೂಹಿಕ ಶಕ್ತಿಯನ್ನು ಹೆಚ್ಚಿಸುವ ಮೂಲಕ ಮತ್ತಷ್ಟು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ರೈತರಿಗೆ ಹೊಸ ಸೌಲಭ್ಯಗಳನ್ನು ಒದಗಿಸುವ ಮೂಲಕ ಬದಲಾಗುತ್ತಿರುವ ಯುಗಮಾನಕ್ಕೆ ಅವರು ಹೊಂದಿಕೊಳ್ಳುವಂತೆ ಮಾಡಬೇಕು. ಮುಂದಿನ 25 ವರ್ಷಗಳಲ್ಲಿ, ಈ ಸ್ಫೂರ್ತಿಯನ್ನು ಮತ್ತಷ್ಟು ಅನ್ವೇಷಿಸಬೇಕಾಗಿದೆ. ಸಣ್ಣ ರೈತರು ದೇಶದ ಹೆಮ್ಮೆಯಾಗುತ್ತಾರೆ, ಇದು ನವ ಭಾರತದ ಕನಸಾಗಿದೆ. ಈ ಎಲ್ಲಾ ವಿಷಯಗಳ ಬಗ್ಗೆ ನಮ್ಮ ಸಲಹಾ ಸಂಪಾದಕರಾದ ಸಂತೋಷ್ ಕುಮಾರ್ ಹೆಚ್ಚು ಬೆಳಕು ಚೆಲ್ಲುತ್ತಾರೆ.....



ಕೃಷಿ ಕ್ಷೇತ್ರದಲ್ಲಿನ ಗಮನಾರ್ಹ ಸುಧಾರಣೆಗಳ ಪರಿಣಾಮವಾಗಿ, ಭಾರತವು ಮೊದಲ ಬಾರಿಗೆ ಕೃಷಿ ರಫ್ತು ಕ್ಷೇತ್ರದಲ್ಲಿ ವಿಶ್ವದ ಅಗ್ರ 10 ದೇಶಗಳ ಸಾಲಿನಲ್ಲಿ ಸ್ಥಾನ ಪಡೆದಿದೆ.

# ರೈತರನ್ನು ಸಶಕ್ತಗೊಳಿಸುವುದು











ಸ್ವಾತಂತ್ರ್ಯ ಶತಮಾನೋತ್ಸವದ ಹೊಸ ಸಂಕಲ್ಪಗಳು ಮತ್ತು ಮಹತ್ವಾಕಾಂಕ್ಷೆಗಳೊಂದಿಗೆ ಭಾರತವು ಆಗಸ್ಟ್ 15 ರಂದು ಸ್ವಾತಂತ್ರ್ಯದ 75ನೇ ವರ್ಷಕ್ಕೆ ಕಾಲಿಟ್ಟಿದೆ. ಅಭಿವೃದ್ಧಿಯ ಈ ಪಯಣದಲ್ಲಿ ದೇಶದ ರೈತರು ಸಮಾನ ಪಾಲುದಾರರಾಗಿದ್ದಾರೆ. 1947ರಲ್ಲಿ ಭಾರತ ಸ್ವತಂತ್ರವಾದಾಗ ದೇಶವು ಆಹಾರ ಭದ್ರತೆಯ ಗುರಿಯನ್ನು ಹೊಂದಿತ್ತು, ದೇಶದ ರೈತರು ಹಸಿರು ಕ್ರಾಂತಿಯ ಮೂಲಕ ಅದನ್ನು ಸಾಧ್ಯವಾಗಿಸಿದರು. ಆದಾಗ್ಯೂ, ಏರುಪೇರಾದ ನೀತಿಗಳು ಸ್ವಾತಂತ್ರ್ಯದ 7 ದಶಕಗಳ ನಂತರವೂ ಅನ್ನದಾತನನ್ನು ಪರೀಕ್ಷೆಗೆ ಒಡ್ಡಿ, ಹತಾಶೆಯನ್ನು ಹೆಚ್ಚಿಸಿವೆ. ಕಳೆದ 7 ವರ್ಷಗಳಲ್ಲಿ ಮೋದಿ ಸರ್ಕಾರ ರೈತರ ಆದಾಯವನ್ನು ದ್ವಿಗುಣಗೊಳಿಸಲು ಅನೇಕ ಯೋಜನೆಗಳನ್ನು ಮಾಡಿದೆ. ಕನಿಷ್ಠ ಬೆಂಬಲ ಬೆಲೆಯನ್ನು ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಹೆಚ್ಚಿಸುವುದು ಅಥವಾ 2022ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವುದು ಅಥವಾ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ ರೈತರ ಖಾತೆಗೆ ನೇರವಾಗಿ 7 ಲಕ್ಷ ಕೋಟಿ ರೂ. ವರ್ಗಾವಣೆ ಮಾಡುವುದು ಸೇರಿ, ಅವರ ಕಲ್ಯಾಣಕ್ಕಾಗಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ದಶಕಗಳ ನಿರಾಸಕ್ತಿಯನ್ನು ಕೊನೆಗೊಳಿಸಿದ ಸರ್ಕಾರವು ರೈತರ ಕಲ್ಯಾಣಕ್ಕಾಗಿ ಹಲವಾರು ಆಮೂಲಾಗ್ರ ಸುಧಾರಣೆಗಳನ್ನು ತಂದಿದೆ. ರೈತರ ಸ್ಥಿತಿಯನ್ನು ಸುಧಾರಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2016 ರಲ್ಲಿ ಒಂದು ರಾಷ್ಟ್ರ-ಒಂದು ಮಾರುಕಟ್ಟೆ ಘೋಷಿಸಿದರು. ಕೃಷಿಯ ಸಮತೋಲಿತ ಅಭಿವೃದ್ಧಿಯನ್ನು ಖಾತ್ರಿಪಡಿಸಿಕೊಳ್ಳಲು ಮತ್ತು ಸಣ್ಣ ರೈತರಿಗೂ ಸರ್ಕಾರದ ಯೋಜನೆಗಳ ಪ್ರಯೋಜನಗಳನ್ನು ಒದಗಿಸುವುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಷ್ಟಿಕೋನವಾಗಿದೆ. ಇಲ್ಲಿಯವರೆಗೆ ಕೇವಲ ಬೆರಳೆಣಿಕೆಯಷ್ಟು ಸಮೃದ್ಧ ರೈತರು ಮಾತ್ರ ಈ ಪ್ರಯೋಜನವನ್ನು ಪಡೆಯುತ್ತಿದ್ದರು ಮತ್ತು ಸುಮಾರು ಶೇ. 86ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರು ಅದರಿಂದ ವಂಚಿತರಾಗಿದ್ದರು. ಸುಗ್ಗಿಯ ಪೂರ್ವ ಮತ್ತು ನಂತರ ಸೇರಿದಂತೆ ವಿವಿಧ ಹಂತಗಳಲ್ಲಿ ರೈತರಿಗೆ ಸಹಾಯ ಮಾಡಲು ಸುಧಾರಣೆಗಳನ್ನು ಕೈಗೊಳ್ಳುತ್ತಿರುವುದರಿಂದ ಯೋಜಿತ ಅಭಿವೃದ್ಧಿಯ ಮೂಲಕ ರೈತರು ಸಬಲರಾಗುತ್ತಿದ್ದಾರೆ.

ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸುವುದೂ ಸೇರಿದಂತೆ ಸರ್ಕಾರವು ಕೃಷಿ ವಲಯದಲ್ಲಿ ವ್ಯಾಪಕ ಬದಲಾವಣೆಗಳನ್ನು ಮಾಡಿದೆ. ಗಮನಾರ್ಹವಾಗಿ, ಮುಂಗಾರು ಅಥವಾ ಹಿಂಗಾರು ಹಂಗಾಮಿನಲ್ಲಿ, ಸರ್ಕಾರವು ಇಲ್ಲಿಯವರೆಗೆ ಎಂಎಸ್.ಪಿ.ಯಡಿಯಲ್ಲಿ ಅತಿ ಹೆಚ್ಚಿನ ಖರೀದಿ ಮಾಡಿದೆ. ಅದರೊಂದಿಗೆ 1 ಲಕ್ಷ 70 ಸಾವಿರ ಕೋಟಿ ರೂ. ಹಣವನ್ನು ನೇರವಾಗಿ ಭತ್ತ ಬೆಳೆವ ರೈತರ ಖಾತೆಗೆ ಮತ್ತು ಸುಮಾರು 85 ಸಾವಿರ ಕೋಟಿ ರೂ.ಗಳನ್ನು ಗೋಧಿ ಬೆಳೆವ ರೈತರ ಖಾತೆಗೆ ವರ್ಗಾಯಿಸಲಾಗಿದೆ. ಸರ್ಕಾರದ ಜಾಣ್ಮೆಯ ಚಿಂತನೆಯಿಂದಾಗಿ ಇಂದು ಭಾರತದ ಕಣಜಗಳು ತುಂಬಿವೆ.

**ಕೃಷಿ ಉಪಕ್ರಮಗಳಾದ ಉತ್ಪನ್ನಗಳನ್ನು ಎಲ್ಲಿಯಾದರೂ ಮಾರಾಟ ಮಾಡುವ ಸ್ವಾತಂತ್ರ್ಯ, ಕೃಷಿ ಮೂಲಸೌಕರ್ಯ ನಿಧಿ, ರೈತರ ಉತ್ಪನ್ನ ಸಂಘಗಳು, ಇ-ನಾಮ್, ಕಿಸಾನ್ ರೈಲು, ಮಣ್ಣಿನ ಆರೋಗ್ಯ ಕಾರ್ಡ್, ನೂತನ ಬೆಳೆ ವಿಮಾ ಯೋಜನೆಗಳು ಈಗ ದೊಡ್ಡ ರೈತರಿಗೆ ಮಾತ್ರವಲ್ಲದೆ ಸಣ್ಣ ರೈತರಿಗೂ ಉಪಯುಕ್ತವಾಗಿದೆ.**



ಕೃಷಿ ಸುಧಾರಣೆಗಳು ಮಾರುಕಟ್ಟೆ ತೆರಿಗೆಯಿಂದ ರೈತರಿಗೆ ಮುಕ್ತಿ ನೀಡಿದೆ. ಈ ಮೊದಲು ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವಾಗ ಶೇ 2ರಿಂದ ಶೇ 8.5ರವರೆಗೆ ಮಂಡಿ ತೆರಿಗೆಯ ಹೊರೆಯನ್ನು ಭರಿಸಬೇಕಾಗಿತ್ತು. ಆದರೆ ಮಾರುಕಟ್ಟೆಯ ಹೊರಗೆ ತಮ್ಮ ಬೆಳೆಗಳನ್ನು ಮಾರಾಟ ಮಾಡುವ ಸ್ವಾತಂತ್ರ್ಯವನ್ನು ಪಡೆಯುವ ಮೂಲಕ, ಕೋಟ್ಯಂತರ ರೈತರು ಈ ತೆರಿಗೆಯ ಹೊರೆಯಿಂದ ಮುಕ್ತಿ ಪಡೆದಿದ್ದಾರೆ.

ಕೃಷಿ ರಫ್ತು ವಿಚಾರದಲ್ಲಿ ಭಾರತ ಇದೇ ಮೊದಲ ಬಾರಿಗೆ ವಿಶ್ವದ ಅಗ್ರ-10 ರಾಷ್ಟ್ರಗಳಲ್ಲಿ ಸ್ಥಾನ ಪಡೆದಿದೆ. ಕೊರೊನಾ ಅವಧಿಯಲ್ಲಿ ದೇಶವು ಕೃಷಿ ರಫ್ತುಗಳ ಹೊಸ ದಾಖಲೆ ಸ್ಥಾಪಿಸಿದೆ. ಮುಂದಿನ 25 ವರ್ಷಗಳಲ್ಲಿ ಅಮೃತ್ ಕಾಲ್ ಅವಧಿಯಲ್ಲಿ ಸರ್ಕಾರ ಅವರಿಗೆ ದೊಡ್ಡ ಪಾತ್ರವನ್ನು ವಹಿಸುತ್ತಿದೆ. ಸರ್ಕಾರದ ಯೋಜನೆಗಳು ಮತ್ತು ನೀತಿಗಳಲ್ಲಿ ಮೊದಲ ಬಾರಿಗೆ ಈ ದುರ್ಬಲ ರೈತರಿಗೆ ಮೊದಲ ಆದ್ಯತೆ ನೀಡಲಾಗಿದೆ. ದೇಶದ ಶೇಕಡಾ 80ಕ್ಕಿಂತ ಹೆಚ್ಚು ರೈತರು 2 ಹೆಕ್ಟೇರ್ ವರೆಗೆ ಮಾತ್ರ ಭೂಮಿಯನ್ನು ಹೊಂದಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ, ಇಲ್ಲಿಯವರೆಗೆ ರೈತರಿಗೆ 1 ಲಕ್ಷ 60 ಸಾವಿರ ಕೋಟಿ ರೂ.ಗಳನ್ನು ನೀಡಲಾಗಿದೆ. ಕೊರೊನಾ ಕಷ್ಟದ ಸಮಯದಲ್ಲಿ ಸುಮಾರು ₹ 1 ಲಕ್ಷ ಕೋಟಿ ಸಣ್ಣ ರೈತರ ಖಾತೆಗಳಿಗೆ ಹಣ ವರ್ಗಾಯಿಸಲಾಗಿದೆ. ಇಷ್ಟೇ ಅಲ್ಲ, ಕೊರೊನಾ ಅವಧಿಯಲ್ಲಿ 2 ಕೋಟಿಗೂ ಹೆಚ್ಚು ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ಹೆಚ್ಚಾಗಿ ಸಣ್ಣ ರೈತರಿಗೆ ನೀಡಲಾಗಿದೆ. ಅದರ ಮೂಲಕ ಸಾವಿರಾರು ಕೋಟಿ ಮೌಲ್ಯದ ಸಾಲ ಪಡೆಯಲು ರೈತರಿಗೆ ಸಾಧ್ಯವಾಗಿದೆ.

ಕೃಷಿ ಮೂಲಸೌಕರ್ಯ ನಿಧಿ ಅಥವಾ 10 ಸಾವಿರ ರೈತ ಉತ್ಪಾದಕ ಸಂಸ್ಥೆಗಳ ರಚನೆಯಂತಹ ಉಪಕ್ರಮಗಳು ಸಣ್ಣ ರೈತರ ಸಾಮೂಹಿಕ ಶಕ್ತಿಯನ್ನು ಹೆಚ್ಚಿಸುವ ಮೂಲಕ ರೈತರ ಆಶೋತ್ತರಗಳನ್ನು ರೂಪಿಸುತ್ತಿವೆ. ಈಗ ಅವರು ದೇಶದ ಅಭಿವೃದ್ಧಿ ಪಯಣದಲ್ಲಿ ತಮ್ಮ ಸೂಕ್ತ ಪಾಲನ್ನು ಪಡೆಯಲು ಶಕ್ತರಾಗಿದ್ದಾರೆ. ಸರ್ಕಾರವು ಕೃಷಿ ಕ್ಷೇತ್ರದಲ್ಲಿ ತಂದಿರುವ ಇತ್ತೀಚಿನ ಸುಧಾರಣೆಗಳು ಅವರಿಗೆ ಮಾರುಕಟ್ಟೆಯ ಹೆಚ್ಚಿನ ಪ್ರವೇಶವನ್ನು ಖಾತ್ರಿಪಡಿಸುತ್ತಿವೆ ಮತ್ತು ಮಾರುಕಟ್ಟೆಯಲ್ಲಿ ಚೌಕಾಶಿ ಮಾಡುವ ಅವರ ಸಾಮರ್ಥ್ಯವೂ ಹೆಚ್ಚಾಗಿದೆ. ಎಫ್.ಪಿ.ಒ.ಗಳು ರೈತರನ್ನು ಆರ್ಥಿಕವಾಗಿ ಸಬಲೀಕರಿಸಲು ಮತ್ತು ಅವರನ್ನು ಸ್ವತಂತ್ರರನ್ನಾಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಒಂದು ಕಡೆ ಆಹಾರ ಸಂಸ್ಕರಣಾ ಘಟಕಗಳ ಮೇಲಿನ ಅವರ ಅವಲಂಬನೆ ಕಡಿಮೆಯಾಗುತ್ತದೆ ಮತ್ತು ಅದೇ ವೇಳೆ ಅವರು ತಮ್ಮ ಉತ್ಪನ್ನಗಳನ್ನು ಹೆಚ್ಚು ಮುಕ್ತವಾಗಿ ರಫ್ತು ಮಾಡಲು ಸಾಧ್ಯವಾಗುತ್ತದೆ.

ದೇಶದ ರೈತನನ್ನು ಉದ್ಯಮಿಯನ್ನಾಗಿ ಮಾಡುವುದು ಮೋದಿ ಸರ್ಕಾರದ ಪ್ರಯತ್ನವಾಗಿದೆ, ಇದಕ್ಕಾಗಿ ಬೀಜ ಸಂಗ್ರಹಣೆಯಿಂದ ಉತ್ಪನ್ನವನ್ನು ಮಾರುಕಟ್ಟೆಗೆ ರವಾನಿಸುವವರೆಗಿನ ಎಲ್ಲ ಪ್ರಕ್ರಿಯೆಯನ್ನು ಸುಗಮ ಮತ್ತು ಪ್ರವೇಶಾರ್ಹ ಮಾಡಲಾಗುತ್ತಿದೆ.

ಕೃಷಿಯ ಜೊತೆಗೆ, ರೈತರಿಗೆ ಅನೇಕ ಆದಾಯ ಮಾರ್ಗಗಳನ್ನು ತೆರೆಯಲಾಗಿದೆ. ಪಶುಸಂಗೋಪನೆಯಿಂದ ಹಿಡಿದು ಜೇನು ಸಾಕಣೆ ಅಥವಾ ಮೀನು ಸಾಕಣೆಯಿಂದ ಹಿಡಿದು ಸಾವಯವ ಕೃಷಿವರೆಗೆ, ದೇಶದಲ್ಲಿ ಕೃಷಿಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈಗ ದೇಶವು ಆಹಾರ ಸಂಸ್ಕರಣೆಗಾಗಿ ಹಳ್ಳಿಗಳ ಬಳಿ ಕೈಗಾರಿಕಾ ಗುಚ್ಛಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಮಾಡುತ್ತಿದೆ. ಅಲ್ಲದೆ, ಈ ಕೈಗಾರಿಕೆಗಳ ಪ್ರಗತಿಗಾಗಿ ಸಂಶೋಧನಾ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಜೈ ಕಿಸಾನ್, ಜೈ ವಿಜ್ಞಾನ್ ಮತ್ತು ಜೈ ಅನುಸಂಧಾನ್ ಘೋಷಣೆ ಸಾಕಾರವಾಗುತ್ತಿದ್ದು ನವ ಭಾರತ ಉದಯಿಸುತ್ತಿದೆ. ■




ಸಂಪುಟದ ನಿರ್ಣಯಗಳು

# ಕೃಷಿಯನ್ನು ಉತ್ತೇಜಿಸಲು ವಿನೂತನ ಕ್ರಮಗಳನ್ನು ಕೈಗೊಳ್ಳುತ್ತಿರುವ ಸರ್ಕಾರ

**ಆಮದು ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ದೇಶದೊಳಗೆ ಉತ್ಪಾದನೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಸಮಗ್ರ ವಿಧಾನವನ್ನು ಕೈಗೊಂಡಿದೆ. ಖಾದ್ಯ ತೈಲದ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಅದರ ಆಮದನ್ನು ತಗ್ಗಿಸುವ ಉದ್ದೇಶದಿಂದ ಸರ್ಕಾರ ಸ್ವಾವಲಂಬನೆಗೆ ಒತ್ತು ನೀಡಿದೆ. ಅಲ್ಲದೆ, ಇದೇ ಮೊದಲ ಬಾರಿಗೆ, ಸರ್ಕಾರ ಕಬ್ಬು ಬೆಳೆಗಾರರಿಗೆ ಅತ್ಯಂತ ಲಾಭದಾಯಕ ಬೆಲೆಯನ್ನು ಘೋಷಿಸಿದೆ, ಇದರಿಂದ ಅವರು ಭಾರತವನ್ನು ಕೃಷಿಯಲ್ಲಿ ಸಂಪೂರ್ಣವಾಗಿ ಸ್ವಾವಲಂಬಿಯನ್ನಾಗಿ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ.**

## ನಿರ್ಣಯ: ಖಾದ್ಯ ತೈಲಗಳ ರಾಷ್ಟ್ರೀಯ ಅಭಿಯಾನಕ್ಕೆ ಸಂಪುಟದ ಅನುಮೋದನೆ- ಕೇಂದ್ರ ಪ್ರಾಯೋಜಿತ ಹೊಸ ಯೋಜನೆಯಾಗಿ ಪಾಮ್ ಆಯಿಲ್



**ಪರಿಣಾಮ:** ಭಾರತವು ಕಚ್ಚಾ ತಾಳೆ ಎಣ್ಣೆ ಅವಶ್ಯಕತೆ ಪೈಕಿ ಶೇ. 98 ರಷ್ಟು ಆಮದು ಮಾಡಿಕೊಳ್ಳಬೇಕಾಗಿದೆ. ಅಂತಹ ಪರಿಸ್ಥಿತಿಯಲ್ಲಿ, ಈ ರಾಷ್ಟ್ರೀಯ ಅಭಿಯಾನದ ಮೂಲಕ, ಈಶಾನ್ಯ ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳ ಬಗ್ಗೆ ವಿಶೇಷ ಗಮನ ಹರಿಸುವುದರೊಂದಿಗೆ ಎಣ್ಣೆಕಾಳುಗಳು ಮತ್ತು ತಾಳೆ ಎಣ್ಣೆಯ ಪ್ರದೇಶ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವತ್ತ ಗಮನ ಹರಿಸಲಾಗುವುದು. ದೇಶದಲ್ಲಿ ತಾಳೆ ಎಣ್ಣೆಗಾಗಿ ಕೃಷಿ ಮಾಡಬಹುದಾದ 28 ಲಕ್ಷ ಹೆಕ್ಟೇರ್ ಭೂಮಿಯ ಪೈಕಿ, ಈಶಾನ್ಯದಲ್ಲಿ 9 ಲಕ್ಷ ಹೆಕ್ಟೇರ್ ಗೂ ಹೆಚ್ಚು ಭೂಮಿ ತಾಳೆ ಎಣ್ಣೆ ಕೃಷಿಗೆ ಸೂಕ್ತವಾಗಿದೆ. 12 ರಾಜ್ಯಗಳಲ್ಲಿ ತಾಳೆ ಎಣ್ಣೆ ಕೃಷಿಯನ್ನು ಉತ್ತೇಜಿಸಲು ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ.

- ಕೃಷಿ ಉತ್ಪನ್ನಗಳಿಗೆ ಸ್ವಯಂ ನಿಯಂತ್ರಣ ಬೆಲೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿ ಸರ್ಕಾರ ತೊಡಗಿದೆ. ಮಾರುಕಟ್ಟೆಯ ಏರಿಳಿತಗಳಿಂದಾಗಿ ಬೆಲೆಗಳು ಕಡಿಮೆಯಾದರೆ, ಆಗ ಕೇಂದ್ರ ಸರ್ಕಾರ ರೈತರಿಗೆ ಡಿಬಿಟಿ ಮೂಲಕ ಹಣ ಪಾವತಿಸುತ್ತದೆ.
- ಈಶಾನ್ಯದಲ್ಲಿ ತಮ್ಮ ಘಟಕಗಳನ್ನು ಸ್ಥಾಪಿಸಲು ಕೈಗಾರಿಕೆಗಳನ್ನು ಆಕರ್ಷಿಸಲು ಸರ್ಕಾರ ₹5 ಕೋಟಿ ನೆರವು ನೀಡಲಿದೆ.
- ಈ ಹಿಂದೆ ಪ್ರತಿ ಹೆಕ್ಟೇರ್ ಗೆ 12 ಸಾವಿರ ರೂ. ನೆರವು ನೀಡಲಾಗುತ್ತಿದ್ದು, ಇದನ್ನು 29 ಸಾವಿರ ರೂ. ಗೆ ಹೆಚ್ಚಿಸಲಾಗಿದೆ.
- ಪ್ರಸ್ತುತ ತಾಳೆ ಎಣ್ಣೆಯನ್ನು 3.5 ಲಕ್ಷ ಹೆಕ್ಟೇರ್ ನಲ್ಲಿ ಬೆಳೆಯಲಾಗುತ್ತದೆ, ಇದು ಮುಂಬರುವ ಸಮಯದಲ್ಲಿ 10 ಲಕ್ಷ ಹೆಕ್ಟೇರ್ ಗೆ ಹೆಚ್ಚಾಗುವ ನಿರೀಕ್ಷೆಯಿದೆ.
- 2025-26ರ ವೇಳೆಗೆ ಖಾದ್ಯ ತೈಲ ಉತ್ಪಾದನೆಯು 1.1 ದಶಲಕ್ಷ ಟನ್ ಗಳಿಗೆ ಮತ್ತು 2029-30ರ ವೇಳೆಗೆ 2.8 ದಶಲಕ್ಷ ಟನ್ ಗಳಿಗೆ ಏರಿಕೆಯಾಗಲಿದೆ.
- ಈ ಉಪಕ್ರಮದ ಅಡಿಯಲ್ಲಿ 11,040 ಕೋಟಿ ರೂ.ಗಳ ಆರ್ಥಿಕ ನೆರವನ್ನು ನೀಡಲಾಗುವುದು. ಈ ಅಭಿಯಾನ ಬಂಡವಾಳ ಹೂಡಿಕೆ ಹೆಚ್ಚಳ, ಉದ್ಯೋಗ ಸೃಷ್ಟಿ, ಆಮದು ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸುತ್ತದೆ.

ಆಗಸ್ಟ್ 18 ರಂದು ನಡೆದ ಸಂಪುಟ ಸಭೆಯ ಸುದ್ದಿಗೋಷ್ಠಿಯ ಸಂಪೂರ್ಣ ವೀಡಿಯೊವನ್ನು ನೋಡಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

ಆಗಸ್ಟ್ 25 ರಂದು ಸಂಪುಟ ಸಭೆಯ ಸುದ್ದಿಗೋಷ್ಠಿಯ ಸಂಪೂರ್ಣ ವೀಡಿಯೊವನ್ನು ನೋಡಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

**ನಿರ್ಣಯ: ರೈತರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ 22-2021ರ ಸಕ್ಕರೆ ಹಂಗಾಮಿನಲ್ಲಿ ಕಬ್ಬಿಗೆ ಅತ್ಯಂತ ಸಮಂಜಸ ಮತ್ತು ಲಾಭದಾಯಕ ಬೆಲೆಯನ್ನು ಸರ್ಕಾರ ಅನುಮೋದಿಸಿದೆ.**



**ಪರಿಣಾಮ:** ಕಬ್ಬಿಗೆ ಸಮಂಜಸ ಮತ್ತು ಲಾಭದಾಯಕ ಬೆಲೆಯನ್ನು ಪ್ರತಿ ಕ್ವಿಂಟಾಲ್‌ಗೆ 290 ರೂ.ಗೆ ನಿಗದಿಪಡಿಸಲಾಗಿದ್ದು, ಇದು 2013 - 14 ಕ್ಕಿಂತ ಶೇಕಡಾ 38 ರಷ್ಟು ಹೆಚ್ಚಾಗಿದೆ.

- ರೈತರು ತಾವು ಮಾಡಿದ ವೆಚ್ಚಕ್ಕಿಂತ ಶೇಕಡಾ 50ರಷ್ಟು ಹೆಚ್ಚಿನ ಆದಾಯವನ್ನು ಪಡೆಯುತ್ತಾರೆ. ಈ ನಿರ್ಧಾರದಿಂದ 5 ಕೋಟಿ ಕಬ್ಬು ಬೆಳೆಗಾರರು ಮತ್ತು ಅವರ ಅವಲಂಬಿತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ 5 ಲಕ್ಷ ಕಾರ್ಮಿಕರಿಗೆ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಪ್ರಯೋಜನವಾಗಲಿದೆ.
- 2020-21 ರಲ್ಲಿ 91 ಸಾವಿರ ಕೋಟಿ ರೂ.ಗಳನ್ನು ಕಬ್ಬು ಬೆಳೆಗಾರರಿಗೆ 2,976 ಲಕ್ಷ ಟನ್ ಕಬ್ಬಿಗಾಗಿ ಪಾವತಿಸಲಾಗಿತ್ತು, ಇದು ಹಿಂದೆಂದಿಗಿಂತಲೂ ಹೆಚ್ಚಿನ ಮಟ್ಟದ್ದಾಗಿದೆ.
- ಹೆಚ್ಚುವರಿ ಕಬ್ಬನ್ನು ಪೆಟ್ರೋಲ್ ನೊಂದಿಗೆ ಬೆರೆಸುವ ಎಥೆನಾಲ್ ಆಗಿ ಪರಿವರ್ತಿಸಲು ಸರ್ಕಾರ ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುತ್ತಿದೆ. ಇದು ಹಸಿರು ಇಂಧನವಾಗಿ ಕಾರ್ಯನಿರ್ವಹಿಸುವುದಲ್ಲದೆ ಕಚ್ಚಾ ತೈಲ ಆಮದಿಗೆ ಸಂಬಂಧಿಸಿದಂತೆ ವಿದೇಶಿ ವಿನಿಮಯವನ್ನೂ ಉಳಿಸುತ್ತದೆ.
- ಮುಂಬರುವ 2020-21ರ ಸಕ್ಕರೆ ಋತುವಿನಲ್ಲಿ, ಸುಮಾರು 35 ಎಲ್ ಎಂಟಿ ಸಕ್ಕರೆಯನ್ನು ಎಥೆನಾಲ್ ಆಗಿ ಪರಿವರ್ತಿಸಲಾಗುವುದು ಮತ್ತು 2024-25ರ ವೇಳೆಗೆ ಸುಮಾರು 60 ಎಲ್ ಎಂಟಿ ಸಕ್ಕರೆಯನ್ನು ಎಥೆನಾಲ್ ಆಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ, ಇದು ಹೆಚ್ಚುವರಿ ಕಬ್ಬು ಉತ್ಪಾದನೆಯ ಸಮಸ್ಯೆಯನ್ನು ಪರಿಹರಿಸುತ್ತದೆ ಮತ್ತು ಸಕಾಲಿಕ ಪಾವತಿಯನ್ನು ಸಕ್ರಿಯಗೊಳಿಸುತ್ತದೆ.

**ನಿರ್ಣಯ: ಈಶಾನ್ಯ ವಲಯ ಕೃಷಿ ಮಾರುಕಟ್ಟೆ ನಿಗಮ ನಿಯಮಿತದ ಪುನಶ್ಚೇತನಕ್ಕೆ ಸಚಿವ ಸಂಪುಟದ ಅನುಮೋದನೆ.**

**ಪರಿಣಾಮ:** ಈ ಉದ್ದೇಶಕ್ಕಾಗಿ 77.45 ಕೋಟಿ ರೂ. ಪುನಶ್ಚೇತನ ಪ್ಯಾಕೇಜ್ ಅನ್ನು ಹಂಚಿಕೆ ಮಾಡಲಾಗಿದೆ.

- ಇದು ಈಶಾನ್ಯ ವಲಯದ ರೈತರಿಗೆ ತಮ್ಮ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಇದು ನಿಗಮದ ಆದಾಯ ಹೆಚ್ಚಿಸುತ್ತದೆ.
- ಈಶಾನ್ಯ ಮತ್ತು ದೇಶದ ಇತರ ಭಾಗಗಳ ಸಾವಯವ ಉತ್ಪನ್ನಗಳ ಜಿಐ ಟ್ಯಾಗ್ ಮತ್ತು ಮಾರ್ಕೆಟಿಂಗ್ ಮಾಡಲಾಗುತ್ತದೆ.
- ಈಶಾನ್ಯ ವಲಯದ ರೈತರ ಉತ್ಪನ್ನಗಳನ್ನು ವಿಶ್ವ ಮಾರುಕಟ್ಟೆಯಲ್ಲಿ ಉತ್ತೇಜಿಸಲಾಗುತ್ತದೆ. ಇದು ಕೃಷಿ ವಲಯದಲ್ಲಿ ನೇರ ಮತ್ತು ಪರೋಕ್ಷ ಉದ್ಯೋಗವನ್ನು ಹೆಚ್ಚಿಸುತ್ತದೆ.

**ನಿರ್ಣಯ: ಓಝೋನ್ ಪದರ ಕ್ಷೀಣಿಸುವ ವಸ್ತುಗಳ ಮೇಲಿನ ಮಾಂಟ್ರಿಯಲ್ ಶಿಷ್ಟಾಚಾರದ ಕಿಗಾಲಿ ತಿದ್ದುಪಡಿಗೆ ಸಚಿವ ಸಂಪುಟದ ಅನುಮೋದನೆ.**



**ಪರಿಣಾಮ:** ಹೈಡ್ರೋಫ್ಲೋರೋಕಾರ್ಬನ್ ಗಳನ್ನು ಹೊರಹಾಕಲು ಭಾರತವು 2023ರ ವೇಳೆಗೆ ರಾಷ್ಟ್ರೀಯ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲಿದೆ.

- ಕಿಗಾಲಿ ತಿದ್ದುಪಡಿಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಅಸ್ತಿತ್ವದಲ್ಲಿರುವ ಶಾಸನಾತ್ಮಕ ಚೌಕಟ್ಟಿಗೆ 2024ರ ಮಧ್ಯಭಾಗದಲ್ಲಿ ತಿದ್ದುಪಡಿ ಮಾಡಲಾಗುವುದು.
- ಭಾರತವು ಹೈಡ್ರೋಫ್ಲೋರೋ ಕಾರ್ಬನ್‌ಗಳನ್ನು (ಎಚ್ ಎಫ್ ಸಿ) ಹಂತ ಹಂತವಾಗಿ ತಗ್ಗಿಸಲಿದೆ.
- ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ತಡೆಯಲಾಗುವುದು, ಇದು ಹವಾಮಾನ ಬದಲಾವಣೆಯನ್ನು ತಡೆಗಟ್ಟಲು ಸಹಾಯ ಮಾಡುತ್ತದೆ.
- ಉದ್ಯೋಗ ಸೃಷ್ಟಿಗೆ ಉತ್ತೇಜನ ಸಿಗುತ್ತದೆ. ಹೊಸ ಪೀಳಿಗೆಯ ಪರ್ಯಾಯ ರಿಫ್ರಿಜೆರೆಂಟ್ ಗಳು ಮತ್ತು ಸಂಬಂಧಿತ ತಂತ್ರಜ್ಞಾನಗಳಿಗಾಗಿ ದೇಶೀಯ ಹೊಸ ಶೋಧವನ್ನು ಪ್ರೋತ್ಸಾಹಿಸಲಾಗುವುದು.

**ನಿರ್ಣಯ: ಭಾರತದಲ್ಲಿ 15000 ಕೋಟಿ ರೂ.ಗಳನ್ನು ಹೂಡಿಕೆ ಮಾಡುವ ಮೆ. ಆಂಕರೇಜ್ ಇನ್ ಫ್ರಾಸ್ಟ್ರಕ್ಚರ್ ಇನ್ವೆಸ್ಟ್ ಮೆಂಟ್ ಹೋಲ್ಡಿಂಗ್ ಲಿಮಿಟೆಡ್ ನ ವಿದೇಶಿ ನೇರ ಹೂಡಿಕೆ (ಎಫ್.ಡಿಐ) ಪ್ರಸ್ತಾಪಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.**



**ಪರಿಣಾಮ:** ಈ ಹೂಡಿಕೆಯು ಮೂಲಸೌಕರ್ಯ ಮತ್ತು ಉತ್ಪಾದನಾ ವಲಯ ಮತ್ತು ವಿಮಾನ ನಿಲ್ದಾಣ ವಲಯಕ್ಕೆ ದೊಡ್ಡ ಉತ್ತೇಜನ ನೀಡುತ್ತದೆ. ಇದು ಖಾಸಗಿ ಪಾಲುದಾರಿಕೆಯ ಮೂಲಕ ವಿಶ್ವದರ್ಜೆಯ ವಿಮಾನ ನಿಲ್ದಾಣಗಳು ಮತ್ತು ಸಾರಿಗೆ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಭಾರತ ಸರ್ಕಾರದ ಯೋಜನೆಯನ್ನು ಗಣನೀಯವಾಗಿ ಬಲಪಡಿಸುತ್ತದೆ.

- ಇತ್ತೀಚೆಗೆ ಘೋಷಿಸಲಾದ ರಾಷ್ಟ್ರೀಯ ನಗದೀಕರಣ ಪೈಪ್ ಲೈನ್ (ಎನ್.ಎಂ.ಪಿ.) ಗಮನಾರ್ಹ ಉತ್ತೇಜನವನ್ನು ಪಡೆಯಲಿದೆ, ಇದರಲ್ಲಿ ರಸ್ತೆಗಳು, ರೈಲ್ವೆ, ವಿಮಾನ ನಿಲ್ದಾಣಗಳು, ಕ್ರೀಡಾಂಗಣಗಳು, ವಿದ್ಯುತ್ ಪ್ರಸರಣ ಮಾರ್ಗಗಳು ಮತ್ತು ಅನಿಲ ಪೈಪ್ ಲೈನ್ ಗಳಂತಹ ಸ್ವತ್ತುಗಳ ನಿರ್ವಹಣೆ ಸೇರಿದೆ. ಇದು ನೇರ ಮತ್ತು ಪರೋಕ್ಷ ಉದ್ಯೋಗವನ್ನು ಸಹ ಸೃಷ್ಟಿಸುತ್ತದೆ. ■

# ಶ್ರೀ ಸೋಮನಾಥ ದೇವಾಲಯ
## ಭಯೋತ್ಪಾದನೆಯ ಮೇಲೆ ನಂಬಿಕೆಯ ಪ್ರಾಬಲ್ಯದ ಪ್ರತೀಕ



ಶತಮಾನಗಳಿಂದ ಮಾನವೀಯ ಮೌಲ್ಯಗಳಿಗೆ ಸಾಕ್ಷಿಯಾಗಿರುವ ಸೋಮನಾಥ ದೇವಾಲಯವು, ಸತ್ಯವನ್ನು ಸುಳ್ಳಿನಿಂದ ಸೋಲಿಸಲು ಸಾಧ್ಯವಿಲ್ಲ ಮತ್ತು ನಂಬಿಕೆಯನ್ನು ಭಯೋತ್ಪಾದನೆಯಿಂದ ಪುಡಿಮಾಡಲು ಸಾಧ್ಯವಿಲ್ಲ ಎಂಬುದನ್ನು ಇಡೀ ಜಗತ್ತಿಗೆ ಸಾರುತ್ತಿದೆ. ಸೋಮನಾಥ ದೇವಾಲಯವನ್ನು ಕೆಡವಲು ಪದೇ ಪದೇ ಪ್ರಯತ್ನ ನಡೆದಿದ್ದರೂ, ಅದು ಅಚಲವಾಗಿ ಎತ್ತರವಾಗಿ ನಿಂತಿದೆ. ಆಗಸ್ಟ್ 20ರಂದು ಉದ್ಘಾಟನೆಗೊಂಡ ಹೊಸ ಯೋಜನೆಗಳು ದೇವಾಲಯಕ್ಕೆ ಭವ್ಯತೆ ಮತ್ತು ಪಾವಿತ್ರ್ಯವನ್ನು ತರುವುದಲ್ಲದೆ, ಹೆಚ್ಚಿನ ಭಕ್ತರನ್ನು ಆಕರ್ಷಿಸಲು ಮತ್ತು ಈ ಪ್ರದೇಶದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸಹಕಾರಿಯಾಗಿದೆ.

**समुद्रतीरे शशिना प्रतिष्ठितं
प्रभासतीर्थे परमं पवित्रम्
ज्योतिर्मयं गुर्जरभूमिरत्नं
तं सोमनाथं सततं नमामि।**

ಅರ್ಥ- ವಿಶ್ವದ ಮೊದಲ ಜ್ಯೋತಿರ್ಲಿಂಗ ಸೋಮನಾಥ, ಇದನ್ನು ಸೋಮ ಅಥವಾ ಚಂದ್ರನು ಪ್ರಭಾಸ ತೀರದಲ್ಲಿ ಪ್ರತಿಷ್ಠಾಪಿಸಿದ್ದಾನೆ.

ಶ್ರೀ ಸೋಮನಾಥ ದೇವಾಲಯ ನಿರ್ಮಾಣಕ್ಕೆ ಕಾರಣರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರಯತ್ನಗಳಿಗೆ ಭಾರತ ಋಣಿಯಾಗಿರುತ್ತದೆ. ಸೋಮನಾಥ ದೇವಾಲಯ ಟ್ರಸ್ಟ್ ನ ಅಧ್ಯಕ್ಷರಾಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಳೆದ 10 ವರ್ಷಗಳಲ್ಲಿ ದೇವಾಲಯದ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದ್ದಾರೆ. ಅವರ ನೇತೃತ್ವದಲ್ಲಿ, ಗರ್ಭಗುಡಿ ಮತ್ತು ಶಿಖರದ ಕಲಶಗಳಿಗೆ ಚಿನ್ನದ ಲೇಪನ ಮಾಡಲಾಗಿದ್ದು, ಧ್ವನಿ ಬೆಳಕಿನ ಪ್ರದರ್ಶನ ಸೋಮನಾಥನ ಇತಿಹಾಸವನ್ನು ಅತ್ಯಂತ ಅದ್ಭುತವಾದ ರೀತಿಯಲ್ಲಿ ಮರುಸೃಷ್ಟಿಸುತ್ತದೆ. ಸೋಮನಾಥ ದೇವಾಲಯದಲ್ಲಿ ಮತ್ತು ಸುತ್ತಮುತ್ತ ಹಲವಾರು ದೇವಾಲಯಗಳನ್ನು ನವೀಕರಿಸಿ, ಭಕ್ತರಿಗೆ ವಿಶ್ವದರ್ಜೆಯ ಸೌಲಭ್ಯಗಳನ್ನು ಒದಗಿಸುವುದು ಯಾತ್ರಿಕರ ಸಂಖ್ಯೆಯಲ್ಲಿ ಗಣನೀಯ ಏರಿಕೆಗೆ ಕಾರಣವಾಗಿದೆ. "ಇಂದು ನವ ಭಾರತದ ಹೆಮ್ಮೆಯ ಸ್ತಂಭವನ್ನು ರಾಮ ಮಂದಿರದ ರೂಪದಲ್ಲಿ ನಿರ್ಮಿಸಲಾಗುತ್ತಿದೆ. ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಮಂತ್ರಿಯವರು "ಇತಿಹಾಸದಿಂದ ಕಲಿತು ಹೊಸ

# ಶ್ರೀ ಸೋಮನಾಥ ದೇವಾಲಯ ಸಂಕೀರ್ಣದ ಅಭಿವೃದ್ಧಿ




## ಸಮುದ್ರ ದರ್ಶನ ಪಥ

ಸೋಮನಾಥದ ಪ್ರಾಕೃತಿಕ ಸೌಂದರ್ಯವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಪ್ರಸಾದ್ ಯೋಜನೆಯಡಿ ಸಮುದ್ರ ದರ್ಶನ ಪಥವನ್ನು ಅಭಿವೃದ್ಧಿಪಡಿಸಿದೆ. ಶ್ರೀ ಸೋಮನಾಥ ದೇವಸ್ಥಾನದಿಂದ ತ್ರಿವೇಣಿ ಸಂಗಮದವರೆಗೆ ಸಮುದ್ರ ತೀರದಲ್ಲಿ ನಿರ್ಮಿಸಲಾದ 1.5 ಕಿ.ಮೀ ಉದ್ದದ ಈ ಸಮುದ್ರ ದರ್ಶನ ಪಥವು ಸಾಗರದ ಅಬ್ಬರದ ಅಲೆಗಳನ್ನು ತಡೆಯುತ್ತದೆ. ಭಕ್ತರ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಲು ಪಾದಚಾರಿ ಮಾರ್ಗದಲ್ಲಿ ಸಾರ್ವಜನಿಕ ಎಚ್ಚರಿಕೆ ವ್ಯವಸ್ಥೆ ಮತ್ತು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದು ಸ್ಥಳೀಯ ಜನರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ.

## ಸೋಮನಾಥ ಪ್ರದರ್ಶನ ಗ್ಯಾಲರಿ

ಈ ಗ್ಯಾಲರಿಯನ್ನು ದೇವಾಲಯದ ವಾಸ್ತುಶಿಲ್ಪದ ವಿಷಯದ ಆಧಾರದ ಮೇಲೆ ನಿರ್ಮಿಸಲಾಗಿದೆ. ಹಳೆಯ ಸೋಮನಾಥ ದೇವಾಲಯದ ಕಳಚಿದ ಭಾಗಗಳು ಮತ್ತು ಅದರ ಶಿಲ್ಪಗಳನ್ನು ಇಲ್ಲಿ ಸಂರಕ್ಷಿಸಲಾಗಿದೆ. ದೇವಾಲಯದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳು ಇಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳ ಜೊತೆಗೆ ಬ್ರೈಲ್ ಲಿಪಿಯಲ್ಲಿ ಲಭ್ಯವಿದೆ, ಇದರೊಂದಿಗೆ ಪ್ರತಿಯೊಬ್ಬ ವ್ಯಕ್ತಿಗೂ ನಮ್ಮ ಭವ್ಯ ಇತಿಹಾಸದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.





## ಶ್ರೀ ಪಾರ್ವತಿ ದೇವಾಲಯ

ಸೋಮನಾಥ ದೇವಾಲಯ ಸಂಕೀರ್ಣದಲ್ಲಿ ಶ್ರೀ ಪಾರ್ವತಿ ದೇವಾಲಯದ ಶಂಕು ಸ್ಥಾಪನೆ ನೆರವೇರಿಸಲಾಗಿದೆ. ಅದನ್ನು ಮೂಲ ರೂಪದಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಇದೆ. ಶ್ರೀ ಪಾರ್ವತಿ ದೇವಾಲಯವನ್ನು ಒಟ್ಟು 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಯೋಜಿಸಲಾಗಿದೆ. ಸೋಂಪುರ ಸಲಾಟ್ಸ್ ಶೈಲಿಯಲ್ಲಿ ದೇವಾಲಯ ನಿರ್ಮಾಣ, ಗರ್ಭಗೃಹ ಮತ್ತು ನವರಂಗದ ಅಭಿವೃದ್ಧಿಯೂ ಇದರಲ್ಲಿ ಸೇರಿದೆ.



## ಪ್ರಾಚೀನ (ಜುನಾ) ಸೋಮನಾಥ ಮಂದಿರ

ಈ ಸರಣಿಯಲ್ಲಿ ಮುಂದಿನದು ಹಳೆಯ (ಜುನಾ) ಸೋಮನಾಥನ ಪುನರ್ ನಿರ್ಮಿತ ದೇವಾಲಯದ ಆವರಣವಾಗಿದೆ, ಇದನ್ನು 1783 ರಲ್ಲಿ ಇಂದೋರ್ ನ ರಾಣಿ ಅಹಿಲ್ಯಾಬಾಯಿ ಹೋಳ್ಕರ್ ನಿರ್ಮಿಸಿದ್ದರು. ಈ ದೇಗುಲದ ಮೇಲೆ ದಾಳಿ ನಡೆದಾಗ ದೇವಾಲಯದಲ್ಲಿ ಸೋಮನಾಥ ಮಹಾದೇವನನ್ನು ಪೂಜಿಸಲಾಗುತ್ತಿತ್ತು. ಈಗ ಯಾತ್ರಿಕರ ಸುರಕ್ಷತೆಗಾಗಿ ಮತ್ತು ಹೆಚ್ಚಿದ ಸಾಮರ್ಥ್ಯದೊಂದಿಗೆ ಇಡೀ ಹಳೆಯ ದೇವಾಲಯ ಸಂಕೀರ್ಣವನ್ನು ಸಮಗ್ರವಾಗಿ ಮರು ಅಭಿವೃದ್ಧಿಪಡಿಸಲಾಗಿದೆ. ಮೊದಲ ಮಹಡಿಯಲ್ಲಿ ಎರಡು ವಿಶಾಲವಾದ ಸಭಾಂಗಣಗಳು, ನೆಲಮಹಡಿಯಲ್ಲಿ 16 ಮಳಿಗೆಗಳು ಮತ್ತು ಆಧ್ಯಾತ್ಮಿಕ ಧ್ಯಾನಕ್ಕಾಗಿ ಬೃಹತ್ ಸಂಕೀರ್ಣವನ್ನು ಸಹ ಮಾಡಲಾಗಿದೆ. ಪ್ರಾಚೀನ (ಜುನಾ) ಸೋಮನಾಥನ ಪುನರ್ ನಿರ್ಮಿತ ದೇವಾಲಯದ ಆವರಣವನ್ನು ಶ್ರೀ ಸೋಮನಾಥ್ ಟ್ರಸ್ಟ್ ಒಟ್ಟು 3.5 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಿದೆ.

ಭವಿಷ್ಯ ರೂಪಿಸಿ ವರ್ತಮಾನವನ್ನು ಉತ್ತಮಪಡಿಸುವ ಚಿಂತನೆ ನಮ್ಮದಾಗಬೇಕು. ಆದ್ದರಿಂದ ನಾನು 'ಭಾರತ್ ಜೋಡೋ ಆಂದೋಲನ್' ಬಗ್ಗೆ ಮಾತನಾಡುವಾಗ, ಅದು ಭೌಗೋಳಿಕ ಅಥವಾ ಸೈದ್ಧಾಂತಿಕ ಸಂಬಂಧಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಭವಿಷ್ಯದ ಭಾರತವನ್ನು ನಿರ್ಮಿಸಲು ನಮ್ಮ ಭೂತ ಕಾಲದೊಂದಿಗೆ ನಮ್ಮನ್ನು ಬೆಸೆಯುವ ಸಂಕಲ್ಪವೂ ಆಗಿರುತ್ತದೆ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಹೊಸ ಯೋಜನೆಗಳು ಭಕ್ತರಿಗೆ ಸ್ಫೂರ್ತಿ ನೀಡುತ್ತವೆ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುತ್ತದೆ ಎಂದು ಹೇಳಿದರು. ದೇಶಾದ್ಯಂತ ಭಾರತೀಯ ಸಂಸ್ಕೃತಿಯ ಹಲವಾರು ಧಾರ್ಮಿಕ ಕೇಂದ್ರಗಳನ್ನು ಅಭಿವೃದ್ಧಿಪಡಿಸುತ್ತಿರುವ ಪ್ರಧಾನಮಂತ್ರಿ ಮೋದಿ ಅವರನ್ನು ಶ್ಲಾಘಿಸಿದರು.

**ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಮೋದಿ ಅವರು ಮಾಡಿದ ಭಾಷಣದ ಪ್ರಮುಖ ಅಂಶಗಳು:**

- ಇಂದು ಪ್ರವಾಸೋದ್ಯಮವು ಜನರನ್ನು ಒಟ್ಟುಗೂಡಿಸುವುದಲ್ಲದೆ ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿದೆ. ನಮ್ಮ ನಂಬಿಕೆ ವಾಸ್ತವವಾಗಿ 'ಏಕ- ಭಾರತ, ಶ್ರೇಷ್ಠ ಭಾರತ' ಎಂಬ ಮನೋಭಾವದ ಅಭಿವ್ಯಕ್ತಿಯಾಗಿದೆ. ಸೋಮನಾಥ ದೇವಾಲಯವು ನಮ್ಮ ಸಂಸ್ಕೃತಿ ಮತ್ತು ಮಾನವೀಯ ಸಿದ್ಧಾಂತದ ಪ್ರತೀಕವಾಗಿದೆ.
- ಭಾರತ್ ಜೋಡೋ ಆಂದೋಲನ್ ಭವಿಷ್ಯದ ಭಾರತವನ್ನು ನಿರ್ಮಿಸಲು ನಮ್ಮ ಭೂತಕಾಲದೊಂದಿಗೆ ನಮ್ಮನ್ನು ಬೆಸೆಯುತ್ತದೆ. ಚಾರ್ ಧಾಮಗಳು (ನಾಲ್ಕು ಧಾಮಗಳು), ಶಕ್ತಿ ಪೀಠಗಳು (ಬ್ರಹ್ಮಾಂಡ ಶಕ್ತಿಯ ಪವಿತ್ರ ಸ್ಥಳಗಳು)



ಮತ್ತು ವಿವಿಧ ದೇವಾಲಯಗಳು 'ಏಕ ಭಾರತ, ಶ್ರೇಷ್ಠ ಭಾರತ' ಎಂಬ ಸ್ಫೂರ್ತಿಯ ಅಭಿವ್ಯಕ್ತಿಯಾಗಿವೆ. ಹನ್ನೆರಡು ಜ್ಯೋತಿರ್ಲಿಂಗಗಳು ಇಡೀ ಭಾರತವನ್ನು ಸಂಪರ್ಕಿಸುತ್ತವೆ.

- ಸರ್ದಾರ್ ಪಟೇಲ್ ಅವರು ಭಾರತದ ಪ್ರಾಚೀನ ವೈಭವವನ್ನು ಪುನಶ್ಚೇತನಗೊಳಿಸುವ ಮಾರ್ಗವನ್ನು ನಮಗೆ ತೋರಿಸಿದ್ದಾರೆ. ಲೋಕಮಾತಾ ಅಹಿಲ್ಯಾಬಾಯಿ ಹೋಳ್ಕರ್ ಅನೇಕ ದೇವಾಲಯಗಳನ್ನು ನವೀಕರಿಸಿದರು. ಇಂದು ಉದ್ಘಾಟನೆಗೊಂಡ ಯೋಜನೆಗಳು ನಮ್ಮ ಧಾರ್ಮಿಕ ಪ್ರಯತ್ನಗಳು ಮತ್ತು ಪ್ರವಾಸೋದ್ಯಮದ ನಡುವಿನ ಸಂಪರ್ಕವನ್ನು ಬಲಪಡಿಸುತ್ತವೆ. ಸೋಮನಾಥ ವಸ್ತು ಪ್ರದರ್ಶನ ಕೇಂದ್ರವು ನಮ್ಮ ಯುವಕರನ್ನು ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆಯುತ್ತದೆ.
- ಪ್ರಸಾದ್ ಯೋಜನೆಯಡಿ 15 ಯೋಜನೆಗಳು ಪೂರ್ಣಗೊಂಡಿದ್ದು, ಇದು ಅಂತಾರಾಷ್ಟ್ರೀಯ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ. ಇ-ವೀಸಾ, ವೀಸಾ ಆನ್ ಅರೈವಲ್ ಮತ್ತು ಆತಿಥ್ಯದ ಮೇಲಿನ ಜಿಎಸ್ಟಿ ಕಡಿತದಂತಹ ಉಪಕ್ರಮಗಳು ಪ್ರವಾಸೋದ್ಯಮ ವಲಯಕ್ಕೆ ಮತ್ತಷ್ಟು ಉತ್ತೇಜನ ನೀಡುತ್ತಿದೆ.
- ದೇಶಾದ್ಯಂತ ಹತ್ತೊಂಬತ್ತು ಅಪ್ರತಿಮ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಎಲ್ಲಾ ಯೋಜನೆಗಳು ಭವಿಷ್ಯದಲ್ಲಿ ನಮ್ಮ ಪ್ರವಾಸೋದ್ಯಮಕ್ಕೆ ಹೊಸ ಉತ್ತೇಜನ ನೀಡಲಿವೆ. ■

## ಪ್ರವಾಸೋದ್ಯಮದ ಹೊಸ ಆಯಾಮಗಳು



**ಭಾರತ ಪ್ರವಾಸೋದ್ಯಮ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ 65ನೇ ಸ್ಥಾನದಿಂದ 34ನೇ ಸ್ಥಾನಕ್ಕೇರಿದೆ**

2014ರಲ್ಲಿ ಘೋಷಿಸಲಾದ ಪ್ರಸಾದ್ ಯೋಜನೆಯಡಿ,

**40**

ಪ್ರಮುಖ ಯಾತ್ರಾ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಅದರಲ್ಲಿ ಈಗಾಗಲೇ 15 ಪೂರ್ಣಗೊಂಡಿವೆ.

ಗುಜರಾತಿನಲ್ಲಿ

**₹100 ಕೋಟಿ**

ಗೂ ಹೆಚ್ಚು ಮೌಲ್ಯದ ಮೂರು ಯೋಜನೆಗಳು ಪ್ರಗತಿಯಲ್ಲಿವೆ. ಈ ಯಾತ್ರಾ ಸ್ಥಳಗಳನ್ನು ಸಂಪರ್ಕಿಸಲು ಗಮನಹರಿಸಲಾಗಿದೆ.

- ಪ್ರವಾಸೋದ್ಯಮದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಾಮರ್ಥ್ಯ ಹೆಚ್ಚಾಗಿದೆ. ದೇಶವು ಆಧುನಿಕ ಮೂಲಸೌಕರ್ಯವನ್ನು ನಿರ್ಮಿಸುವ ಮೂಲಕ ಪ್ರಾಚೀನ ವೈಭವವನ್ನು ಪುನಶ್ಚೇತನ ಗೊಳಿಸುತ್ತಿರುವುದರಿಂದ ಆಧ್ಯಾತ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆತಿದೆ.
- ಪ್ರವಾಸೋದ್ಯಮ ಸಚಿವಾಲಯವು ಸ್ವದೇಶ ದರ್ಶನ ಯೋಜನೆಯಡಿ 15 ವಿಷಯಗಳಲ್ಲಿ ಪ್ರವಾಸೋದ್ಯಮ ಸರ್ಕ್ಯೂಟ್ ಗಳನ್ನು ಅಭಿವೃದ್ಧಿಪಡಿಸುತ್ತಿದೆ, ಇದು ನಿರ್ಲಕ್ಷಿತ ಪ್ರದೇಶಗಳಲ್ಲಿ ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸುತ್ತದೆ.
- ರಾಮಾಯಣ ಸರ್ಕ್ಯೂಟ್ ಭಗವಾನ್ ರಾಮನಿಗೆ ಸಂಬಂಧಿಸಿದ ಹೊಸ ಸ್ಥಳಗಳ ಬಗ್ಗೆ ಭಕ್ತರಿಗೆ ಅರಿವು ಮೂಡಿಸುತ್ತಿದೆ ಮತ್ತು ಭಗವಾನ್ ರಾಮ ಇಡೀ ಭಾರತದ ರಾಮ ಎಂದು ಭಾವಿಸುವಂತೆ ಮಾಡುತ್ತಿದೆ.
- ಬುದ್ಧ ಸರ್ಕ್ಯೂಟ್ ವಿಶ್ವದಾದ್ಯಂತದ ಭಕ್ತರಿಗೆ ಸೌಲಭ್ಯಗಳನ್ನು ಒದಗಿಸುತ್ತಿದೆ.
- ಕೇದಾರನಾಥದಂತಹ ಗುಡ್ಡಗಾಡು ಪ್ರದೇಶಗಳಲ್ಲಿ ಅಭಿವೃದ್ಧಿ, ಚಾರ್ ಧಾಮ್ ಗಾಗಿ ಸುರಂಗಗಳು ಮತ್ತು ಹೆದ್ದಾರಿಗಳು, ವೈಷ್ಣೋ ದೇವಿಯಲ್ಲಿನ ಅಭಿವೃದ್ಧಿ ಕಾರ್ಯಗಳು ಮತ್ತು ಈಶಾನ್ಯದಲ್ಲಿ ಹೈಟೆಕ್ ಮೂಲಸೌಕರ್ಯಗಳು ದೂರವನ್ನು ಕಡಿಮೆ ಮಾಡುತ್ತಿವೆ.
- ದೇಶವು ಪ್ರವಾಸೋದ್ಯಮದ ಮೂಲಕ ನಾಗರಿಕರನ್ನು ಸಂಪರ್ಕಿಸುವುದಷ್ಟೇ ಅಲ್ಲದೆ ಮುಂದೆ ಸಾಗುತ್ತದೆ. ಪ್ರಯಾಣ ಮತ್ತು ಪ್ರವಾಸೋದ್ಯಮ ಸ್ಪರ್ಧಾತ್ಮಕ ಸೂಚ್ಯಂಕದಲ್ಲಿ ದೇಶವು 2013 ರಲ್ಲಿದ್ದ 65ನೇ ಸ್ಥಾನದಿಂದ 2019ರಲ್ಲಿ 34ನೇ ಸ್ಥಾನಕ್ಕೆ ಏರಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಭಾಷಣವನ್ನು ಕೇಳಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.

## ಮೂಲಸೌಕರ್ಯಕ್ಕೆ ಉತ್ತೇಜನ

# ಮುಂದಿನ ನಾಲ್ಕು ವರ್ಷಗಳಲ್ಲಿ ಸ್ವತ್ತುಗಳನ್ನು ನಗದೀಕರಿಸುವ ಮೂಲಕ 6 ಲಕ್ಷ ಕೋಟಿ ರೂ. ರೂಢಿಸಲು ಸರ್ಕಾರದ ಯೋಜನೆ



**ಉದ್ಯೋಗ ಸೃಷ್ಟಿಸುವ ಆರ್ಥಿಕತೆಯ ಬೆಳವಣಿಗೆಗೆ ಉತ್ತಮ ಮತ್ತು ಗುಣಮಟ್ಟದ ಮೂಲಸೌಕರ್ಯ ಅತ್ಯಗತ್ಯ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ 110 ಲಕ್ಷ ಕೋಟಿ ರೂ. ರಾಷ್ಟ್ರೀಯ ಮೂಲಸೌಕರ್ಯ ಪೈಪ್ ಲೈನ್ ಯೋಜನೆಯನ್ನು ಘೋಷಿಸಿದರು. ಸರ್ಕಾರ ಇತ್ತೀಚೆಗೆ ಘೋಷಿಸಿದ ಸ್ವತ್ತಿನ ನಗದೀಕರಣ ಪೈಪ್ ಲೈನ್ ಯೋಜನೆಯು ಮುಂದಿನ ನಾಲ್ಕು ವರ್ಷಗಳಲ್ಲಿ ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಲು ಖಾಸಗಿಯವರನ್ನು ಆಹ್ವಾನಿಸುವ ಮೂಲಕ ಮೂಲಸೌಕರ್ಯ ವಲಯದಲ್ಲಿ ಮಾದರಿ ಬದಲಾವಣೆಯನ್ನು ತರುವ ಭರವಸೆ ನೀಡಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಆಸ್ತಿಗಳನ್ನು ನಗದೀಕರಿಸುವ ಮೂಲಕ 6 ಲಕ್ಷ ಕೋಟಿ ಸಂಗ್ರಹಿಸಲು ಸರ್ಕಾರ ಯೋಜಿಸಿದೆ.**

"ದೇಶದ ವ್ಯಾಪಾರೋದ್ಯಮಗಳಿಗೆ ಸಂಪೂರ್ಣ ಬೆಂಬಲ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇಂದಿನ ಯುಗಮಾನದಲ್ಲಿ ಸರ್ಕಾರವೇ ಉದ್ಯಮಗಳನ್ನು ನಡೆಸಿಕೊಂಡು ಮಾಲೀಕರಾಗಿ ಉಳಿಯಲು ಸಾಧ್ಯವಿಲ್ಲ. ಸಾರ್ವಜನಿಕ ಕಲ್ಯಾಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ಮೇಲೆ ಸರ್ಕಾರದ ಗಮನ ಕೇಂದ್ರೀಕರಿಸಬೇಕು."

ಸಾಮಾನ್ಯ ಬಜೆಟ್ ಮಂಡನೆಯ ನಂತರ ಈ ವರ್ಷದ ಮಾರ್ಚ್ ನಲ್ಲಿ ಹೂಡಿಕೆದಾರರೊಂದಿಗೆ ನಡೆದ ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಈ ಮಾತುಗಳು ಖಾಸಗಿ ವಲಯದ ಮೇಲೆ ಸರ್ಕಾರದ ನಂಬಿಕೆಯನ್ನು ಪ್ರದರ್ಶಿಸುತ್ತವೆ, ಇದರಿಂದ ಕಾರ್ಯಕ್ರಮಗಳ ಪ್ರಯೋಜನಗಳು ಸಮಾಜದ ಕೊನೆಯ ಮೈಲಿಯನ್ನು ತಲುಪುತ್ತವೆ. ಇದೇ ಮೊದಲ ಬಾರಿಗೆ ಪ್ರಧಾನಮಂತ್ರಿಗಳೇ ಸಾಮಾನ್ಯ ಬಜೆಟ್ ನ ದೃಷ್ಟಿಕೋನವನ್ನು ಸಾಕಾರಗೊಳಿಸಲು ಆಯಾ ಕ್ಷೇತ್ರಗಳ ತಜ್ಞರೊಂದಿಗೆ ನೇರವಾಗಿ ಸಂವಾದ ನಡೆಸಿದರು. ರಾಷ್ಟ್ರೀಯ ನಗದೀಕರಣ ಪೈಪ್ ಲೈನ್ (ಎನ್.ಎಂ.ಪಿ) ಯೋಜನೆಯ ಉದ್ದೇಶವು ಖಾಸಗಿಯವರ ಪಾಲ್ಗೊಳ್ಳುವಿಕೆಯೊಂದಿಗೆ ದೇಶಾದ್ಯಂತ ಮೂಲಸೌಕರ್ಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುತ್ತದೆ. ಮೂಲಸೌಕರ್ಯಕ್ಕೆ ಸಂಬಂಧಿಸಿದ ಎಲ್ಲಾ ಸಚಿವಾಲಯಗಳೊಂದಿಗೆ ವ್ಯಾಪಕ ಸಮಾಲೋಚನೆಯ ನಂತರ ನೀತಿ ಆಯೋಗವು ನೀಲನಕ್ಷೆಯನ್ನು ಸಿದ್ಧಪಡಿಸಿದೆ. ಈ ಯೋಜನೆಯಡಿ, ಮುಂದಿನ ನಾಲ್ಕು ವರ್ಷಗಳಲ್ಲಿ ಸ್ವತ್ತುಗಳ ನಗದೀಕರಣದ ಮೂಲಕ 6 ಲಕ್ಷ ಕೋಟಿ ರೂ. ಸಂಗ್ರಹಿಸಲು ಕೇಂದ್ರ ಸರ್ಕಾರ ಯೋಜಿಸಿದೆ. ಇವುಗಳಲ್ಲಿ ರಸ್ತೆಗಳಿಂದ ರೈಲ್ವೆಯವರೆಗೆ ಪ್ರಾರಂಭವಾಗುವ ವಿವಿಧ ವಲಯಗಳ ಸ್ವತ್ತುಗಳೂ ಸೇರಿವೆ.

ಈ ವರ್ಷದ ಆಗಸ್ಟ್ 23ರಂದು ಈ ಯೋಜನೆಯನ್ನು ಅನಾವರಣಮಾಡುವಾಗ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೀಗೆ ಹೇಳಿದರು: "ಇದು ಪ್ರತಿಯೊಬ್ಬ ನಾಗರಿಕನಿಗೂ ಅತ್ಯುತ್ತಮ ಮತ್ತು ಕೈಗೆಟುಕುವ ಮೂಲಸೌಕರ್ಯ ಸೌಲಭ್ಯಗಳನ್ನು ಪಡೆಯುವುದನ್ನು ಖಚಿತಪಡಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಷ್ಟಿಕೋನಕ್ಕೆ ಅನುಗುಣವಾಗಿದೆ. ನಗದೀಕರಣದ ಮೂಲಕ ಸೃಷ್ಟಿಯ ತತ್ವ ಆಧರಿಸಿದ ಸ್ವತ್ತಿನ ನಗದೀಕರಣವು ಹೊಸ ಮೂಲಸೌಕರ್ಯ ಸೃಷ್ಟಿಗಾಗಿ ಖಾಸಗಿ ವಲಯದ ಹೂಡಿಕೆಯನ್ನು ಶೋಧಿಸುವ ಗುರಿಯನ್ನು ಹೊಂದಿದೆ. ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಇದು ಅಗತ್ಯವಾಗಿದೆ, ಆ ಮೂಲಕ ಹೆಚ್ಚಿನ ಆರ್ಥಿಕ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ ಮತ್ತು ಒಟ್ಟಾರೆ ಸಾರ್ವಜನಿಕ ಕಲ್ಯಾಣಕ್ಕಾಗಿ ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳನ್ನು ತಡೆರಹಿತವಾಗಿ ಏಕೀಕರಿಸುತ್ತದೆ."

# ಈ ವಲಯಗಳಿಂದ ಹಣ ಬರುತ್ತದೆ

- ರಸ್ತೆ ವಲಯದಿಂದ ಗರಿಷ್ಠ ನಗದೀಕರಣ 1.6 ಲಕ್ಷ ಕೋಟಿ ರೂ. ನಿರೀಕ್ಷಿಸಲಾಗಿದೆ.
- ಹೆದ್ದಾರಿಗಳ ನಿರ್ಮಾಣ- ನಿರ್ವಹಣೆ ಮತ್ತು ಹಸ್ತಾಂತರ (ಬಿಒಟಿ) ಮಾದರಿಯ ಮೂಲಕ 1.5 ಲಕ್ಷ ಕೋಟಿ ರೂ. ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.
- ರೈಲ್ವೆಯು ಸುಮಾರು 400 ನಿಲ್ದಾಣಗಳು, 150 ರೈಲುಗಳು, ಸಮರ್ಪಿತ ಸರಕು ಕಾರಿಡಾರ್ ಗಳು ಮತ್ತು ಮಾರ್ಗಗಳೊಂದಿಗೆ 1.5 ಲಕ್ಷ ಕೋಟಿ ರೂ. ಗಳಿಸುವ ನಿರೀಕ್ಷೆಯಿದೆ.
- ವಿದ್ಯುತ್ ಗ್ರಿಡ್ ನ ಪ್ರಸರಣ ಮಾರ್ಗಗಳನ್ನು ನಗದೀಕರಿಸುವ ಮೂಲಕ ವಿದ್ಯುತ್ ವಲಯದಲ್ಲಿ ₹45,000 ಕೋಟಿ ರೂ.ಗಳನ್ನು ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.
- ಎನ್‌ಟಿಪಿಸಿ, ಎನ್‌ಎಚ್‌ಪಿಸಿ ಮತ್ತು ಕೋಲ್ ಇಂಡಿಯಾದ ಜಲ ವಿದ್ಯುತ್ ಯೋಜನೆಗಳನ್ನು ನಗದೀಕರಿಸುವ ಮೂಲಕ ಸರ್ಕಾರ 39,832 ಕೋಟಿ ರೂ. ಗುರಿಯನ್ನು ನಿಗದಿಪಡಿಸಿದೆ.
- ಅನಿಲ ವಲಯದಲ್ಲಿ, ಗೇಲ್ ನ ಕೊಳವೆ ಮಾರ್ಗಗಳನ್ನು ನಗದೀಕರಿಸುವ ಮೂಲಕ ಸುಮಾರು 24,000 ಕೋಟಿ ರೂ. ಗುರಿಯನ್ನು ನಿಗದಿಪಡಿಸಲಾಗಿದೆ.
- ಐಒಸಿಎಲ್ ಮತ್ತು ಎಚ್.ಪಿಸಿಎಲ್ ನ ಕೊಳವೆ ಮಾರ್ಗಗಳನ್ನು ನಗದೀಕರಿಸುವ ಮೂಲಕ 22,000 ಕೋಟಿ ರೂ. ಗುರಿಯನ್ನು ನಿಗದಿಪಡಿಸಲಾಗಿದೆ.

**ಬಜೆಟ್ ಮಂಡನೆಯ ಸಮಯದಲ್ಲಿ ಹಣಕಾಸು ಸಚಿವರು ಮೊದಲಿಗೆ ಇದರ ಬಗ್ಗೆ ಪ್ರಸ್ತಾಪಿಸಿದರು.**



ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 22-2021ನೇ ಸಾಲಿನ ಬಜೆಟ್ ಮಂಡಿಸಿದಾಗ ರಾಷ್ಟ್ರೀಯ ನಗದೀಕರಣ ಪೈಪ್ ಲೈನ್ ಬಗ್ಗೆ ಪ್ರಸ್ತಾಪಿಸಿದ್ದರು. ಸಾರ್ವಜನಿಕ ವಲಯದ ನಗದೀಕರಣ, ಅಂದರೆ ಸರ್ಕಾರಿ ಸ್ವತ್ತುಗಳ ನಗದೀಕರಣ ಬೃಹತ್ ಮೂಲಸೌಕರ್ಯದ ವೆಚ್ಚವನ್ನು ಪೂರೈಸುವ ಮುಖ್ಯ ಮಾರ್ಗವಾಗಿದೆ ಎಂದು ಅವರು ಹೇಳಿದ್ದರು.

**4 ವರ್ಷಗಳಲ್ಲಿ 6 ಲಕ್ಷ ಕೋಟಿ ರೂ. ಸಂಗ್ರಹಿಸುವ ಯೋಜನೆ**



ಈ ಸ್ವತ್ತುಗಳನ್ನು ನಿರ್ದಿಷ್ಟ ಅವಧಿಗೆ ಖಾಸಗಿ ವಲಯಕ್ಕೆ ನಿಯೋಜಿಸಬಹುದು. ನಿಗದಿತ ಸಮಯದ ನಂತರ ಅವುಗಳನ್ನು ಸರ್ಕಾರಕ್ಕೆ ಹಿಂದಿರುಗಿಸಬೇಕಾಗುತ್ತದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಅಂದರೆ 2022-25ನೇ ಹಣಕಾಸು ವರ್ಷದಲ್ಲಿ ಎನ್. ಎಂ.ಪಿ ಅಡಿಯಲ್ಲಿ ಒಟ್ಟು ಆಸ್ತಿಗಳ ಅಂದಾಜು ಮೌಲ್ಯವು 6 ಲಕ್ಷ ಕೋಟಿ ರೂ. ನಿರೀಕ್ಷಿಸಲಾಗಿದೆ.

**ಈ ಆದಾಯ ಹೊಸ ಮೂಲಸೌಕರ್ಯ ಸೃಷ್ಟಿಗೆ ಬಳಕೆ**

22-2021ರ ತಮ್ಮ ಬಜೆಟ್ ಭಾಷಣದಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆಸ್ತಿಗಳ ನಗದೀಕರಣ ಹೊಸ ಮೂಲಸೌಕರ್ಯಗಳ ರಚನೆಗೆ ಬಹಳ ಮುಖ್ಯವಾದ ಆಯ್ಕೆಯಾಗಿದೆ. ಈ ಸ್ವತ್ತುಗಳ ನಗದೀಕರಣವು ಹಣ ಹೂಡಿಕೆಗೆ ಕಾರಣವಾಗುವುದಷ್ಟೇ ಅಲ್ಲದೆ ಮೂಲಸೌಕರ್ಯ ಯೋಜನೆಗಳ ನಿರ್ವಹಣೆ ಮತ್ತು ವಿಸ್ತರಣೆಯ ಉತ್ತಮ ಕಾರ್ಯತಂತ್ರಕ್ಕೆ ಕಾರಣವಾಗುತ್ತದೆ ಎಂದು ಹೇಳಿದ್ದರು.

**ನಗದೀಕರಣ ಎಂದರೇನು?**

ಆಸ್ತಿ ನಗದೀಕರಣ ಎಂದರೆ ಇನ್ನೂ ಸಂಪೂರ್ಣವಾಗಿ ಬಳಸಿಕೊಳ್ಳದ ಸಾರ್ವಜನಿಕ ವಲಯದ ಸ್ವತ್ತುಗಳಿಂದ ಆದಾಯ ಅಥವಾ ಆದಾಯದ ಹೊಸ ಮೂಲಗಳ ಮಾರ್ಗಗಳನ್ನು ಹುಡುಕುವುದಾಗಿದೆ. ಇವುಗಳನ್ನು ಬ್ರೌನ್ ಫೀಲ್ಡ್ ಸ್ವತ್ತುಗಳು ಎಂದು ಕರೆಯಲಾಗುತ್ತದೆ. ನೀತಿ ಆಯೋಗವು ರೈಲ್ವೆ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ಹಡಗು, ದೂರಸಂಪರ್ಕ, ವಿದ್ಯುತ್, ನಾಗರಿಕ ವಿಮಾನಯಾನ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಯುವಜನ ವ್ಯವಹಾರಗಳು ಮತ್ತು ಕ್ರೀಡೆಗಳನ್ನು ಆಸ್ತಿ ನಗದೀಕರಣಕ್ಕಾಗಿ ಗುರುತಿಸಿದೆ.

**ಸಾರ್ವಜನಿಕ ಸ್ವತ್ತುಗಳನ್ನು ಮಾರಾಟ ಮಾಡುವುದಿಲ್ಲ**

ಸರ್ಕಾರ ಏನನ್ನಾದರೂ ಮಾರಾಟ ಮಾಡುತ್ತಿದೆ ಎಂಬ ಭ್ರಮೆ ಜನರಿಗೆ ಇರಬಾರದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ. ಈ ಎಲ್ಲ ಕಂಪನಿಗಳ ಮಾಲೀಕತ್ವ ಸರ್ಕಾರದ ಕೈಯಲ್ಲೇ ಉಳಿಯಲಿದೆ ಮತ್ತು ಖಾಸಗಿ ಕಂಪನಿಗಳು ಕೆಲವು ವರ್ಷಗಳ ನಂತರ ಈ ಆಸ್ತಿಗಳನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಹಸ್ತಾಂತರಿಸಲಿವೆ. ಒಟ್ಟಾರೆ ಕಾರ್ಯತಂತ್ರವಾಗಿ, ಆಸ್ತಿಯ ನೆಲೆಯ ಬಹುಪಾಲು ಸರ್ಕಾರದೊಂದಿಗೆ ಉಳಿಯುತ್ತದೆ. ದಕ್ಷ ಮತ್ತು ಪರಿಣಾಮಕಾರಿ ಪ್ರಕ್ರಿಯೆಯಲ್ಲಿ ಆಸ್ತಿ ನಗದೀಕರಣವನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ಅಗತ್ಯ ನೀತಿ ಮತ್ತು ನಿಯಂತ್ರಣ ಹಸ್ತಕ್ಷೇಪಗಳ ಮೂಲಕ ಈ ಕಾರ್ಯಕ್ರಮವನ್ನು ಬೆಂಬಲಿಸಲಾಗುವುದು. ಇದರಲ್ಲಿ ಕಾರ್ಯಾಚರಣೆಗಳನ್ನು ಸುವ್ಯವಸ್ಥಿತಗೊಳಿಸುವುದು, ಹೂಡಿಕೆದಾರರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು ಮತ್ತು ವ್ಯಾಪಾರ ದಕ್ಷತೆಯನ್ನು ಸುಗಮಗೊಳಿಸುವುದು ಸೇರಿದೆ.

ಆಸ್ತಿ ನಗದೀಕರಣ ಕಾರ್ಯಕ್ರಮವು ಖಾಸಗಿ ಹೂಡಿಕೆ ಮತ್ತು ಅಭಿವೃದ್ಧಿ ಉಪಕ್ರಮಗಳನ್ನು ತರುವ ಮೂಲಕ ಖಾಸಗಿ ಸಾರ್ವಜನಿಕ ವಲಯವೆರಡಕ್ಕೂ ಮೌಲ್ಯವನ್ನು ಹೆಚ್ಚಿಸುತ್ತದೆ, ಇದು ಮೂಲಸೌಕರ್ಯದ ಗುಣಮಟ್ಟ, ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಸುಧಾರಿಸುತ್ತದೆ. 'ಅತ್ಯುತ್ತಮ ದರ್ಜೆಯ ಮೂಲಸೌಕರ್ಯ' ಸಾಮಾನ್ಯ ನಾಗರಿಕರಿಗೆ ಸಹಾಯ ಮಾಡುವುದಲ್ಲದೆ, 'ಒಳಗೊಳ್ಳುವಿಕೆ ಮತ್ತು ಸಬಲೀಕರಣ'ದ ಸಮಗ್ರ ಹಾಗು ದೀರ್ಘಕಾಲೀನ ಕನಸನ್ನು ನನಸಾಗಿಸುತ್ತದೆ. ಸುಧಾರಿತ ಮೂಲಸೌಕರ್ಯವು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ■

## ವಿಶ್ವದ ಅತಿದೊಡ್ಡ ಲಸಿಕೆ ಅಭಿಯಾನ

# ಕೋವಿಡ್ ವಿರುದ್ಧದ ಹೋರಾಟದಲ್ಲಿ ನಾವು ಗೆದ್ದೇ ಗೆಲ್ಲುತ್ತೇವೆ




**ಲಸಿಕೆಯು ಕೊರೊನಾವನ್ನು ಮಣಿಸಲು ಪ್ರಮುಖವಾಗಿದೆ, ಏಕೆಂದರೆ ಇದು ಕೋವಿಡ್- 19 ವಿರುದ್ಧದ ಸಮರದಲ್ಲಿ ಅತ್ಯಂತ ಪರಿಣಾಮಕಾರಿ ಗುರಾಣಿಯಾಗಿದೆ. ಇದು ಲಸಿಕೆಯ ವೇಗವನ್ನು ಹೆಚ್ಚಿಸಲು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಲು ಕೇಂದ್ರ ಸರ್ಕಾರದ ಬದ್ಧತೆಯನ್ನು ವಿವರಿಸುತ್ತದೆ. ಪರೀಕ್ಷೆ, ಪತ್ತೆ ಮತ್ತು ಚಿಕಿತ್ಸೆಗೆ ವಿಶೇಷ ಒತ್ತು ನೀಡುವ ಮೂಲಕ ಭಾರತವು ವಿಶ್ವದ ಅತಿದೊಡ್ಡ ಲಸಿಕೆ ಅಭಿಯಾನವನ್ನು ಪ್ರಾರಂಭಿಸಿದೆ. ಇದರ ಪರಿಣಾಮವಾಗಿ, ದೇಶವು ಪ್ರತಿಯೊಬ್ಬರ ಸುರಕ್ಷತೆ ಮತ್ತು ಯೋಗ ಕ್ಷೇಮದ ಮಂತ್ರದೊಂದಿಗೆ ಕೋವಿಡ್- 19 ವಿರುದ್ಧದ ಹೋರಾಟದಲ್ಲಿ ಸದೃಢವಾಗಿ ಮುಂದುವರಿಯುತ್ತಿದೆ.**

ಗುಜರಾತ್‌ನ ಅತಿದೊಡ್ಡ ಜಿಲ್ಲೆಯಾದ ಕಚ್ ಹೆಚ್ಚಾಗಿ ಮರುಭೂಮಿ ಮತ್ತು ಜೌಗು ಪ್ರದೇಶವಾಗಿದೆ. ಇಲ್ಲಿ ಕೊರೊನಾ ಲಸಿಕೆಗಳನ್ನು ತಲುಪಿಸುವುದು ಸವಾಲಿನ ಕೆಲಸವಾಗಿತ್ತು. ಆದರೆ ಸ್ಥಳೀಯ ಆಡಳಿತವು ಅದನ್ನು ಸಾಧ್ಯವಾಗಿಸಿದೆ ಮತ್ತು ಇಂದು ಲಸಿಕೆ ಅಭಿಯಾನವು ಪ್ರತಿ ಗ್ರಾಮ ಮತ್ತು ತಹಸಿಲ್ ನಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಕೇಂದ್ರ ಸರ್ಕಾರವು ತನ್ನ ಲಸಿಕೆ ನೀತಿಯಲ್ಲಿ ಬದಲಾವಣೆಗಳನ್ನು ಮಾಡಿದ ನಂತರ ಲಸಿಕೆ ಅಭಿಯಾನಕ್ಕೆ ಉತ್ತೇಜನ ದೊರೆತಿದೆ. 18-44 ವಯೋಮಾನದವರಿಗಾಗಿ ರಾಜ್ಯಗಳಿಗೆ ಉಚಿತ ಲಸಿಕೆಗಳನ್ನು ಒದಗಿಸುವ ಸರ್ಕಾರದ ನಿರ್ಧಾರವನ್ನು ಜೂನ್ 7 ರಂದು ಘೋಷಿಸಿದಾಗಿನಿಂದ, ದೇಶದ ದೂರದ ಪ್ರದೇಶಗಳಲ್ಲಿಯೂ ಜನರಿಗೆ ಲಸಿಕೆ ಹಾಕಲು ಸಾಧ್ಯವಾಗಿದೆ. ಆರೋಗ್ಯ ಕಾರ್ಯಕರ್ತರು ದೋಣಿಯನ್ನು ಆಂಬ್ಯುಲೆನ್ಸ್ ಆಗಿ ಪರಿವರ್ತಿಸುವ ಮೂಲಕ ಬಿಹಾರದ ಮುಜಾಫರ್ ಪುರ ಜಿಲ್ಲೆಯ ಪ್ರವಾಹ ಪೀಡಿತ ಜನರನ್ನು ತಲುಪುತ್ತಿದ್ದಾರೆ.

**ಲಸಿಕೆ - ಕೋವಿಡ್ ವಿರುದ್ಧ ಪ್ರಮುಖ ಸಾಧನ**

ಲಸಿಕೆಯ ಪ್ರಾಮುಖ್ಯದ ಬಗ್ಗೆ ನಾಗರಿಕರಲ್ಲಿ ಮೂಡಿದ ಜಾಗೃತಿ ಮತ್ತು ಆರೋಗ್ಯ ಕಾರ್ಯಕರ್ತರ ಶ್ರಮದ ಫಲವಾಗಿ ಇಂದು ದೇಶದಲ್ಲಿ ಶೇ.100 ಲಸಿಕೆ ಸಾಧನೆ ಮಾಡಿದ ಹಳ್ಳಿಗಳಿವೆ. ಗುಜರಾತಿನ ರಾಜ್ ಕೋಟ್ ಜಿಲ್ಲೆಯಲ್ಲಿ ಅಂತಹ 62 ಗ್ರಾಮಗಳಿವೆ, ಅಲ್ಲಿ ಎಲ್ಲಾ ಅರ್ಹರಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ. ಸದ್ಯಕ್ಕೆ, ದೇಶದ ವಯಸ್ಕ ಜನಸಂಖ್ಯೆಯ 50 ಪ್ರತಿಶತದಷ್ಟು ಜನರು ಈಗಾಗಲೇ ಕೋವಿಡ್ ಲಸಿಕೆಯ ಪ್ರಥಮ ಡೋಸ್ ಅನ್ನು ಪಡೆದುಕೊಂಡಿದ್ದಾರೆ.

ಭಾರತದಲ್ಲಿ, ಮೊದಲ 10 ಕೋಟಿ ಲಸಿಕೆಗಳನ್ನು ನೀಡಲು 85 ದಿನಗಳನ್ನು ತೆಗೆದುಕೊಂಡರೂ, 10 ರಿಂದ 20 ಕೋಟಿ ಲಸಿಕೆಗಳನ್ನು ನೀಡಲು 45 ದಿನಗಳು ಬೇಕಾಯಿತು. ಮತ್ತೊಂದೆಡೆ, 20 ರಿಂದ 30 ಕೋಟಿ ಲಸಿಕೆಗಳನ್ನು ನೀಡಲು 29 ದಿನಗಳು, 30 ರಿಂದ 40 ಕೋಟಿ ಲಸಿಕೆಗಳನ್ನು ನೀಡಲು 24 ದಿನಗಳು ಬೇಕಾಯಿತು. 40 ರಿಂದ 50 ಕೋಟಿ ಲಸಿಕೆಗಳನ್ನು ನೀಡಲು 20 ದಿನಗಳಾದವು. ಆದರೆ ಈಗ 50 ರಿಂದ 60 ಕೋಟಿ ಲಸಿಕೆಗಳನ್ನು ಪೂರ್ಣಗೊಳಿಸಲು ಕೇವಲ 19 ದಿನಗಳು ಸಾಕಾಗಿದೆ. ಇಷ್ಟೇ ಅಲ್ಲ, ಆಗಸ್ಟ್ 16ರಂದು ದೇಶದಲ್ಲಿ 88.13 ಲಕ್ಷ ಜನರಿಗೆ ಲಸಿಕೆ ಹಾಕಿಸಲಾಗಿತ್ತು, ಆಗಸ್ಟ್ 27ರಂದು ಒಂದು ಕೋಟಿಗೂ ಹೆಚ್ಚು ಜನರಿಗೆ ಲಸಿಕೆ ಹಾಕಲಾಯಿತು. ಆಗಸ್ಟ್ 31ರಂದು, 1.33 ಕೋಟಿ ಜನರಿಗೆ ಲಸಿಕೆ ನೀಡಿ ದಾಖಲೆ ಸೃಷ್ಟಿಸಲಾಯಿತು. ಇದು ಇಲ್ಲಿಯವರೆಗೆ ದೇಶ ಮತ್ತು ವಿಶ್ವದಲ್ಲಿ ಒಂದೇ ದಿನದಲ್ಲಿ ನೀಡಲಾದ ಅತಿ ಹೆಚ್ಚಿನ ಲಸಿಕೆಯಾಗಿದೆ. ಅದೇ ವೇಳೆ, ಹಿಮಾಚಲ ಪ್ರದೇಶದಲ್ಲಿ, ಕೊರೊನಾ ಲಸಿಕೆಯ

ಮೊದಲ ಡೋಸ್ ಅನ್ನು 18 ವರ್ಷಕ್ಕಿಂತ ಮೇಲ್ಪಟ್ಟ ಶೇಕಡಾ 100 ರಷ್ಟು ಜನರಿಗೆ ನೀಡಲಾಗಿದೆ. ದೇಶದಲ್ಲಿ ಈವರೆಗೆ 65.41 ಕೋಟಿ ಡೋಸ್ ಗೂ ಅಧಿಕ ಲಸಿಕೆಗಳನ್ನು ನೀಡಲಾಗಿದೆ.

**ತಡೆಗಟ್ಟುವ ತಂತ್ರಗಳು**

ಕೋವಿಡ್-19 ಪ್ರಕರಣಗಳು ದೇಶದಲ್ಲಿ ಕ್ಷೀಣಿಸುತ್ತಿದ್ದರೂ, ನಾವು ಇನ್ನೂ ಪೂರ್ಣವಾಗಿ ಅದರಿಂದ ಹೊರಬಂದಿಲ್ಲ. ಕೋವಿಡ್‌ಗೆ ಸಂಬಂಧಿಸಿದ ಶಿಷ್ಟಾಚಾರಗಳು ಮತ್ತು ಮುನ್ನೆಚ್ಚರಿಕೆಗಳನ್ನು ಅನುಸರಿಸುವುದು ಅಷ್ಟೇ ಮುಖ್ಯವಾಗಿದೆ. ಸಾರ್ವಜನಿಕ ಸಹಕಾರವಿಲ್ಲದೆ ಕೊರೊನಾ ವೈರಸ್ ವಿರುದ್ಧದ ಸಮರದಲ್ಲಿ ಗೆಲ್ಲಲಾಗುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ನಾಗರಿಕನೂ ಮಾಸ್ಕ್ ಧರಿಸಿ, ಆಗಾಗ್ಗೆ ಕೈತೊಳೆದು, ಸುರಕ್ಷಿತ ವ್ಯಕ್ತಿಗತ ಅಂತರ ಕಾಪಾಡಿಕೊಂಡು, ಶಿಸ್ತುಬದ್ಧ ಮತ್ತು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ಜಂಕ್ ಫುಡ್ ನಿಂದ ದೂರ ಇರಬೇಕು ಮತ್ತು ನಮ್ಮ ಭೌತಿಕ ಹಾಗು ಹವಾಮಾನ ಪರಿಸ್ಥಿತಿಗಳಿಗೆ ಹೆಚ್ಚು ಸೂಕ್ತವಾದ ಸರಿಯಾಗಿ ಬೇಯಿಸಿದ ಸಾಂಪ್ರದಾಯಿಕ ಭಾರತೀಯ ಆಹಾರವನ್ನು ಸೇವಿಸಬೇಕು.

**ಶಾಲಾ ಶಿಕ್ಷಕರು ಮತ್ತು ಸಿಬ್ಬಂದಿಗೆ ಲಸಿಕೆ**

ಶಾಲಾ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ಆದ್ಯತೆಯ ಆಧಾರದ ಮೇಲೆ ಲಸಿಕೆ ಹಾಕಲು 2021ರ ಆಗಸ್ಟ್ 27 ರಿಂದ ಆಗಸ್ಟ್ 31 ರವರೆಗೆ ರಾಜ್ಯಗಳಿಗೆ 2 ಕೋಟಿಗೂ ಹೆಚ್ಚು ಹೆಚ್ಚುವರಿ ಲಸಿಕೆ ಡೋಸ್ ಗಳನ್ನು ಲಭ್ಯವಾಗುವಂತೆ ಮಾಡಿದೆ. ಈ ಮುನ್ನ, ಕೇಂದ್ರ ಸರ್ಕಾರ ಸೆಪ್ಟೆಂಬರ್ 5 ರಂದು ಆಚರಿಸಲಾಗುವ ಶಿಕ್ಷಕರ ದಿನಕ್ಕೂ ಮೊದಲು ಎಲ್ಲಾ ಶಾಲಾ ಶಿಕ್ಷಕರಿಗೆ ಆದ್ಯತೆಯ ಆಧಾರದ ಮೇಲೆ ಲಸಿಕೆ ಹಾಕಲು ಪ್ರಯತ್ನಿಸುವಂತೆ ಎಲ್ಲಾ ರಾಜ್ಯಗಳನ್ನು ಕೋರಿತ್ತು. ಶಿಕ್ಷಣ ಸಂಸ್ಥೆಗಳು ಅನೇಕ ರಾಜ್ಯಗಳಲ್ಲಿ ಪುನಾರಂಭವಾಗಿರುವುದರಿಂದ ಅವರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದರ ಜೊತೆಗೆ ರೋಗನಿರೋಧಕ ಕಾರ್ಯಕ್ರಮಕ್ಕೆ ಅಗತ್ಯ ಪ್ರಚೋದನೆ ನೀಡುವುದು ಶಾಲಾ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ಆದ್ಯತೆಯ ಆಧಾರದ ಮೇಲೆ ಲಸಿಕೆ ಹಾಕುವುದರ ಹಿಂದಿನ ಉದ್ದೇಶವಾಗಿದೆ.

**ಈಗ ವಾಟ್ಸಪ್ ಮೂಲಕ ಕೊರೊನಾ ಲಸಿಕೆಯನ್ನು ಬುಕ್ ಮಾಡಿ**

ಕೊರೊನಾ ಲಸಿಕೆಯ ಸ್ಲಾಟ್ ಅನ್ನು ಈಗ ವಾಟ್ಸಪ್ ಮೂಲಕವೂ ಕಾಯ್ದಿರಿಸಬಹುದಾಗಿದೆ. ಇದಕ್ಕಾಗಿ ನೀವು ವಾಟ್ಸಾಪ್‌ನಲ್ಲಿ ಮೈಗೌ ಕೊರೊನಾ ಹೆಲ್ಪ್‌ಡೆಸ್ಕ್‌ಗೆ ಭೇಟಿ ನೀಡುವ ಮೂಲಕ ಅಗತ್ಯ ಕ್ರಮಗಳನ್ನು ಅನುಸರಿಸಬೇಕು. ನೀವು ಫೋನ್‌ನಲ್ಲಿ 9013151515 ಸಂಖ್ಯೆಯನ್ನು ಸೇವ್ ಮಾಡಿಕೊಳ್ಳಬೇಕು. ಇದು ಮೈಗೌ ಕೊರೊನಾ ಹೆಲ್ಪ್‌ಡೆಸ್ಕ್‌ನ ವಾಟ್ಸಪ್ ಸಂಖ್ಯೆ ಆಗಿದೆ. ವಾಟ್ಸಪ್‌ಗೆ ಹೋಗಿ ಅದರ ಮೇಲೆ ಬುಕ್ ಸ್ಲಾಟ್ ಸಂದೇಶವನ್ನು ಕಳುಹಿಸಿ. ನಿಮಗೆ ಒಟಿಪಿ ಸಿಗುತ್ತದೆ. ಒಟಿಪಿಯನ್ನು ನಮೂದಿಸಿದ ನಂತರ, ಕೊರೊನಾ ಲಸಿಕೆಯನ್ನು ಕಾಯ್ದಿರಿಸಲು ಕೆಲವು ಕ್ರಮಗಳನ್ನು ಅನುಸರಿಸಬೇಕು. ಈ ಸೌಲಭ್ಯದ ಆರಂಭದ ಕುರಿತಂತೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ನಾಗರಿಕ ಸೌಲಭ್ಯಗಳ ಹೊಸ ಯುಗ ಪ್ರಾರಂಭವಾಗಿದೆ ಎಂದು ಹೇಳಿದ್ದರು. ಈಗ ನೀವು ಕೆಲವೇ ನಿಮಿಷಗಳಲ್ಲಿ ನಿಮ್ಮ ಫೋನ್ ನಿಂದ ಕೋವಿಡ್ ಲಸಿಕೆಗಾಗಿ ಸ್ಲಾಟ್ ಗಳನ್ನು ಸುಲಭವಾಗಿ ಕಾಯ್ದಿರಿಸಬಹುದು.. ■

**ಸೆಪ್ಟೆಂಬರ್ 01 ರವರೆಗೆ**

**65.41 ಕೋಟಿ ಲಸಿಕೆ ಡೋಸ್ ಗಳನ್ನು ನೀಡಲಾಗಿದೆ**

**ಅತಿ ವೇಗದ ಲಸಿಕೆ ಪ್ರಮಾಣ:**
**ಕೇವಲ 19 ದಿನಗಳಲ್ಲಿ 10 ಕೋಟಿ ಲಸಿಕೆಗಳು**




**ದೇಶೀಯ ಎಂ. ಆರ್.ಎನ್.ಎ ಲಸಿಕೆ ಸುರಕ್ಷಿತ**

ದೇಶವು ಕೊರೊನಾಗೆ ಮತ್ತೊಂದು ಲಸಿಕೆಯನ್ನು ಪಡೆಯಬಹುದು. ದೇಶದ ಮೊದಲ ಎಂ.ಆರ್.ಎನ್.ಎ ಆಧಾರಿತ ಕೋವಿಡ್ ಲಸಿಕೆ ಸುರಕ್ಷಿತವಾಗಿದೆ ಎಂದು ಕಂಡುಬಂದಿದೆ. ಈಗ ಇದನ್ನು ಎರಡನೇ ಮತ್ತು ಮೂರನೇ ಹಂತದ ವೈದ್ಯಕೀಯ ಪ್ರಯೋಗಗಳಿಗೆ ತೆಗೆದುಕೊಂಡು ಹೋಗಲಾಗುವುದು. ಈ ಲಸಿಕೆಯನ್ನು ಪುಣೆಯ ಜೆನೋವಾ ಬಯೋಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ ಕಂಪನಿ ತಯಾರಿಸುತ್ತಿದೆ. ಇದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಜೈವಿಕ ತಂತ್ರಜ್ಞಾನ ಇಲಾಖೆಯ ಐಎನ್.ಡಿ-ಸಿಇಪಿಐ ಅಭಿಯಾನದ ಅಡಿಯಲ್ಲಿ ಅನುದಾನವನ್ನೂ ಪಡೆದಿದೆ. ಇದು ಭಾರತ ಮತ್ತು ವಿಶ್ವಕ್ಕೆ ಒಂದು ಪ್ರಮುಖ ಲಸಿಕೆ ಎಂದು ಸಾಬೀತಾಗುತ್ತದೆ ಎಂದು ನಂಬಲಾಗಿದೆ. ಇದು ರಾಷ್ಟ್ರದ ದೇಶೀಯ ಲಸಿಕೆ ಅಭಿವೃದ್ಧಿ ಕಾರ್ಯಾಚರಣೆಯಲ್ಲಿ ಮಹತ್ವದ ಸಾಧನೆಯಾಗಿದೆ ಮತ್ತು ನಿರ್ದಿಷ್ಟ ಲಸಿಕೆ ಅಭಿವೃದ್ಧಿಯ ಜಾಗತಿಕ ನಕ್ಷೆಯಲ್ಲಿ ಭಾರತಕ್ಕೆ ಸ್ಥಾನ ನೀಡುತ್ತದೆ.

**ಅಕ್ಟೋಬರ್ ವೇಳೆಗೆ ಮಕ್ಕಳ ಲಸಿಕೆ ಸಾಧ್ಯತೆ**

ವಿಶ್ವದ ಮೊದಲ ದೇಶೀಯವಾಗಿ ನಿರ್ಮಿಸಲಾದ ಸೂಜಿ ರಹಿತ ಕೋವಿಡ್ ನಿಗ್ರಹ ಲಸಿಕೆಯಾದ ಝೈಕೋವ್-ಡಿ ಅಕ್ಟೋಬರ್ ವೇಳೆಗೆ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಇದನ್ನು 12-17 ವರ್ಷದ ಮಕ್ಕಳಿಗಾಗಿ ಇತ್ತೀಚೆಗೆ ಅನುಮೋದನೆ ನೀಡಲಾಗಿದೆ. ಇದು ಲಸಿಕೆ ಅಭಿಯಾನ ವೇಗಗೊಳಿಸಲು ಸಹಾಯ



ಮಾಡುತ್ತದೆ. ಮೊದಲನೆಯದಾಗಿ, ಗಂಭೀರ ಪರಿಸ್ಥಿತಿಗಳನ್ನು ಹೊಂದಿರುವ ಮಕ್ಕಳಿಗೆ ಲಸಿಕೆಯನ್ನು ನೀಡಲಾಗುತ್ತದೆ. ಸಂಶೋಧನಾ ವರದಿಯ ಪ್ರಕಾರ ದೇಶದಲ್ಲಿ 12 ರಿಂದ 17 ವರ್ಷ ವಯಸ್ಸಿನ ಸುಮಾರು 120 ದಶಲಕ್ಷ ಮಕ್ಕಳಿದ್ದಾರೆ. ಈ ಲಸಿಕೆಯ ಅನುಮೋದನೆಯು ಭಾರತದ ವಿಜ್ಞಾನಿಗಳ ಹೊಸತನದ ಹುರುಪಿಗೆ ಸಾಕ್ಷಿಯಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.



# ಸ್ವಾತಂತ್ರ್ಯ ಹೋರಾಟದ ಮೈಲಿಗಲ್ಲುಗಳು

**ಏಕತೆ, ಬಲ ಮತ್ತು ದೃಢನಿಶ್ಚಯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹೆಗ್ಗುರುತಾಗಿತ್ತು. ಆದ್ದರಿಂದ, ಸ್ವಾತಂತ್ರ್ಯದ 75 ವರ್ಷಗಳ ಅಮೃತ ಮಹೋತ್ಸವವು ಈ ಸ್ಫೂರ್ತಿಯ ಆಚರಣೆ ಮಾತ್ರವಲ್ಲ, ಪ್ರತಿಯೊಬ್ಬ ಭಾರತೀಯನ ಪಾಲೂ ಇರುವ ಹಬ್ಬವಾಗಿದೆ. ಈ ಉತ್ಸವದಲ್ಲಿ ಎಲ್ಲಾ ವರ್ಗದ ಜನರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಪ್ರತಿಯೊಬ್ಬ ಭಾರತೀಯರೂ ಬಡತನ, ಅಸಮಾನತೆ, ಅನಕ್ಷರತೆ, ಬಯಲು ಶೌಚ, ಭಯೋತ್ಪಾದನೆ ಮತ್ತು ತಾರತಮ್ಯದಂತಹ ಪಿಡುಗುಗಳನ್ನು ನಿವಾರಿಸುವ ತಮ್ಮ ಸಂಕಲ್ಪವನ್ನು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿದ್ದ ಅದೇ ಹುಮ್ಮಸ್ಸಿನಿಂದ ಪುನರುಚ್ಚರಿಸುತ್ತಿದ್ದಾರೆ**

ನನಸಾಗದ ಕನಸುಗಳನ್ನು ಸಾಕಾರಗೊಳಿಸಿ ಬದುಕಿನ ಮೌಲ್ಯಗಳನ್ನು ಭದ್ರಗೊಳಿಸಿ ನವ ಭಾರತ ನಿರ್ಮಾಣ ಮಾಡುವ ಸಂದರ್ಭವೇ ಸ್ವಾತಂತ್ರ್ಯದ ಅಮೃತ ಮಹೋತ್ಸವ. ಇದು ನಾಗರಿಕರಲ್ಲಿ ಹೊಸ ಚೈತನ್ಯ ಮತ್ತು ಪ್ರಜ್ಞೆಯನ್ನು ತುಂಬುವುದು ಮಾತ್ರವಲ್ಲದೆ, ದೇಶಕ್ಕಾಗಿ ಶ್ರಮಿಸಲು ಅವರನ್ನು ಪ್ರೇರೇಪಿಸುತ್ತಿದೆ. ಭಾರತ ಮಾತೆಯ ಹೆಮ್ಮೆ ಮತ್ತು ಗೌರವವನ್ನು ಯಾವುದೇ ಬೆಲೆತೆತ್ತಾದರೂ ರಕ್ಷಿಸುವ ಏಕೈಕ ಗುರಿಯನ್ನು ಭಾರತೀಯ ಸ್ವಾತಂತ್ರ್ಯ ಹೋರಾಟ ಹೊಂದಿತ್ತು. ಈ ಗುರಿಯನ್ನು ಸಾಧಿಸಲು ಅನೇಕ ವೀರ ಪುತ್ರರು ಮತ್ತು ಪುತ್ರಿಯರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದರು. ನಾವು ಸ್ವತಂತ್ರ ದೇಶದಲ್ಲಿ ವಾಸಿಸಲು ಅವರು ನಮಗಾಗಿ ಪ್ರಾಣತೆತ್ತರು. ಸ್ವಾತಂತ್ರ್ಯವನ್ನು ಗಳಿಸುವ ಗುರಿಯ ಜೊತೆಗೆ ಅವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಸೇರಿದಂತೆ ಸಮಾಜದ ಪ್ರತಿಯೊಂದು ವರ್ಗವೂ ದೇಶದ ಅಭಿವೃದ್ಧಿಯಲ್ಲಿ ಸಮಾನವಾದ ಅಭಿಪ್ರಾಯವನ್ನು ಹೊಂದಿರುವ ಭಾರತದ ಕನಸನ್ನು ಕಂಡಿದ್ದರು. ನಮ್ಮ ಭವ್ಯ ಭೂತಕಾಲವನ್ನು ಗಮನಿಸಿದರೆ, ಈ ಸ್ವಾತಂತ್ರ್ಯ ಹೋರಾಟದ ಮಹತ್ವವನ್ನು ನಮ್ಮ ಭವಿಷ್ಯದ ಪೀಳಿಗೆಯೊಂದಿಗೆ ಹಂಚಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ, ಇದರಿಂದ ಭಾರತವು ಈ ಸ್ವಾತಂತ್ರ್ಯಕ್ಕೆ ತೆತ್ತ ಬೆಲೆಯನ್ನು ಅವರು ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸರಣಿಯಲ್ಲಿ, ತಮ್ಮನ್ನೇ ಸಮರ್ಪಣೆ ಮಾಡಿಕೊಂಡಿದ್ದಷ್ಟೇ ಅಲ್ಲ, ತಮಗಿಂತ ಮೇಲೆ ದೇಶವನ್ನು ನೋಡುವಂತೆ ಪ್ರೇರೇಪಿಸಿದ ಕೆಲವು ವೀರರ ಜೀವನದ ಆಳಕ್ಕೆ ನಾವು ಹೋಗುತ್ತಿದ್ದೇವೆ.

# ಬಾಲ್ಯದಲ್ಲೇ ಸ್ವತಂತ್ರ ಭಾರತದ ಕನಸು ಕಂಡಿದ್ದ ಭಗತ್ ಸಿಂಗ್

ಒಂದು ಮಗು ಒಮ್ಮೆ ಮರಳಿನ ದಿಬ್ಬದಲ್ಲಿ ಹುಲ್ಲನ್ನು ನೆಡುವ ಮೂಲಕ ಆಡುತ್ತಿತ್ತು. ಅವನು ಹೀಗೆ ಮಾಡುವುದನ್ನು ನೋಡಿ, ಅವನ ತಂದೆ ಕುತೂಹಲದಿಂದ ಅವನನ್ನು ಕೇಳಿದರು, “ನೀವು ಏನು ಮಾಡುತ್ತಿದ್ದೀಯಾ?” ಮಗು ಉತ್ತರಿಸಿತು, “ನಾನು ಬಂದೂಕನ್ನು ನೆಡುತ್ತಿದ್ದೇನೆ. ನಾನು ದೊಡ್ಡವನಾದಾಗ, ಮರದ ಮೇಲೆ ಬಂದೂಕುಗಳು ಬಿಟ್ಟಿರುತ್ತವೆ. ಆಗ ನಾನು ಈ ರಕ್ತಪಿಪಾಸು ಬ್ರಿಟಿಷರ ವಿರುದ್ಧ ಹೋರಾಡುತ್ತೇನೆ.” ಆ ಮಗು ಬೇರಾರೂ ಅಲ್ಲ, ಇಂದು ಜಗತ್ತಿಗೇ ತಿಳಿದಿರುವ ಭಾರತದ ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್.

1907ರ ಸೆಪ್ಟೆಂಬರ್ 28ರಂದು ಜನಿಸಿದ ಭಗತ್ ಸಿಂಗ್ ಅವರ ದೇಶಪ್ರೇಮ ಮತ್ತು ಸ್ವಾತಂತ್ರ್ಯದ ಮೇಲಿನ ಉತ್ಸಾಹ ಅದ್ಭುತವಾಗಿತ್ತು. ಬ್ರಿಟಿಷರು ತಾವಾಗಿಯೇ ಭಾರತವನ್ನು ತೊರೆಯುವುದಿಲ್ಲ ಮತ್ತು ಅವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಅವರು ನಂಬಿದ್ದರು. 1919ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಯುವ ಭಗತ್ ಸಿಂಗ್ ಅವರ ಜೀವನಕ್ಕೆ ಮಹತ್ವದ ತಿರುವು ನೀಡಿತು. ಹತ್ಯಾಕಾಂಡದ ನಂತರ ಕೇವಲ 12 ವರ್ಷ ವಯಸ್ಸಿನ ಭಗತ್ ಸಿಂಗ್ ಘಟನಾ ಸ್ಥಳಕ್ಕೆ ಹೋದರು, ಅಲ್ಲಿ ನೂರಾರು ಮುಗ್ಧ ಜನರನ್ನು ಕ್ಷಣಾರ್ಧದಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡಲು ಜಲಿಯನ್ ವಾಲಾ ಬಾಗ್ ನಲ್ಲಿ ಪ್ರತಿಜ್ಞೆ ಮಾಡಿದರು. ಭಗತ್ ಸಿಂಗ್ ಅವರ ಮೇಲೆ ಈ ಘಟನೆ ಆಳವಾದ ಪರಿಣಾಮ ಬೀರಿತು. ಕ್ರಮೇಣ, ಅವರು ಕ್ರಾಂತಿಯತ್ತ ಹೆಜ್ಜೆ ಹಾಕಿದರು. ಭಾರತದಲ್ಲಿ ಬ್ರಿಟಿಷರ ವಿರುದ್ಧ ಅವರು ನಡೆಸಿದ ಎರಡು ಹಿಂಸಾಚಾರದ ಘಟನೆಗಳು ಮತ್ತು 23ನೇ ವಯಸ್ಸಿನಲ್ಲಿ ಮರಣದಂಡನೆಗೆ ಗುರಿಯಾದ ಅವರನ್ನು ಭಾರತೀಯ ಸ್ವಾತಂತ್ರ್ಯ ಚಳವಳಿಯ ಜಾನಪದ ನಾಯಕನನ್ನಾಗಿ ಮಾಡಿತು. 1928ರ ಡಿಸೆಂಬರ್ ನಲ್ಲಿ ಭಗತ್ ಸಿಂಗ್ ಮತ್ತು ಅವರ ಸಹವರ್ತಿ ಶಿವರಾಂ ರಾಜಗುರು ಅವರು ಇಂದು ಪಾಕಿಸ್ತಾನದಲ್ಲಿರುವ ಪಂಜಾಬ್ ನ ಲಾಹೋರ್ ನಲ್ಲಿ 21 ವರ್ಷ ವಯಸ್ಸಿನ ಬ್ರಿಟಿಷ್ ಪೊಲೀಸ್ ಅಧಿಕಾರಿ ಜಾನ್ ಸೌಂಡರ್ಸ್ ಅವರನ್ನು ಗುಂಡಿಕ್ಕಿ ಕೊಂದರು. ತದನಂತರ, ಅವರು ಅನೇಕ ತಿಂಗಳುಗಳ ಕಾಲ ತಲೆಮರೆಸಿಕೊಂಡಿದ್ದರು. ನಾಲ್ಕು ತಿಂಗಳ ನಂತರ 1929ರ ಏಪ್ರಿಲ್ ನಲ್ಲಿ ಅವರು ಮತ್ತು ಇನ್ನೊಬ್ಬ ಸಹವರ್ತಿ ಬತುಕೇಶ್ವರ್ ದತ್ ಅವರು ದೆಹಲಿಯ ಕೇಂದ್ರೀಯ ಶಾಸನಸಭೆಯ ಖಾಲಿ ಇದ್ದ ಹಿಂಭಾಗದ ಬೆಂಚುಗಳಲ್ಲಿ ಎರಡು ಕಡಿಮೆ ತೀವ್ರತೆಯ ನಾಡ ಬಾಂಬ್ ಗಳನ್ನು ಅಳವಡಿಸಿ ಸ್ಫೋಟಿಸಿದರು ಮತ್ತು ಅಧಿಕಾರಿಗಳ ಮುಂದೆ ಶರಣಾದರು. ವಿಚಾರಣೆಯ ಸಮಯದಲ್ಲಿ ಜಾನ್ ಸೌಂಡರ್ಸ್ ಹತ್ಯೆ ಪ್ರಕರಣದಲ್ಲಿ ಭಗತ್ ಸಿಂಗ್ ಅವರ ಪಾತ್ರ ಬೆಳಕಿಗೆ ಬಂದಿತು ಮತ್ತು ಅವರನ್ನು ಮಾರ್ಚ್ 1931ರಲ್ಲಿ ಮರಣದಂಡನೆಗೆ ಗುರಿಪಡಿಸಲಾಯಿತು ಮತ್ತು ಅವರ ಇಬ್ಬರು ಸಹಚರರಾದ ರಾಜಗುರು ಮತ್ತು ಸುಖದೇವ್ ಅವರೊಂದಿಗೆ 23ನೇ ವಯಸ್ಸಿನಲ್ಲೇ ಅವರನ್ನು ಗಲ್ಲಿಗೇರಿಸಲಾಯಿತು. ಅವರನ್ನು ಗಲ್ಲಿಗೆ ಕರೆದೊಯ್ಯುವಾಗ, ಅವರು ‘ಇಂಕ್ವಿಲಾಬ್ ಜಿಂದಾಬಾದ್’ ಮತ್ತು ‘ಹಿಂದೂಸ್ತಾನ್ ಆಜ಼ಾದ್ ಹೋ’ ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಜೈಲಿನಲ್ಲಿದ್ದಾಗ ಭಗತ್ ಸಿಂಗ್ ರನ್ನು ಭೇಟಿಯಾಗಲು ಅವರ ತಾಯಿ ಬಂದಿದ್ದರು, ಭಗತ್ ಸಿಂಗ್ ತಾಯಿಗೆ ಹೇಳಿದರು, “ಅಮ್ಮ, ನನ್ನ ಮೃತ ದೇಹವನ್ನು ತೆಗೆದುಕೊಳ್ಳಲು ಬರಬೇಡಿ. ಬದಲಾಗಿ ಸಹೋದರ ಕುಲದೀಪ್ ಅವರನ್ನು ಕಳುಹಿಸಿ. ಏಕೆಂದರೆ, ನನ್ನ ಮೃತ ದೇಹವನ್ನು ನೋಡಿದ ನಂತರ ನೀವು ಅಳುತ್ತಿದ್ದರೆ, ಭಗತ್ ಸಿಂಗ್ ತಾಯಿ ಅಳುತ್ತಿದ್ದಾರೆ ಎಂದು ಜನರು ಹೇಳುತ್ತಾರೆ.” ಎಂದಿದ್ದರು. ಭಗತ್ ಸಿಂಗ್ ಅವರನ್ನು ಸ್ಮರಿಸುತ್ತಾ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೀಗೆ ಹೇಳಿದ್ದರು, “ವಿಶ್ವದ ಬೃಹತ್ ಭಾಗವನ್ನು ಆಳಿದ ಬ್ರಿಟಿಷರ ಸಾಮ್ರಾಜ್ಯವನ್ನು ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಕರೆಯಲಾಗುತ್ತಿತ್ತು...... ಆದರೆ ಅಂತಹ ಪ್ರಬಲ ಸಾಮ್ರಾಜ್ಯ 23 ವರ್ಷದ ವ್ಯಕ್ತಿಯನ್ನು ನೋಡಿ ಹೆದರುತ್ತಿತ್ತು. ಹುತಾತ್ಮ ಭಗತ್ ಸಿಂಗ್ ಧೈರ್ಯಶಾಲಿ ಮಾತ್ರವಲ್ಲ, ಜ್ಞಾನಿ ಮತ್ತು ಚಿಂತಕರೂ ಆಗಿದ್ದರು. ಭಗತ್ ಸಿಂಗ್ ಮತ್ತು ಅವರ ಸ್ನೇಹಿತರು ತಮ್ಮ ಜೀವನದ ಬಗ್ಗೆ ತಲೆಕೆಡಿಸಿಕೊಳ್ಳದೆ ಮಾಡಿದ, ಅವರ ಶೌರ್ಯ ಕಾರ್ಯಗಳು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೊಡ್ಡ ಪಾತ್ರ ವಹಿಸಿವೆ. ಹುತಾತ್ಮ ಭಗತ್ ಸಿಂಗ್ ಅವರ ಜೀವನದ ಮತ್ತೊಂದು ಸುಂದರ ಅಂಶವೆಂದರೆ ಅವರು ತಂಡ ಕಾರ್ಯದ ಮಹತ್ವದ ಬಗ್ಗೆ ಪ್ರತಿಪಾದಿಸುತ್ತಿದ್ದುದು, ಅದು ಲಾಲಾ ಲಜಪತ್ ರಾಯ್ ಅವರ ಬಗೆಗಿನ ಸಮರ್ಪಣೆಯಾಗಿರಲಿ ಅಥವಾ ಚಂದ್ರಶೇಖರ ಆಜ಼ಾದ್, ಸುಖದೇವ್ ಮತ್ತು ರಾಜಗುರು ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರೊಂದಿಗಿನ ಅವರ ಒಡನಾಟವೇ ಆಗರಲಿ ತಂಡಕಾರ್ಯಕ್ಕೆ ಅವರು ಒತ್ತಿ ನೀಡಿದ್ದರು. ಭಗತ್ ಸಿಂಗ್ ಗೆ ವೈಯಕ್ತಿಕ ವೈಭವ ಎಂದಿಗೂ ಮುಖ್ಯವಾಗಿರಲಿಲ್ಲ. ಅವರು ಯಾವಾಗಲೂ ಒಂದು ಧ್ಯೇಯಕ್ಕಾಗಿ ಬದುಕಿದ್ದರು ಮತ್ತು ಅದಕ್ಕಾಗಿ ಅವರು ಸರ್ವೋಚ್ಚ ತ್ಯಾಗ ಮಾಡಿದರು. ಅನ್ಯಾಯ ಮತ್ತು ಬ್ರಿಟಿಷ್ ಆಡಳಿತವನ್ನು ತೊಡೆದುಹಾಕುವುದು ಆ ಮಹದೋದ್ದೇಶವಾಗಿತ್ತು.”



**ಜನನ: 28 ಸೆಪ್ಟೆಂಬರ್ 1907**
**ನಿಧನ: 23 ನೇ ಮಾರ್ಚ್ 1931**

ಒಮ್ಮೆ ಭಗತ್ ಸಿಂಗ್ ಅವರನ್ನು ಜೈಲಿನಲ್ಲಿ ಕೇಳಲಾಯಿತು, ನಿಮ್ಮ ವಿರುದ್ಧದ ಪ್ರಕರಣದಲ್ಲಿ ಏಕೆ ನಿಮ್ಮನ್ನು ಸಮರ್ಥಿಸಿಕೊಳ್ಳಲಿಲ್ಲ? ಅದಕ್ಕೆ ಅವರು ಹೀಗೆ ಉತ್ತರಿಸಿದರು - ಕ್ರಾಂತಿಕಾರಿಗಳು ಸಾಯಬೇಕು, ಏಕೆಂದರೆ ಅವರ ಸಾವಿನಲ್ಲಿ ಚಳವಳಿ ಬಲಗೊಳ್ಳುತ್ತದೆ, ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಮೂಲಕ ಅಲ್ಲ” ಎಂದು.



## ಭೋಗೇಶ್ವರಿ ಫುಕನಾನಿ

# ತ್ರಿವರ್ಣ ಧ್ವಜ ರಕ್ಷಿಸಲು ಗುಂಡಿಗೆ ಎದೆಯೊಡ್ಡಿದರು

**ಜನನ: 1885 | ಸಾವು: 20 ನೇ ಸೆಪ್ಟೆಂಬರ್ 1942**

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಭಾರತದ ವಿವಿಧ ಭಾಗಗಳ ಅನೇಕ ಮಹಿಳೆಯರಿಗೆ ಸ್ಫೂರ್ತಿ ನೀಡಿತು. ಇಂತಹ ಹೋರಾಟಗಾರ್ತಿಯರ ದೊಡ್ಡ ಹೆಸರುಗಳಲ್ಲಿ ಭೋಗೇಶ್ವರಿ ಫುಕನಾನಿ ಹೆಸರೂ ಒಂದು. 1885ರಲ್ಲಿ ಅಸ್ಸಾಂನ ನಾಗಾಂವ್ ಜಿಲ್ಲೆಯ ಬೆರ್ಹಾಂಪುರ್ ಪ್ರದೇಶದಲ್ಲಿ ಜನಿಸಿದ ಭೋಗೇಶ್ವರಿ ಫುಕನಾನಿ ಉಗ್ರ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದರು. ಅವರು ಸಾಮಾನ್ಯ ಗೃಹಿಣಿಯಾಗಿದ್ದರು, ಅವರಿಗೆ ಪತಿ ಭೋಗೇಶ್ವರ ಫುಕಾನ್ ಹಾಗೂ ಎಂಟು ಮಕ್ಕಳಿದ್ದರು. ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ಈಶಾನ್ಯ ಭಾರತದಲ್ಲಿ ಭೋಗೇಶ್ವರಿ ಪ್ರಮುಖ ಪಾತ್ರ ವಹಿಸಿದ್ದರು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಅನೇಕ ಮಹಿಳೆಯರಿಗೆ ಸ್ಫೂರ್ತಿ ನೀಡಿದರು. ರಾಷ್ಟ್ರವ್ಯಾಪಿ ಪ್ರತಿಭಟನೆಗಳು ಮತ್ತು ಸುಧಾರಣಾ ಚಳವಳಿಗಳಿಂದ ಪ್ರಭಾವಿತವಾದ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ದಂಗೆಯನ್ನು ಮುನ್ನಡೆಸಲು ದೇಶದ ಮೇಲಿನ ಅವರ ಪ್ರೀತಿ ಅವರನ್ನು ಪ್ರೇರೇಪಿಸಿತು. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನಿರಾಕರಿಸಲಾಗುತ್ತಿದ್ದ ಮತ್ತು ಮುಂದೆ ಬರುವುದಕ್ಕೆ ತಡೆಯೊಡ್ಡುತ್ತಿದ್ದ ಕಾಲದಲ್ಲಿ, ಭೋಗೇಶ್ವರಿ ಅವರು ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಸ್ಥಳೀಯ ಪ್ರತಿಭಟನೆಗಳಲ್ಲಿ ಭಾಗಿಯಾಗುತ್ತಿದ್ದರು ಮತ್ತು ಆ ಪ್ರದೇಶದಲ್ಲಿ ಬ್ರಿಟಿಷರ ವಿರುದ್ಧ ನಡೆದ ದುಷ್ಕೃತ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ವಯಸ್ಸಾಗಿದ್ದರೂ, ಭೋಗೇಶ್ವರಿ ಫುಕನಾನಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು ಮಾತ್ರವಲ್ಲದೆ, ಅದಕ್ಕಾಗಿ ತನ್ನ ಮಕ್ಕಳಿಗೆ ಸ್ಫೂರ್ತಿ ನೀಡಿದರು. ಬರ್ಹಾಂಪುರದ ಕಾಂಗ್ರೆಸ್ ಕಚೇರಿಯನ್ನು ಬ್ರಿಟಿಷ್ ಸೈನಿಕರು ವಶಪಡಿಸಿಕೊಂಡಾಗ ಭೋಗೇಶ್ವರಿ ಸೇರಿದಂತೆ ಅನೇಕ ಕ್ರಾಂತಿಕಾರಿಗಳು ಪ್ರತಿಭಟನೆ ನಡೆಸಿದರು ಮತ್ತು ಮತ್ತೆ ಅದನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. ಈ ಸೋಲಿನಿಂದ ಕುಪಿತರಾದ ಬ್ರಿಟಿಷರು, ಆ ಕಚೇರಿಯನ್ನು ಮರಳಿ ಪಡೆಯಲು ಬಲಪ್ರಯೋಗ ಮಾಡಲು ನಿರ್ಧರಿಸಿದರು, ಇದನ್ನು ಕ್ರಾಂತಿಕಾರಿಗಳು ತೀವ್ರವಾಗಿ ವಿರೋಧಿಸಿದರು. 'ವಂದೇ ಮಾತರಂ' ಎಂಬ ಘೋಷಣೆಯೊಂದಿಗೆ ಭೋಗೇಶ್ವರಿ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಅವರು ಬ್ರಿಟಿಷ್ ಸೈನಿಕರೊಂದಿಗೆ ಮುಖಾಮುಖಿಯಾದರು ಆಗ, ಘರ್ಷಣೆ ಆರಂಭವಾಯಿತು. ಘರ್ಷಣೆಯ ಸಮಯದಲ್ಲಿ, ಬ್ರಿಟಿಷರು ಇನ್ನೊಬ್ಬ ಸ್ವಾತಂತ್ರ್ಯ ಹೋರಾಟಗಾರ್ತಿ ರತ್ನಮಾಲಾ ಅವರ ಕೈಯಿಂದ ತ್ರಿವರ್ಣ ಧ್ವಜವನ್ನು ಕಸಿದುಕೊಂಡರು, ಇದು ರಾಷ್ಟ್ರಧ್ವಜಕ್ಕೆ ಮಾಡಿದ ಅವಮಾನ ಎಂದು ಭೋಗೇಶ್ವರಿ ಪರಿಗಣಿಸಿದರು, ಕ್ಷಣ ಮಾತ್ರದಲ್ಲಿ ಅವರು ಧ್ವಜಕ್ಕೆ ಹಾಕಿದ್ದ ಕೋಲಿನಿಂದ ಬ್ರಿಟಿಷ್ ಅಧಿಕಾರಿಯನ್ನು ಥಳಿಸಿದರು. ಸಹಜವಾಗಿಯೇ ಬ್ರಿಟಿಷರು ಇದನ್ನು ನಿರೀಕ್ಷಿಸಿರಲಿಲ್ಲ, ಅವರ ಮೇಲೆ ಗುಂಡು ಹಾರಿಸಿದರು. ಮೂರು ದಿನಗಳ ನಂತರ, ಭೋಗೇಶ್ವರಿ 1942ರ ಸೆಪ್ಟೆಂಬರ್, 20 ರಂದು ನಿಧನರಾದರು. ಅಸ್ಸಾಂನಲ್ಲಿ ಆಕೆಯನ್ನು ತುಂಬಾ ಗೌರವದಿಂದ ಕಾಣಲಾಗುತ್ತದೆ ಮತ್ತು ಅವರ ಕೊಡುಗೆಗಳನ್ನು ಗುರುತಿಸಲು ಆಸ್ಪತ್ರೆಗೆ ಅವರ ಹೆಸರನ್ನು ಇಡಲಾಗಿದೆ.




**ಚಿತ್ರಾಂಜಲಿಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಕೆಳಗಿನ ಲಿಂಕ್ ಅನ್ನು ಕ್ಲಿಕ್ ಮಾಡಿ:-**
**http://davp.nic.in/constitutionofindia/index.html**

## ಚಿತ್ರಾಂಜಲಿ

# 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರ್ಕಾರದ ವಿಶಿಷ್ಟ ಉಪಕ್ರಮ

ಭಾರತದ ಸ್ವಾತಂತ್ರ್ಯದ 75ನೇ ವರ್ಷವನ್ನು ಆಚರಿಸಲು ಕೇಂದ್ರ ಸರ್ಕಾರ ಮತ್ತೊಂದು ವಿಶಿಷ್ಟ ಉಪಕ್ರಮವನ್ನು ಕೈಗೊಂಡಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಆಚರಿಸುತ್ತಿರುವ #IconicWeek ಉಪಕ್ರಮದ ಅಡಿಯಲ್ಲಿ "ಸಂವಿಧಾನದ ರಚನೆ"



ವಿಠ್ಠಲಭಾಯಿ ಪಟೇಲ್

# ಸ್ವಾತಂತ್ರ್ಯ ಚಳವಳಿಯ ಪ್ರಮುಖ ನಾಯಕ

**ಜನನ: 27 ಸೆಪ್ಟೆಂಬರ್ 1873 | ನಿಧನ: 22ನೇ ಅಕ್ಟೋಬರ್ 1933**

ವಿಠ್ಠಲಭಾಯಿ ಪಟೇಲ್ ಅವರು 1873ರಲ್ಲಿ ಗುಜರಾತಿನ ಖೇಡಾ ಜಿಲ್ಲೆಯ ಕರಮ್ಸಾದ್ ಗ್ರಾಮದಲ್ಲಿ ಜನಿಸಿದರು. ಐವರು ಸಹೋದರರಲ್ಲಿ ವಿಠ್ಠಲಭಾಯಿ ಪಟೇಲ್ ಮೂರನೆಯವರಾಗಿದ್ದರು. ಅವರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತು ದೇಶದ ಏಕೀಕರಣಕ್ಕೆ ಮಾರ್ಗದರ್ಶನ ಮಾಡಿದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಹಿರಿಯ ಸಹೋದರರಾಗಿದ್ದರು. ಕರಮ್ಸಾದ್ ಮತ್ತು ನಾಡಿಯಾಡ್ ನಲ್ಲಿ ಅವರು ತಮ್ಮ ಆರಂಭಿಕ ಶಿಕ್ಷಣ ಪೂರೈಸಿದರು. ಇಬ್ಬರೂ ಸಹೋದರರು ಬ್ಯಾರಿಸ್ಟರ್ ಗಳಾಗುವ ಕನಸನ್ನು ಹೊಂದಿದ್ದರು ಮತ್ತು ಅವರು ಹೆಚ್ಚಿನ ಅಧ್ಯಯನಕ್ಕಾಗಿ ಲಂಡನ್ ಗೆ ಹೋಗಲು ಬಯಸಿದ್ದರು. ಆದರೆ, ವಿಠ್ಠಲಭಾಯಿ ಪಟೇಲ್ ಅವರಿಗೆ ಈ ಅವಕಾಶ ಮೊದಲೇ ಸಿಕ್ಕಿತು, ಅವರು ಇಂಗ್ಲೆಂಡ್ ಗೆ ಹೋದರು. ವಿಠ್ಠಲಭಾಯಿ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರಿಂದ, ಲಂಡನ್ ನಲ್ಲಿ 36ತಿಂಗಳ ಕೋರ್ಸ್ ಅನ್ನು 30 ತಿಂಗಳಲ್ಲಿ ಪೂರ್ಣಗೊಳಿಸಿದರು ಮತ್ತು ತರಗತಿಯಲ್ಲಿ ಅಗ್ರಸ್ಥಾನ ಪಡೆದರು. 1913ರಲ್ಲಿ ಗುಜರಾತಿಗೆ ಹಿಂದಿರುಗಿದ ವಿಠ್ಠಲಭಾಯಿ ಮುಂಬಯಿ ಮತ್ತು ಅಹಮದಾಬಾದ್ ನ್ಯಾಯಾಲಯಗಳಲ್ಲಿ ಪ್ರಮುಖ ಬ್ಯಾರಿಸ್ಟರ್ ಆದರು. ಕಾನೂನಿನ ಅನುಭವಿಯಾಗಿದ್ದ ಅವರು ಅಲ್ಪಾವಧಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡರು. ಅವರ ಪತ್ನಿ 1915ರಲ್ಲಿ ನಿಧನರಾದರು, ಆದರೆ ಅವರು ಮತ್ತೆ ಮದುವೆಯಾಗಲಿಲ್ಲ. ವಿಠ್ಠಲಭಾಯಿ ಪಟೇಲ್ ಅವರು ಕೇಂದ್ರ ಸಂವಿಧಾನ ರಚನಾ ಸಭೆಯ ಮೊದಲ ಚುನಾಯಿತ ಅಧ್ಯಕ್ಷರಾಗಿದ್ದರು. ಅವರು ಮುಂಬೈನ ಮೇಯರ್ ಆದರು. ಗಾಂಧಿಜೀ ಅವರೊಂದಿಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ವಿಠ್ಠಲಭಾಯಿ ಕಾಂಗ್ರೆಸ್ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಸೇರಿಕೊಂಡರು. ಅವರು 1920 ರ ದಶಕದಲ್ಲಿ ಮತ್ತು ನಂತರ ಕಾಂಗ್ರೆಸ್ ನ ಪ್ರಮುಖರಲ್ಲಿ ಒಬ್ಬರಾಗಿದ್ದರು. ಅನೇಕ ಬಾರಿ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷರಿಂದ ಬಂಧನಕ್ಕೂ ಒಳಗಾದರು. ಆದರೆ, 1922ರಲ್ಲಿ ಚೌರಿಚೌರಾ ಘಟನೆಯ ನಂತರ ಗಾಂಧೀಜಿ ಅಸಹಕಾರ ಚಳವಳಿಯನ್ನು ರದ್ದುಗೊಳಿಸಿದಾಗ ವಿಠ್ಠಲಭಾಯಿ ಅವರು ತುಂಬಾ ನಿರಾಶೆಗೊಂಡರು. ಅವರು ಕಾಂಗ್ರೆಸ್ ತೊರೆದು ಚಿತ್ತರಂಜನ್ ದಾಸ್ ಮತ್ತು ಮೋತಿಲಾಲ್ ನೆಹರು ಅವರೊಂದಿಗೆ ಸ್ವರಾಜ್ ಪಕ್ಷವನ್ನು ಸ್ಥಾಪಿಸಿದರು. ವಿಠ್ಠಲಭಾಯಿ ಅವರನ್ನು 1932ರಲ್ಲಿ ಜೈಲಿಗೆ ಹಾಕಲಾಯಿತು. ಬ್ರಿಟಿಷರು ಆರೋಗ್ಯದ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡಿದರು. ಅವರು ಮಾರ್ಚ್ 1932ರಲ್ಲಿ ಭಾರತವನ್ನು ತೊರೆದರು. ವಿಠ್ಠಲಭಾಯಿ ಅನಾರೋಗ್ಯದಿಂದ ನಂತರ ನಿಧನಹೊಂದಿದರು ಮತ್ತು ಅವರು ತಮ್ಮ ಉಯಿಲಿನಲ್ಲಿ ಮೂರನೇ ಎರಡರಷ್ಟು ಭಾಗವನ್ನು ಸುಭಾಷ್ ಚಂದ್ರ ಬೋಸ್ ಅವರಿಗೆ ನೀಡಿದ್ದರು. ಆದರೆ, ಇದು ವಲ್ಲಭಭಾಯಿ ಪಟೇಲ್ ಮತ್ತು ಸುಭಾಷ್ ಚಂದ್ರ ಬೋಸ್ ನಡುವಿನ ಸಂಬಂಧದಲ್ಲಿ ಒಡಕಿಗೆ ಕಾರಣವಾಯಿತು. ಉಯಿಲಿನ ಮೂಲ ಪ್ರತಿಯನ್ನು ವಲ್ಲಭಭಾಯಿಗೆ ತೋರಿಸಿದಾಗ, ಅವರು ಉಯಿಲಿನ ಸಹಿಯ ದೃಢೀಕರಣದ ಬಗ್ಗೆ ಅನೇಕ ಪ್ರಶ್ನೆಗಳನ್ನು ಎತ್ತಿದರು. ನಂತರ ಸರ್ದಾರ್ ಪಟೇಲ್ ಈ ಪ್ರಕರಣದಲ್ಲಿ ಗೆದ್ದರು ಮತ್ತು ಅವರು ವಿಠ್ಠಲಭಾಯಿ ಅವರ ಹೆಸರಿನಲ್ಲಿ ಟ್ರಸ್ಟ್ ಅನ್ನು ಸ್ಥಾಪಿಸಿದರು ಮತ್ತು ಆ ಟ್ರಸ್ಟ್ ಗೆ ಇಡೀ ಆಸ್ತಿಯನ್ನು ವರ್ಗಾಯಿಸಿದರು. ಈ ಟ್ರಸ್ಟ್ ಸಮಾಜ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿದೆ.

ಮತ್ತು ವರ್ಚುವಲ್ ಫಿಲ್ಮ್ ಪೋಸ್ಟರ್ ಪ್ರದರ್ಶನ ಚಿತ್ರಾಂಜಲಿ @ 75ರ ಇ-ಫೋಟೋ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಈ ವಸ್ತು ಪ್ರದರ್ಶನವು ಸಾರ್ವಜನಿಕ ಪಾಲ್ಗೊಳ್ಳುವಿಕೆಯ ಕಡೆಗೆ ಒಂದು ಹೆಜ್ಜೆಯಾಗಿದೆ, ಇದು ದೇಶದ ಯುವಜನರಿಗೆ ಸಂವಿಧಾನದ ಬಗ್ಗೆ ತಿಳಿದುಕೊಳ್ಳಲು ಪ್ರೋತ್ಸಾಹಿಸುವುದಲ್ಲದೆ, ಅವರ ಹಕ್ಕುಗಳ ಬಗ್ಗೆ ಅವರಿಗೆ ಶಿಕ್ಷಣ ನೀಡುತ್ತದೆ ಮತ್ತು ರಾಷ್ಟ್ರದ ಬಗ್ಗೆ ಅವರ ಕರ್ತವ್ಯಪ್ರಜ್ಞೆಯ ಬಗ್ಗೆ ಅರಿವು ಮೂಡಿಸುತ್ತದೆ. ಚಿತ್ರಾಂಜಲಿ @75 ಸ್ವಾತಂತ್ರ್ಯ ಹೋರಾಟಗಾರರ ಶೌರ್ಯ ಮತ್ತು ತ್ಯಾಗವನ್ನು ಪ್ರದರ್ಶಿಸುವ ಮೂಲಕ ಭಾರತೀಯ ಸಿನೆಮಾದ ರಾಷ್ಟ್ರದ ಪಯಣವನ್ನು ಚಿತ್ರಿಸುತ್ತದೆ. ಇದು 75 ವರ್ಷಗಳ ಭಾರತೀಯ ಸಿನೆಮಾವನ್ನು ಪ್ರತಿನಿಧಿಸುತ್ತದೆ ಮತ್ತು ಇದು ನಮ್ಮ ಸ್ವಾತಂತ್ರ್ಯ ಹೋರಾಟಗಾರರು, ನಮ್ಮ ಸಮಾಜ ಸುಧಾರಕರು ಮತ್ತು ನಮ್ಮ ಸೈನಿಕರ ಶೌರ್ಯದ ಪವಿತ್ರ ನೆನಪುಗಳನ್ನು ಮರುಕಳಿಸುವಂತೆ ಮಾಡುತ್ತದೆ. ನಮ್ಮ ಸಾಂಸ್ಕೃತಿಕ ಪರಂಪರೆಯ ಭಾಗವಾಗಿ ನಮ್ಮ ಚಲನಚಿತ್ರಗಳನ್ನು ನೋಡಲು ಒಂದು ಅವಕಾಶವಾಗಿರುವ ಈ ಪೋಸ್ಟರ್ ಪ್ರದರ್ಶನದಲ್ಲಿ ಅಂತಹ 75ಪ್ರಸಿದ್ಧ ಚಲನಚಿತ್ರಗಳನ್ನು ಸೇರಿಸುವ ಪ್ರಯತ್ನ ಮಾಡಲಾಗಿದೆ. ಮತ್ತೊಂದೆಡೆ, ಸಂವಿಧಾನ ರಚನೆಯ ಇ-ಪುಸ್ತಕವು ಅಪರೂಪದ ಛಾಯಾಚಿತ್ರಗಳೊಂದಿಗೆ ಸಂವಿಧಾನ ರಚನೆ ಪ್ರಕ್ರಿಯೆಯನ್ನು ಕಟ್ಟಿಕೊಡುತ್ತದೆ. ಇದು ಆಕಾಶವಾಣಿಯ ಧ್ವನಿ ಭಂಡಾರದಿಂದ ಮತ್ತು ಚಲನಚಿತ್ರ ವಿಭಾಗದಿಂದ ತೆಗೆದುಕೊಂಡ ವೀಡಿಯೊಗಳು ಮತ್ತು ಭಾಷಣಗಳ ಲಿಂಕ್ ಗಳನ್ನು ಸಹ ಒಳಗೊಂಡಿದೆ. ಹಿಂದಿ ಮತ್ತು ಇಂಗ್ಲಿಷ್ ಜೊತೆಗೆ 11 ಪ್ರಾದೇಶಿಕ ಭಾಷೆಗಳಲ್ಲಿ ಇದು ಲಭ್ಯವಿದೆ. ಭಾರತದ ಸಂವಿಧಾನದ ಸ್ಥಾಪನಾ ತತ್ವಗಳನ್ನು ಪ್ರಚಾರ ಮಾಡುವ ಪ್ರಯತ್ನಗಳಲ್ಲಿ ಪಾಲುದಾರರಾಗಲು ಯುವಕರನ್ನು ಉತ್ತೇಜಿಸಲು ಸರ್ಕಾರ ಶೀಘ್ರದಲ್ಲೇ 'ನಿಮ್ಮ ಸಂವಿಧಾನವನ್ನು ಅರಿಯಿರಿ' ಕಾರ್ಯಕ್ರಮವನ್ನು ಪ್ರಾರಂಭಿಸಲಿದೆ.






# ಇತರರಿಗೆ ಸ್ಫೂರ್ತಿಯಾಗುತ್ತಿರುವ ಯುವಕರು

**ಯುವಕರು ಸೂಕ್ತವಾದ ಕಾರಣಗಳಿಗಾಗಿ ಪ್ರಾಧಾನ್ಯ ಪಡೆಯುತ್ತಿದ್ದಾರೆ. ಎಲ್ಲಾ ಅಡೆತಡೆಗಳ ವಿರುದ್ಧ ಹೋರಾಡುತ್ತಿರುವ ಅವರು ಇಂದು ನಾಯಕರಾಗಿ ಹೊರಹೊಮ್ಮುತ್ತಿದ್ದಾರೆ. ಅವರ ಧೈರ್ಯ, ದೃಢನಿಶ್ಚಯ, ಆತ್ಮವಿಶ್ವಾಸ ಮತ್ತು ಪರಿಶ್ರಮವು ಹಲವಾರು ಹೊಸ ಶೋಧಗಳಿಗೆ ಆವಿಷ್ಕಾರಗಳಿಗೆ ಕಾರಣವಾಗಿದೆ, ಇದು ಜನರ ಜೀವನದಲ್ಲಿ ದೊಡ್ಡ ವ್ಯತ್ಯಾಸವನ್ನು ಉಂಟುಮಾಡುತ್ತಿದೆ. ಒಮ್ಮೆ ಅವರು ಬದಲಾವಣೆಯನ್ನು ತರಲು ನಿರ್ಧರಿಸಿದ ನಂತರ, ಅಕ್ಷರಶಃ ಅವರನ್ನು ತಡೆಯಲು ಯಾವುದಕ್ಕೂ ಸಾಧ್ಯವಿಲ್ಲ. ಸ್ಟೀವನ್ ಹ್ಯಾರಿಸ್ ಮತ್ತು ಅಮಿತ್ ಸೆಹ್ರಾವತ್ ರಂತಹ ಯುವಕರು ತಮ್ಮ ಕಾರ್ಯದೊಂದಿಗೆ ಆದರ್ಶವಾಗಿರುವುದಲ್ಲದೆ, ಇತರರಿಗೆ ಏನನ್ನಾದರೂ ಮಾಡಲು ಪ್ರೇರೇಪಣೆಯಾಗಿದ್ದಾರೆ.**



## ಉದಯೋನ್ಮುಖ ಕಲಾವಿದ ಸ್ಟೀವನ್ ಹ್ಯಾರಿಸ್ ಗೆ ಪ್ರಧಾನಮಂತ್ರಿ ಮೋದಿ ಮೆಚ್ಚುಗೆ

ಅದ್ಭುತ ಚಿತ್ರಕಲಾವಿದ ಬೆಂಗಳೂರಿನ ವಿದ್ಯಾರ್ಥಿ ಸ್ಟೀವನ್ ಹ್ಯಾರಿಸ್ ಅವರ ಪ್ರತಿಭೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಅವರ ವರ್ಣಚಿತ್ರಗಳಿಂದ ಪ್ರಭಾವಿತರಾದ ಪ್ರಧಾನಮಂತ್ರಿ ಸ್ಟೀವನ್ ಅವರಿಗೆ ಪ್ರೋತ್ಸಾಹದಾಯಕ ಪತ್ರ ಬರೆದಿದ್ದಾರೆ. 20 ವರ್ಷದ ಉದಯೋನ್ಮುಖ ಕಲಾವಿದ ಪ್ರಧಾನಮಂತ್ರಿಯ ಎರಡು ಸುಂದರ ವರ್ಣಚಿತ್ರಗಳನ್ನು ಅವರಿಗೆ ಪತ್ರದ ಜೊತೆಗೆ ಕಳುಹಿಸಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಸೃಜನಶೀಲ ಕ್ಷೇತ್ರಗಳಲ್ಲಿ ಯುವಜನರ ಆಸಕ್ತಿ ಮತ್ತು ಸಮರ್ಪಣೆಯನ್ನು ನೋಡಿ ಪ್ರಧಾನಮಂತ್ರಿಯವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. "ನಿಮ್ಮ ವರ್ಣಚಿತ್ರಗಳು ವಿಷಯಗಳ ಬಗ್ಗೆ ನಿಮ್ಮ ಆಳವಾದ ಮೆಚ್ಚುಗೆಯನ್ನು ಪ್ರತಿಬಿಂಬಿಸುತ್ತವೆ" ಎಂದು ಪ್ರಧಾನಮಂತ್ರಿ ಬರೆದಿದ್ದಾರೆ. ಸೂಕ್ಷ್ಮವಾಗಿ ಕಾರ್ಯಗತಗೊಳಿಸಿದ ಸೂಕ್ಷ್ಮ ಅಭಿವ್ಯಕ್ತಿಗಳು ಹೃದಯಸ್ಪರ್ಶಿಯಾಗಿವೆ." ಸಮಾಜದಲ್ಲಿ ಸಕಾರಾತ್ಮಕತೆಯನ್ನು ಹರಡುವ ಸ್ಟೀವನ್ ಅವರ ಪ್ರಯತ್ನಗಳು ಇತರರಿಗೂ ಸ್ಫೂರ್ತಿ ನೀಡುತ್ತವೆ ಎಂದು ಪ್ರಧಾನಮಂತ್ರಿ ಭರವಸೆ ವ್ಯಕ್ತಪಡಿಸಿದ್ದಾರೆ. ಸ್ಟೀವನ್ ತಾವು ಕಳೆದ 15 ವರ್ಷಗಳಿಂದ ಚಿತ್ರಕಲೆಯಲ್ಲಿ ತೊಡಗಿದ್ದು, ವಿವಿಧ ಹಂತಗಳಲ್ಲಿ 100 ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗೆದ್ದಿರುವುದಾಗಿ ಪ್ರಧಾನಮಂತ್ರಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಪ್ರಧಾನಮಂತ್ರಿ ಮೋದಿ ತಮ್ಮ ಸ್ಫೂರ್ತಿ ಎಂದು ಸ್ಟೀವನ್ ಬಣ್ಣಿಸಿದ್ದಾರೆ. ಕೊರೊನಾ ವಿರುದ್ಧದ ಹೋರಾಟದಲ್ಲಿ ಭಾರತದ ಲಸಿಕೆ ಅಭಿಯಾನವನ್ನು ಅವರು ಶ್ಲಾಘಿಸಿದ್ದಾರೆ.



## ಪ್ರತಿ ಯೂನಿಟ್ ವಿದ್ಯುತ್ ಗೆ ಒಂದು ರೂಪಾಯಿ!

ಭಾರತದಲ್ಲಿ ಹೊಸ ನವೋದ್ಯಮಗಳು ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ಹೆಗ್ಗುರುತು ಮೂಡಿಸುತ್ತಿವೆ. ಅವರ ಯಶೋಗಾಥೆಗಳು ಗ್ರಾಮೀಣ ಪ್ರದೇಶದ ಜನರಿಗೆ ಸ್ಫೂರ್ತಿದಾಯಕವಾಗಿವೆ. ಅಂತಹ ಒಂದು ಆವಿಷ್ಕಾರವನ್ನು ಉತ್ತರ ಪ್ರದೇಶ ಜಲ ನಿಗಮ್‌ನ ಕಾರ್ಯನಿರ್ವಾಹಕ ಎಂಜಿನಿಯರ್ ಅಮಿತ್ ಸೆಹ್ರಾವತ್ ಮತ್ತು ಅವರ ಸಹಯೋಗಿ ರಾಮಾನುಜ್ ತಿವಾರಿ ಅಭಿವೃದ್ಧಿಪಡಿಸಿದ್ದಾರೆ. ಗಾಳಿ ಮತ್ತು ನೀರಿನಿಂದ ವಿದ್ಯುತ್ ಉತ್ಪಾದಿಸುವ ಯಂತ್ರವನ್ನು ಇವರಿಬ್ಬರೂ ವಿನ್ಯಾಸಗೊಳಿಸಿದ್ದಾರೆ. ಸೆಹ್ರಾವತ್ ಈ ಯಂತ್ರಕ್ಕೆ ಜಿಬಿಪಿ ಸ್ಥಾವರ ಎಂದು ಹೆಸರಿಟ್ಟಿದ್ದಾರೆ. ಈ ಘಟಕದಿಂದ ಉತ್ಪತ್ತಿಯಾಗುವ ಪ್ರತಿ ಯೂನಿಟ್ ವಿದ್ಯುತ್ ವೆಚ್ಚ ಕೇವಲ ಒಂದು ರೂಪಾಯಿ ಆಗುತ್ತದೆ ಎಂದು ಸಂಶೋಧಕರು ಹೇಳುತ್ತಾರೆ. ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳಂತೆ, ಇದು ಪರಿಸರವನ್ನು ಕಲುಷಿತಗೊಳಿಸುವುದಿಲ್ಲ. ಕಳೆದ ಆರು ತಿಂಗಳುಗಳಿಂದ ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಸೆಹ್ರಾವತ್ ಮತ್ತು ತಿವಾರಿ ಇಬ್ಬರೂ ವಿದ್ಯುತ್ ಉತ್ಪಾದಿಸಲು ಯಾವುದೇ ಇಂಧನ ಅಥವಾ ಪಳೆಯುಳಿಕೆ ಇಂಧನವನ್ನು ಬಳಸುವುದಿಲ್ಲ ಎಂದು ಹೇಳುತ್ತಾರೆ. ಜಿಬಿಪಿ ಸ್ಥಾವರದ ಬಗ್ಗೆ ಮಾತನಾಡಿದ ಅವರು, ಇದು ಜಲಾಂತರ್ಗಾಮಿಗಳ ತತ್ವದ ಮೇಲೆ ಕಾರ್ಯನಿರ್ವಹಿಸುತ್ತದೆ ಮತ್ತು ಪ್ರತಿ ಯೂನಿಟ್ ಗೆ ಕೇವಲ 1ರೂ. ದರದಲ್ಲಿ ರೈತರಿಗೆ ವಿದ್ಯುತ್ ಪೂರೈಸಲು ಸಾಧ್ಯವಿದೆ ಎಂದು ಹೇಳುತ್ತಾರೆ. ಈ ಆವಿಷ್ಕಾರವು ವಾಣಿಜ್ಯಾತ್ಮಕವಾಗಿ ಕಾರ್ಯಸಾಧ್ಯವೆಂದು ಸಾಬೀತಾದರೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮನಿರ್ಭರ್ ಭಾರತ್ ಅಭಿಯಾನಕ್ಕೆ ಉತ್ತೇಜನ ನೀಡುತ್ತದೆ.



**Narendra Modi** @nar...

हमारी सोच होनी चाहिए- इतिहास से सीखकर वर्तमान को सुधारने की, एक नया भविष्य बनाने की।

इसीलिए, जब मैं 'भारत जोड़ो आंदोलन' की बात करता हूं तो उसका भाव केवल भौगोलिक या वैचारिक जुड़ाव तक सीमित नहीं है।

यह भविष्य के भारत के निर्माण के लिए हमें अपने अतीत से जोड़ने का भी संकल्प है।



**रक्षा मंत्री कार्यालय/ RMO...**

जिस गति से हमारी industries आगे बढ़ रही हैं, रक्षा उत्पादन में अपना योगदान दे रही है, export दिन-ब-दिन बढ़ रहे हैं, मुझे पूर्ण विश्वास है कि जल्दी ही, उसी अख़बार में लिखा होगा, "India as Defence Manufacturing Hub for the World": रक्षा मंत्री



**Amit Shah** @AmitShah

विकास के काम भी महत्वपूर्ण हैं वो तो चलने ही चाहियें लेकिन अगर व्यक्ति ही कुपोषित रह जाता है तो बाकि सभी सुविधाओं का कोई औचित्य नहीं है।

लोकतंत्र में सबसे महत्वपूर्ण है निर्बल, गरीब, पिछड़ों व महिलाओं का सशक्तिकरण और बच्चों को उनका अधिकार देना।



**Nitin Gadkari** @nitin_gadkari ·

बिहार के विभिन्न राष्ट्रीय राजमार्गों पर तेज़ी से काम चल रहा है। 'राम जानकी मार्ग' के लिए हम बिहार से होते हुए नेपाल तक सड़क बना रहे हैं।
#PragatiKaHighway @NitishKumar @RajKSinghIndia @girirajsinghbjp @rsprasad



**NSitharamanOffice** @nsith... · 3d ···

Out of every 100 Jan Dhan accounts, 55 belong to women. The main beneficiaries of PMJDY are women. In those areas where bank branches are not possible, the Bank Mitras do the job of providing banking services: Smt @nsitharaman in Tripura #PMJanDhan



**Piyush Goyal** @PiyushGoyal ·

राष्ट्रीय खाद्य सुरक्षा अधिनियम के लाभार्थियों के लिये One Nation, One Ration Card योजना प.बंगाल व दिल्ली सहित 34 राज्यों में लागू हो गयी है।

आप play.google.com/store/apps/det... लिंक द्वारा 'Mera Ration' मोबाइल ऐप डाउनलोड कर इसका अधिकतम लाभ उठा सकते हैं।

# In Mann ki Baat, Modi urges people to cherish and preserve Sanskrit

**HT Correspondent**
letters@hindustantimes.com

**NEW DELHI:** Prime Minister Narendra Modi on Sunday said "Sanskrit helps nurture knowledge and also national unity, strengthens it".

Addressing the 80th edition of his monthly radio programme 'Mann ki Baat', Prime Minister Modi said, "Through its thoughts and medium of literary texts, Sanskrit helps nurture knowledge and also national unity, strengthens it. Sanskrit literature comprises the divine philosophy of humanity and knowledge which can captivate anyone's attention."

He also drew the country's attention to the popularity that Sanskrit enjoys across the world."It is taught across the world from Ireland to Thailand, from Russia to Sydney."

"Sanskrit language also plays an important role in the strengthening of cultural relations between India and Ireland and between India and Thailand here in the east. Dr Chirapat Prapandavidya and Dr Kusuma Rakshamani, both of them are playing a very important role in the promotion of the Sanskrit language in Thailand... Another such professor is Shriman Boris Zakharin, who teaches Sanskrit at Moscow State University in Russia...," stated Prime Minister.

"It is our collective duty to cherish our heritage, preserve it, pass it on to the new generation.... and future generations also have a right to it..."

Commemorating the 116th birth anniversary of legendary



PM Narendra Modi

Hockey player Major Dhyanchand, which is celebrated as national sports day, the PM said: "We may win many laurels, but the nation has always craved for a win in Hockey. Major Dhyanchand showed us the way, now we must continue to progress."

The PM also highlighted the forays made by young Indian entrepreneurs in the field of space. "There are so many college, university students and those in the private sector who are laying the foundation for the new developments in space that will take place in the future."

Drawing attention to India's growing startup ecosystem, Modi said that the youngsters of today aren't and should not be afraid to take risks. "Just a little while ago, we were talking about India's stake in the toy market, now so many young entrepreneurs are working to innovate in the field." He also urged the country to continuously maintain its commitment to the Swacchh Bharat, or Clean India campaign and appreciated Indore and Sivaganga's (Tamil Nadu) contribution to the same.

*(with agency inputs)*

# PM: Start-up boom signals bright future for our country

## Pays tribute to Dhyan Chand in *Mann ki Baat*

**NEW DELHI, AUGUST 29**

Prime Minister Narendra Modi said on Sunday that the start-up culture had become very vibrant in India with youngsters in even smaller cities embracing it. He asserted that it was a sign of India's bright future.

In his monthly 'Mann ki Baat' radio broadcast, the PM also noted that space sector reforms in the country had caught people's imagination and expressed confidence that a large number of satellites in the coming days would be developed by youngsters from universities, labs and other sectors.

The Prime Minister touched upon a host of topics, including India's rich spiritual tradition and the boost the sporting culture had received after the performance in the Tokyo Olympics. He also paid



**MUSTN'T STOP MOMENTUM IN SPORTS**

"The Tokyo Olympics have created a major impact. Today, it is not that youngsters are just watching sports. They are also looking at possibilities associated with it. Let us all strive to further this momentum as much as we can. Narendra Modi, PM

August 29 to mark Dhyan Chand's birthday.

Noting that India won an Olympic medal in men's hockey after over four decades, he said youngsters were now drawn towards sports and their parents were happy to back them. "This itself is a great tribute to Dhyan Chand," Modi said.

The momentum the sporting culture had received must be further advanced, he said, calling for sports competitions at the village level. "Let us all countrymen strive to fur-

# Jan-Dhan accounts grew three-fold in seven years

**ENS ECONOMIC BUREAU** @New Delhi

AS the Pradhan Mantri Jan-Dhan Yojana completes seven years, it has been able to connect 43.04 crore of underprivileged persons to the banking system with their total deposits soaring to ₹1.46 lakh crore, the finance ministry said on Saturday.

"The journey of PMJDY led interventions undertaken over a short span of 7 years has in effect, produced both transfor-

success, Sitharaman said that the PMJDY accounts have grown three-fold from ₹14.72 crore in March 15 to ₹43.04 crore as on August 18 this year.

According to the finance ministry, women were major beneficiaries of the scheme as 55% Jan-Dhan account holders belong to this category and 67% Jan Dhan accounts are in rural and semi-urban areas.

Under the PM Garib Kalyan Yojana, a total of ₹30,945 crore have been credited in accounts

# Jallianwala Bagh has inspired countless revolutionaries: PM

**HT Correspondent**
letters@hindustantimes.com

**NEW DELHI:** Prime Minister Narendra Modi on Saturday virtually unveiled the renovated complex of the Jallianwala Bagh Memorial in Amritsar, saying it will inspire generations to learn about the history of the "holy place".

Addressing the nation, the PM referring to the Jallianwala Bagh Massacre, reiterated that "it's not



Narendra Modi

immortal story of our freedom struggle, due to which we are able to celebrate the Amrit Mahotsav of freedom today. On such an occasion, dedication of Jallianwala Bagh Memorial in the modern version in the 75th year of independence, is an opportunity of great inspiration for all of us," the PM said.

Calling it a "responsibility" of every nation to preserve its history, Modi, who is also the chairperson of Jallianwala Bagh Memorial Trust, said, "Therefore, India has decided to observe 14th August every year as 'Partition Horrors Remembrance Day'. India witnessed horrors like Jallianwala Bagh during the partition... The people of Punjab have been the biggest victims of Partition...," he said.

During the address, the PM also referred to India's efforts in evacuating its citizens from the crisis-hit Afghanistan and said that the current global conditions underline the importance of "Ek Bharat Shreshtha Bharat" and reinforces the need for "Atma-Nirbharta and Aatmvishwas". "If Indians are in trouble, anywhere in the world, then India stands up to help them with all its might... Hundreds of friends from Afghanistan are being brought to India under Operation Devi Shakti. Due to 'Guru Kripa', the government could bring the 'swaroop' of the holy Guru Granth Sahib along with people to India (from Afghanistan)," Modi said.

Expressing disappointment over freedom fighters from tribal communities not getting due place in history books, he said: "Our tribal community contributed greatly and made great sacrifices for freedom. Their contribution did not get as much place in the history books as it should have..."

# PM cautions against covid threat even as vaccination drive gathers steam

Staff Writer
feedback@livemint.com
NEW DELHI

Prime Minister Narendra Modi on Sunday reminded people to stay cautious about the coronavirus pandemic, even as India administered over 10 million vaccine doses on Friday.

"More than 62 crore (620 million) vaccine doses have been administered in the country, but still we have to be careful, be vigilant," Modi said in his monthly radio address *Mann ki Baat*, and urged people to get vaccinated and take precautions.

This comes ahead of upcoming festivals, and against the backdrop of Zydus's covid-19 vaccine becoming the fifth to get Indian government approval after Covishield, Covaxin, Sputnik V and the Moderna vaccine.

According to a statement from India's ministry of health and family welfare on Sunday, India's recovery rate was at 97.53%. 45,083 new cases were reported in the previous 24 hours, with active caseload at 368,558. Also, at 2.57%, daily positivity rate has remained less than 3% for the last 34 days.

"This is the time of the 75th year of our Independence. This



Prime Minister Narendra Modi called for the momentum gained in sports to be maintained after the success at the Olympics. PTI

year, we have to make new resolutions every day, think new, and bolster our spirit to do something new. [Only] when India completes one hundred years of Independence, [will] these resolutions of ours be seen in the foundation of its success. So, we should not let this opportunity pass. We have to contribute our maximum in this," Modi said.

The prime minister also spoke about sports gaining importance in the country, with India winning a medal in hockey at the Tokyo Olympics after 41 years.

"Friends, this time, the Olympics created a major impact...The Paralympics are on. Whatever our country earned in this world of sports may be little in comparison with the world, but enough has happened to bolster our belief. Today, it is not that the youth is just watching sports...the youth are also looking at possibilities associated with sports...observing the entire ecosystem minutely...comprehending its potential, wishing to connect with it in some way or the other," he said.

India sent its largest ever contingent of 127 athletes in 18 disciplines to Tokyo Olympics and registered its best performance till date in the global event. The men's hockey team won a bronze medal.

"Sports has begun to be discussed in every family...do tell me...should this momentum be allowed to subside, to halt now? No...not at all. Even you must be thinking on similar lines. In the country now, sports and games, sportsman spirit is not to stop," he said and added, "At home or elsewhere, in villages or cities, our playgrounds must be filled up. Let all play; let all bloom."

He also spoke about continuing with the cleanliness campaign, and the importance of skilled workers.

The PM referred to satellites being developed by Indian youth and students after the country opened up its space sector to private firms. "I firmly believe that in the coming days, a large number of satellites would be of those developed by our youth, our students, our colleges, our universities, students working in labs," he said.

RNI No. :
DELKAN/2020/78828
September, 16-30, 2021

ನ್ಯೂ ಇಂಡಿಯಾ ಸಮಾಚಾರ ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 13-17 advance Fortnightly (Publishing Date September 10, 2021, Pages - 44)

75 Azadi Ka Amrit Mahotsav

# ರಾಷ್ಟ್ರಗೀತೆಯಲ್ಲಿ ದಾಖಲೆಯ ಮೈಲಿಗಲ್ಲು

ಭಾರತವು ತನ್ನ ಸ್ವಾತಂತ್ರ್ಯದ 75ನೇ ವರ್ಷಕ್ಕೆ ಕಾಲಿಟ್ಟಿರುವಾಗ, ದೇಶದ ಸ್ವಾತಂತ್ರ್ಯಕ್ಕಾಗಿ ಮಹಾನ್ ವ್ಯಕ್ತಿಗಳು ನೀಡಿದ ಕೊಡುಗೆಗಳತ್ತ ಹಿಂತಿರುಗಿ ನೋಡಲು ಮತ್ತು ಸ್ಮರಿಸಲು ಇದು ಸೂಕ್ತ ಸಮಯವಾಗಿದೆ. ಅಮೃತ ಮಹೋತ್ಸವದ ಅಂಗವಾಗಿ ತಮ್ಮ ಹಿಂದಿನ 'ಮನ್ ಕಿ ಬಾತ್'ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು rashtragaan.in ವೆಬ್ ಸೈಟ್ ನಲ್ಲಿ ರಾಷ್ಟ್ರಗೀತೆ ಹಾಡುವ ತಮ್ಮ ವೀಡಿಯೊಗಳನ್ನು ಅಪ್ ಲೋಡ್ ಮಾಡುವಂತೆ ನಾಗರಿಕರಿಗೆ ಕರೆ ನೀಡಿದ್ದರು. ಆಗಸ್ಟ್ 15ರವರೆಗೆ ಸುಮಾರು 2 ಕೋಟಿ ಜನರು ತಮ್ಮ ವಿಡಿಯೋಗಳನ್ನು ಈ ವೆಬ್ ಸೈಟ್ ಮೂಲಕ ಅಪ್ಲೋಡ್ ಮಾಡಿದ್ದಾರೆ.

ಜನ-ಗಣ-ಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯ-ವಿಧಾತಾ
ಪಂಜಾಬ-ಸಿಂಧು-ಗುಜರಾತ-ಮರಾಠಾ
ದ್ರಾವಿಡ-ಉತ್ಕಲ-ವಂಗ
ವಿಂಧ್ಯ-ಹಿಮಾಚಲ-ಯಮುನಾ-ಗಂಗಾ
ಉಚ್ಛಲ-ಜಲಧಿ-ತರಂಗ
ತವ ಶುಭ ನಾಮೇ ಜಾಗೇ,
ತವ ಶುಭ ಆಶಿಷ ಮಾಂಗೇ,
ಗಾಹೇ ತವ ಜಯ-ಗಾಥಾ ।
ಜನ-ಗಣ-ಮಂಗಳ-ದಾಯಕ ಜಯ ಹೇ
ಭಾರತ ಭಾಗ್ಯ ವಿಧಾತಾ ।
ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ ಜಯ ಹೇ ।

"ಅಮೃತ ಮಹೋತ್ಸವದ ಕಾಲದಲ್ಲಿ ದೇಶ ಅದೆಷ್ಟೋ ಸ್ವಾತಂತ್ರ್ಯ ಹೋರಾಟಗಾರರು, ಮಹಾಪುರುಷರನ್ನು ಸ್ಮರಿಸುತ್ತಿದೆ. ಅಮೃತ ಮಹೋತ್ಸವಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಸರ್ಕಾರ ಮತ್ತು ಸಾಮಾಜಿಕ ಸಂಘಟನೆಗಳು ಸಹ ಆಯೋಜಿಸುತ್ತಿವೆ. ಅಮೃತಮಹೋತ್ಸವ ಯಾವುದೇ ಸರ್ಕಾರ ಅಥವಾ ಯಾವುದೇ ಪಕ್ಷದ ಕಾರ್ಯಕ್ರಮವಲ್ಲ. ಇದು ಕೋಟ್ಯಂತರ ಭಾರತೀಯರ ಕಾರ್ಯಕ್ರಮವಾಗಿದೆ.
-ನರೇಂದ್ರ ಮೋದಿ,
ಪ್ರಧಾನ ಮಂತ್ರಿ

ಸಂಪಾದಕರು
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
ಸತ್ಯೇಂದ್ರ ಪ್ರಕಾಶ್
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್ ಪರವಾಗಿ

ಪ್ರಕಾಶಕರು
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್
ಕೊಠಡಿ ಸಂ. 278, 2ನೇ ಮಹಡಿ, ಸೂಚನಾ ಭವನ,
ನವದೆಹಲಿ - 110003

ಮುದ್ರಣ:
ಇನ್‌ಫಿನಿಟಿ ಅಡ್ವಟೈಸಿಂಗ್ ಸರ್ವೀಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ-ಒನ್ ಕಾರ್ಪೊರೇಟ್ ಪಾರ್ಕ್, 10ನೇ ಮಹಡಿ
ನವದೆಹಲಿ-ಫರೀದಾಬಾದ್ ಬಾರ್ಡರ್, ಎನ್‌ಹೆಚ್-1, ಫರೀದಾಬಾದ್-121003

Kannada Vol. 2
Issue 6